ಮದುವೆ - ಜಾನಪದೀಯ ಅಧ್ಯಯನ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಎಂ. ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ದೀಪಾ ತಂದೆ ಮಾಣಿಕರಾವ

ಸಂಶೋಧನ ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು, ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ,

ಬೀದರ

ವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

ಸೆಪ್ಟೆಂಬರ - ೨೦೦೮

ಮದುವೆ-ಜಾನಪದೀಯ ಅಧ್ಯಯನ

(ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ದೀಪಾ ಮಾಣಿಕರಾವ

ಸಂಶೋಧನ ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

ಸೆಪ್ಟೆಂಬರ-೨೦೦೮

ಪ್ರಮಾಣ ಪತ್ರ

"ಮದುವೆ-ಜಾನಪದೀಯ ಅಧ್ಯಯನ" ಎಂಬ ನಿಬಂಧವನ್ನು ಡಾ. ಜಗನ್ನಾಥ ಹೆಬ್ಬಾಳೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೀದರ

ದಿನಾಂಕ : 22-9-08

22/9/08

ದೀಪಾ ಮಾಣಿಕರಾವ

ಎಂ.ಫಿಲ್ ವಿದ್ಯಾರ್ಥಿನಿ

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ

ಸಂಶೋಧನ ಕೇಂದ್ರ, ಬೀದರ

ಮಾರ್ಗದರ್ಶಕರ ಪ್ರಮಾಣ ಪತ್ರ

"ಮದುವೆ-ಜಾನಪದೀಯ ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ದೀಪಾ ಮಾಣಿಕರಾವ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಬೀದರ

ದಿನಾಂಕ : 23/9/08

ಡಾ. ಜಗನ್ನಾಥ ಹೆಬ್ಬಾಳೆ
ಮಾರ್ಗದರ್ಶಕರು,ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ
ಸಂಶೋಧನ ಕೇಂದ್ರ, ಬೀದರ

ಮದುವೆ–ಜಾನಪದೀಯ ಅಧ್ಯಯನ

ಪರಿವಿಡಿ

ಅಧ್ಯಾಯ–೧

ಮದುವೆಯ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಅಧ್ಯಾಯ-೧

ಮದುವೆಯ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಕರ್ನಾಟಕದ ಮದುವೆಯು ತನ್ನದೇ ಆದ ಇತಿಹಾಸ ಮತ್ತು ಉಜ್ವಲ ಪರಂಪರೆ ಹೊಂದಿದೆ. ಮದುವೆಯನ್ನು ಎಲ್ಲಾ ಧರ್ಮಗಳಲ್ಲಿ ಆಚರಿಸಲಾಗುತ್ತದೆ. ಹಿಂದೂ, ಮುಸ್ಲಿಂ, ಸಿಖ್ಖ, ಕ್ರೈಸ್ತ, ಬೌದ್ಧ, ಜೈನ, ಸರ್ವಧರ್ಮಗಳ ಉಜ್ವಲ ಧಾರ್ಮಿಕ ಪರಂಪರೆಯನ್ನು ಹೊಂದಿದೆ. ಮದುವೆಯು ತನ್ನದೇ ಆದ ಸ್ಥಾನವನ್ನು ಹೊಂದಿದೆ.

ಪ್ರಾಚೀನ ಕಾಲದಿಂದ ಮದುವೆಯು ತನ್ನದೇ ಆದ ಮಹತ್ವವನ್ನು ಪಡೆದಿದೆ. ಮದುವೆಯೆನ್ನುವುದು ಪ್ರತಿಯೊಬ್ಬರ ಜೀವನದಲ್ಲಿ ನಡೆಯುವ ಮಹತ್ವದ ಕಾರ್ಯವಾಗಿದೆ. ಪ್ರಪಂಚದಲ್ಲಿ ಒಂದಲ್ಲ ಒಂದು ವಿಧದ ಸಂಪ್ರದಾಯದ ಮದುವೆ ಆಚರಣೆಯಿದ್ದು ಹಿಂದಿನ ರಾಜ-ಮಹಾರಾಜರ ಕಾಲದಿಂದಲೂ ಮದುವೆಯ ಆಚರಣೆಯನ್ನು ಮಾಡಿಕೊಂಡು ಬರಲಾಗಿದೆ.

ಈ "ಮದುವೆ ಜಾನಪದೀಯ ಅಧ್ಯಯನ"ದ ಉದ್ದೇಶವೆಂದರೆ ಆಚರಣೆಗಳ ಹಿಂದೆ ಹುದುಗಿಕೊಂಡ ಇತಿಹಾಸ ಪರಂಪರೆ ಸಂಸ್ಕೃತಿ, ಧರ್ಮ, ಜನಪದ ಹಾಡು, ಕಥೆ ಒಟ್ಟು ಪರಿಚಯ ಕೊಡುವುದರ ಜೊತೆಗೆ ಹುದಗಿಕೊಂಡಂತಹ ಸತ್ಯ ಸಂಗತಿಯನ್ನು ಆಧಾರ ಸಹಿತ ಸಾಬೀತು ಪಡಿಸುವುದೇ ಆಗಿರುತ್ತದೆ.

ಪ್ರಾಚೀನ ಪರಂಪರೆಯಿಂದ ಮದುವೆಯ ಆಚರಣೆಯನ್ನು ಮಾಡುವುದರ ಜೊತೆಗೆ ಧಾರ್ಮಿಕ ಆಚರಣೆಗಳನ್ನು ಉಳಿಸಿಕೊಳ್ಳುವ ಹಿನ್ನೆಲೆಯಲ್ಲಿ ಅವುಗಳ ಅಧ್ಯಯನ ಹಾಗೂ ಸಂಶೋದನೆ ಅನಿವಾರ್ಯ ಎನಿಸಿಕೊಳ್ಳುತ್ತದೆ. ಈ ಕಾರ್ಯ ಆಚರಣೆಯ ಬಗ್ಗೆ ಅಧ್ಯಯನ ಮಾಡಿದರೆ ಸರಿಯಾಗುತ್ತದೆ ಎಂದು ಈ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಈ ಮದುವೆಯ ಆಚರಣೆಯಲ್ಲಿ ವಿಷಯವನ್ನು ತೆಗೆದುಕೊಳ್ಳುವ ಕಾರಣ ಏನೆಂದರೆ ನಾನು ಚಿಕ್ಕವಳಿದ್ದಾಗಿನಿಂದಲೂ ಮದುವೆಯ ಆಚರಣೆಯಲ್ಲಿ ಪುಸ್ತು ನಮ್ಮ ಮನೆಯಲ್ಲಿಯೇ ಅಣ್ಣ, ಅಕ್ಕನ ಮದುವೆಯ ಸಂಪ್ರದಾಯ ಮಾಡುವ ವಿಧಿ-ವಿಧಾನಗಳನ್ನು ನೋಡಿದ್ದೇನೆ. ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮುಂದಾಗುತ್ತಿದ್ದೇ ಮುಖ್ಯವಾಗಿ ಎಲ್ಲಾ ಧರ್ಮಗಳಲ್ಲಿ ಮದುವೆಯು

ನಡೆಯುತ್ತವೆ. ಆದರೆ ನಾನು ಮುಖ್ಯವಾಗಿ "ಲಿಂಗಾಯತ ಧರ್ಮದ ಮದುವೆಯ ಆಚರಣೆ ತೆಗೆದುಕೊಂಡಿದ್ದೇನೆ.

ನಾನು ಲಿಂಗಾಯತ ಧರ್ಮದಲ್ಲಿಯೇ ಹುಟ್ಟಿ-ಬೆಳೆದರಿಂದ ನಾನು ಈ ಧರ್ಮ ಆಚರಣೆಯ ಬಗ್ಗೆ ಹೆಚ್ಚಿನ ಆಸಕ್ತಿಯಾಗಿರುವುದರಿಂದ ಆ ಆಚರಣೆಗಳು ಮಾಡುವ ಮಹತ್ವವನ್ನು ತಿಳಿಯಲು ಆಸಕ್ತಿ ಮತ್ತು ಕುತೂಹಲವಿತ್ತು. ಚಿಕ್ಕಂದಿನಿಂದ ಇಂತಹ ಮದುವೆಯ ಆಚರಣೆಗಳ ಬಗ್ಗೆ ಅನೇಕ ಹಿರಿಯರೊಡನೆ ಚರ್ಚೆ ಮಾಡಿದಾಗ ಅನೇಕ ವಿಷಯಗಳು ಕಂಡುಕೊಳಲು ಸಾಧ್ಯವಾಯಿತು.

ಮದುವೆಯ ಆಚರಣೆಗಳಲ್ಲಿ ಅನೇಕ ಪದ್ಧತಿಗಳಿವೆ. ಮದುವೆಯನ್ನು ಮಾಡುವಾಗ ಮುಖ್ಯವಾಗಿ ಮೊದಲು ವರನು ವಧುವನ್ನು ನೋಡುವ ಪದ್ಧತಿ ನಂತರ ವರನ ಮನೆತನವನ್ನು ನೋಡುವುದು ನಂತರ ನಿಶ್ಚಯ ಮಾಡುವುದು, ನಂತರ ಸಕ್ಕರೆ ಕಾರ್ಯಕ್ರಮ ನಂತರ ಮದುವೆಯ ದಿನದಂದು ನಿಶ್ಚಯಿಸುವುದು. ಭಾಷುಣಕಿಯ ಕಾರ್ಯಕ್ರಮ ನಂತರ ಮದುವೆಯ ಹಿಂದಿನ ದಿನ ಭಾಷಣಕಿ ಕಾರ್ಯಕ್ರಮ ನಂತರ ಮರುದಿನ ಮದುವೆ ಆ ದಿನದಂದು

ಮೊದಲು ಕೆಲವು ಕಾರ್ಯಕ್ರಮಗಳನ್ನು ನಡೆಯುತ್ತವೆ. ಅವುಗಳಲ್ಲಿ ಮೊದಲು ಸುರಗಿ ನೀರು ಹಾಕುತ್ತಾರೆ, ದೇವರ ಕಾರ್ಯ ತೆಗೆಯುತ್ತಾರೆ. ಪೂಜೆ, ಕರಿಮಣಿ ಪೇಣಿಸುತ್ತಾರೆ. ಜಗಲಿ ಬಳಿ ಅಕ್ಷತಾ (ತಾಳಿ ಕಟ್ಟುತ್ತಾರೆ) ಮಾಂಗಲ್ಯಧಾರಣೆ, ಕಾಲು ಉಂಗುರ ಹಾಕುವುದು, ವಧುವಿನ ಸೋದರಮಾವ ಧಾರೆಯೆರೆಯುತ್ತಾರೆ. ನಂತರ ವಧುವಿಗೆ ವರನ ಮನೆಗೆ ಕರೆದೊಯುತ್ತಾರೆ. ಈ ರೀತಿಯಾಗಿ ಮದುವೆಯ ಆಚರಣೆಯನ್ನು ಮಾಡುತ್ತಾರೆ.

ನನ್ನ ಅಧ್ಯಯನದ ವಿಷಯವು ಮದುವೆಯ ಕುರಿತು ಅಧ್ಯಯನ ಮಾಡುತ್ತಿದ್ದೇನೆ ಈ ಎಲ್ಲ ವಿಷಯಗಳ ವೈಶಿಷ್ಟ್ಯತೆಗಳನ್ನು ಕೂಲಂಕುಶವಾಗಿ ಪರಿಶೀಲಿಸಬೇಕಾಗುತ್ತದೆ. ಆದ್ದರಿಂದ ನಾನು "ಮದುವೆ ಜಾನಪದೀಯ ಅಧ್ಯಯನ" ಅದರಲ್ಲಿಯು "ಲಿಂಗಾಯತ ಧರ್ಮದ" ಮದುವೆಯ ಆಚರಣೆಯನ್ನು ತೆಗೆದುಕೊಂಡಿದ್ದೇನೆ.

ಮದುವೆಯ ಸಂಪ್ರದಾಯಗಳಿಲ್ಲದೆ ಸಮಾಜವಿಲ್ಲ, ಸಂಸ್ಕೃತಿಯಿಲ್ಲ. ಅವು ಮಾನವನ ಬದುಕಿನ ಉದ್ದಗಲಕ್ಕೂ ಹರಡಿಕೊಂಡಿವೆ. ತಲೆತಲಾಂತರಗಳಿಂದ ಬಂದ ನಮ್ಮ ಹಿರಿಯರ ಧಾರ್ಮಿಕ ಪರಂಪರೆಯಾದ ಆಚಾರ-ವಿಚಾರ ನಡೆನುಡಿಗಳನ್ನು ಚಾಚುತಪ್ಪದೆ ಒಂದು ಕೇರಿ ಅಥವಾ ಒಂದು ಊರು ಅಥವಾ

ಒಂದು ನಾಡಿನಲ್ಲಿ ವಾಸಿಸುವ ಜನಸಮೂಹವು ಒಟ್ಟುಗೂಡಿ ಆಚರಿಸುವಾಗ ಉಂಟಾಗುವ ಸಂಸ್ಕೃತಿಯ ಮೊತ್ತವನ್ನು ಸಂಪ್ರದಾಯ ಎಂದು ಕರೆಯಬಹುದು.

ತಲೆಮಾರಿನಿಂದ ತಲೆಮಾರಿಗೆ ಸಮಾಜದಲ್ಲಿ ಮುಂದುವರಿಯುವ ವಿಶಿಷ್ಟ ವಿಧಿ, ಉಪಾಸನೆ ಮತ್ತು ಪದ್ಧತಿಗಳು ಇಲ್ಲಿ ಸೇರಿಕೊಂಡಿವೆ. ಇವುಗಳ ಒಟ್ಟು ಮೊತ್ತವನ್ನು ಮದುವೆಯ ಸಂಪ್ರದಾಯವನ್ನು ತಿಳಿಸಲು ಸಹಾಯವಾಗುತ್ತವೆ

ಮದುವೆಯ ಬಗ್ಗೆ ನಾವು ಆಧುನಿಕ ಮತ್ತು ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ ನಮ್ಮ ಪೂರ್ವಜರ ವಿಚಾರವನ್ನು ಮತ್ತು ಅವರ ಕಲ್ಪನಾಶಕ್ತಿಯನ್ನು ಮತ್ತುಮುಂದಿನ ದೂರದೃಷ್ಟಿಗಳು ನಮಗೆ ಸ್ಪಷ್ಟವಾಗಿ ತಿಳಿಯುತ್ತವೆ

ಪ್ರಪಂಚದ ಎಲ್ಲಾ ಜನರಲ್ಲಿಯು ಚಾಲ್ತಿಯಲ್ಲಿರುವ ಮದುವೆಯ ವ್ಯವಸ್ಥೆಯನ್ನು ಕೂಲಂಕುಷವಾಗಿ ತಿಳಿಯಲು ಸಹಾನುಭೂತಿಯಿಂದ ಪರಿಶೀಲಿಸಿದಾಗ ಅದರ ಮಹತ್ವವನ್ನು ತಿಳಿಯಲಾಗುತ್ತದೆ.

ಮಾನವನು ಮೊದಲು ಒಂದೇ ಸ್ಥಳದಲ್ಲಿ ನೆಲೆಯನ್ನು ಹೊಂದಿರಲಿಲ್ಲ. ಏಕೆಂದರೆ ಅವನು ಪ್ರಾರಂಭದಲ್ಲಿ ಗೊರಿಲ್ಲಾ ಮಂಗಗಳ ರೂಪದಲ್ಲಿ ಇದ್ದನು ನಂತರ ಕಾಲ ಗತಿಸಿದ ನಂತರ ಬದಲಾವಣೆ ಆದ ಹಾಗೆಯೆ ಅವನು ಮಾನವನಾಗುವುದಕ್ಕಿಂತ ಕ್ರೂರವಾದ ಪ್ರಾಣಿಯ ಹಾಗೆ ಹರಿದು ತಿನ್ನುತ್ತಿದ್ದನು. ಅವನು ಕಾಲಗತಿಸಿದ್ದಂತೆ ಒಂದು ಸ್ಥಿರವಾದ ನೆಲೆಯನ್ನು ಮತ್ತು ಸಂಘವನ್ನು ಕಟ್ಟಿಕೊಂಡನು. ಈ ಸಂಘಕಟ್ಟುವುದಕ್ಕಿಂತ ಮೊದಲು ಅವನು ಕಾಮದ ತೃಪ್ತಿಯ ಸಲುವಾಗಿ ಅವನ ವರ್ತನೆಯು ಕ್ರೂರಪ್ರಾಣಿಯ ಹಾಗೆ ಇತ್ತು. ಈ ರೀತಿಯಾಗುವುದರಿಂದ ಮನುಷ್ಯರಲ್ಲಿ ಪ್ರೀತಿ ಪ್ರೇಮ ಕರುಣೆ, ದಯೆ ಒಳ್ಳೆಯ ಬಾಂಧವ್ಯ ಕಾಣದೇ ಒಬ್ಬರಿಗೊಬ್ಬರು ಹೊಡೆದು ತಿನ್ನುವ ಸ್ವಭಾವವನ್ನು ಪ್ರಾರಂಭವಾಯಿತು. ನಂತರ ಕಾಲಗತಿಸಿದಂತೆ ಮಂಗ ಹೋಗಿ ಮಾನವನಾದನು. ಮಾನವನಾದ ನಂತರವೇ ಸಂಸ್ಥೆ ಸಮಾಜವನ್ನು ಕಟ್ಟಿಕೊಂಡನು.

ಸಂಸ್ಥೆ ಅಥವಾ ಸಮಾಜವನ್ನು ಕಟ್ಟಿಕೊಂಡ ನಂತರ ನಾವು ನಮ್ಮವರು ಬಂಧು ಬಳಗ ಅಕ್ಕ-ತಂಗಿ, ಅಮ್ಮ-ಅಪ್ಪ, ಅಣ್ಣ-ತಂಗಿ, ಅಣ್ಣ-ತಮ್ಮ.

ಈ ರೀತಿಯಾಗಿ ಸಂಬಂಧಗಳು ಒಂದಾಗಿ ಬೆಳೆಯಲು ಈ ಮದುವೆ ಎಂಬ ಪವಿತ್ರ ಬಂಧನವನ್ನು ಈ ಸಂಬಂಧವು ಒಳ್ಳೆಯ ರೀತಿಯಿಂದ ನಡೆಯಲು ಸಾಧ್ಯವಾಯಿತು.

ಮದುವೆ ಎಂಬ ಶಬ್ದವು ಹೇಳುವುದು ಸರಳವಾಗಿದೆ. ಈ ಮೂರು ಅಕ್ಷರದ ಪದದಲ್ಲಿ ಎಲ್ಲಾ ಬಂಧನಗಳು ಒಳಗೊಂಡಿವೆ. ಮದುವೆಯಾದ ನಂತರ ಜವಾಬ್ದಾರಿಗಳು ಹೆಚ್ಚಾಗುತ್ತವೆ.

ಮದುವೆಯನ್ನು ಮಾಡುವ ಉದ್ದೇಶವು ಅತ್ಯಂತ ಮಹತ್ವವನ್ನು ಪಡೆದುಕೊಂಡಿರುತ್ತದೆ.

ಮದುವೆಯ ಉದ್ದೇಶ

ಜೀವನ ಧರ್ಮಕ್ಕಾಗಿ ಮದುವೆ

ಮದುವೆಯು ಮಾಡುವುದು ಧರ್ಮದ ಅಡ್ಡಿಯಲ್ಲಿ ಸಮಾಜದ ಚೌಕಟ್ಟಿನಲ್ಲಿ ಜೀವನದ ಮುಂದಿನ ಬೆಳವಣಿಗೆಗೆ ಮದುವೆಯನ್ನು ಮಾಡುತ್ತಾರೆ. ಮದುವೆ ಮಾಡುವುದು ಹಿಂದಿನವರು ಮಾಡಿದ ವಂಶಾಭಿವೃದ್ಧಿಯು ತಮ್ಮ ಹಿರಿಯರು ತಮ್ಮ ಮಾಡಿದ ಹೆಸರನ್ನು ಉಳಿಸಲು ಮದುವೆಯನ್ನು ಮಾಡುತ್ತಾರೆ. ಮದುವೆಯು ಮಾಡಿದರೆ ಮುಂದಿನ ಜನಾಂಗದ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಹೇಳಬಹುದು ಧರ್ಮದ ಅಡ್ಡಿಯಲ್ಲಿಯೇ ಆಚಾರ-ಸಂಪ್ರದಾಯ ಇತ್ಯಾದಿಗಳ ಪಾಲನೆಗೋಸ್ಕರ ಮದುವೆಯು ಸಮಾಜದ ಚೌಕಟ್ಟಿನ ಅಡ್ಡಿಯಲ್ಲಿಯೇ ಸಾಧ್ಯ ಎಂದು ಜನಪದಿಯರ ವಿಚಾರವಾಗಿದೆ.

ಮದುವೆಯು ಗಂಡು-ಹೆಣ್ಣುಗಳ ಮಧ್ಯೆ ತಮ್ಮ ಬಾಳಿನ ಕೊನೆಯ ಉಸಿರಿನವರೆಗೂ ಅಂದರೆ ಸಹ ಜೀವನಕ್ಕಾಗಿ ಜರುಗುವ ಕೆಲವು ಒಪ್ಪಂದವಲ್ಲ ಅದಕ್ಕೆ ಬದಲಾಗಿ ಆಧ್ಯಾತ್ಮಿಕ ಮಹತ್ವವನ್ನು ನೀಡಲಾಗಿದೆ.

ಈ ಧರ್ಮದ ಅಡಿಯಲ್ಲಿಯೇ ಕೆಲವು ಮುಖ್ಯವಾಗಿ ಮದುವೆಯ ಉದ್ದೇಶವನ್ನು ತಿಳಿಸಲಾಗಿದೆ.

ಪ್ರಜಾ : ಈ ಧರ್ಮದ ಅಡಿಯಲ್ಲಿಯೇ ಪ್ರಜಾ, ಅಂದರೆ ಸಂತಾನ, ಮಕ್ಕಳನ್ನು ಪಡೆಯುವುದು ಈ ಪಡೆಯುವ ಉದ್ದೇಶ ತಮ್ಮ ಮನೆಯ ದೀಪ ಬೆಳಗಬೇಕು ಅಂದರೆ ತಮ್ಮ ಮನೆತನದ ವಂಶಾಭಿವೃದ್ಧಿಯಾಗಬೇಕು ಎಂಬ ಉದ್ದೇಶವಾಗಿರುತ್ತದೆ.

ರತಿ : ರತಿಯು ಮದುವೆ ಆದನಂತರ ಎಂದರೆ ಧರ್ಮದ ಹಾದಿಯಲ್ಲಿ ನಡೆಯುವ ಮುಖ್ಯವಾಗಿ ಮಾನವನ ಕಾಮತೃಪ್ತಿಯು ಅಥವಾ ಲೈಂಗಿಕ ಸುಖ ಇದರ ಮುಖ್ಯವಾದ ಉದ್ದೇಶವಾಗಿದೆ.

ಧರ್ಮ : ಮಾನವನ ಬೆಳವಣಿಗೆಯು ಈ ಧರ್ಮದ ಅಡಿಯಲ್ಲಿಯೆ ಮಹತ್ವವನ್ನು ಪಡೆದುಕೊಂಡಿದೆ. ಈ ಪ್ರಜಾ ಮತ್ತು ರತಿಯು ಈ ಧರ್ಮದ ಅಡಿಯಲ್ಲಿ ಮದುವೆಯ ಮುಖಾಂತರ ಪ್ರಾರಂಭವಾಗುತ್ತದೆ

ಮದುವೆಯು ಧರ್ಮದ ಅಡಿಯಲ್ಲಿಯು ಕೆಲವು ಪುರಾಣಗಳಲ್ಲಿ ಉದಾಹರಣೆಯನ್ನು ಸಹ ನೋಡಬಹುದಾಗಿದೆ. ಪಂಚಮಹಾಯಜ್ಞಗಳನ್ನು ಆಚರಿಸಲು ಅರ್ಹತೆಯನ್ನು ಪಡೆಯಬೇಕಾದರೆ ದಂಪತಿಗಳು ಆಗಿರಬೇಕು ಅದು ಮದುವೆಯಾದಾಗ ಮಾತ್ರ ದಂಪತಿಗಳು ಆಗಲು ಸಾಧ್ಯ.

ಮದುವೆಯ ಸಮಯದಲ್ಲಿ ಐರಾಣಿ ಕೊಡವನ್ನು ತರಲು ದಂಪತಿಗಳೆ ಮುಖ್ಯವಾಗಿ ಬೇಕಾಗುತ್ತದೆ.

ಮದುವೆಯ ನಂತರ ಮಕ್ಕಳನ್ನು ಪಡೆಯುವುದು ಬಹುಮುಖ್ಯವಾದದ್ದು ಮಕ್ಕಳು ಹುಟ್ಟಿದರೇ ಅದರಲ್ಲಿಯು ಗಂಡು ಮಗನ ಜನನದಿಂದಲೇ ಮೋಕ್ಷವನ್ನು ಸಾಧಿಸಲು ಸಾಧ್ಯ ಎಂದು ಹಿರಿಯರು ಹೇಳುತ್ತಾರೆ.

ಮದುವೆಯ ಆಚರಣೆಯು ಮೊದಲು ಮೂರು ದಿನ ಅಥವಾ ಒಂಬತ್ತು ದಿನಗಳವರೆಗೆ ಮದುವೆಯನ್ನು ಮಾಡುತ್ತಿದ್ದರು ಆ ದಿನಗಳಲ್ಲಿ ಅವರು ಅನೇಕ ಸಂಪ್ರದಾಯ ವಿಧಿ-ಆಚರಣೆ, ಸಂಗೀತ, ಹಾಡುಗಳ ಮುಖಾಂತರವೇ ಮನೋರಂಜನೆಯನ್ನು ಪಡೆಯುತ್ತಿದ್ದರು. ಈ ಸಮಯದಲ್ಲಿ ಮದುವೆಯು ಎರಡು ದಿನಗಳಲ್ಲಿ ಎಲ್ಲಾ ಸಂಪ್ರದಾಯಗಳು ಮುಗಿಯುತ್ತವೆ.

ಮದುವೆಯನ್ನು ಮಾಡಿಕೊಳ್ಳಬೇಕು ಆದರೆ ಯಾರನ್ನು ? ಹೆಣ್ಣು ಮಗಳನ್ನು ಮದುವೆಯ ಸಂಬಂಧ ಮಾಡುವಾಗ ಆಕೆಯು ಸಂಬಂಧಿಕರ ಹುಡುಗಿ - ಹುಡುಗ ಆದರೆ ಅತ್ತೆಯ ಮಗಳು ಅಥವಾ ಮಗ ಸೋದರ ಮಾವನ ಮಗಳು ಅಥವಾ ಮಗ, ಅಕ್ಕನ ಮಗಳು ಮುಂತಾದವು ಈ ಸಂಬಂಧಗಳಲ್ಲಿ ಮದುವೆಯನ್ನು ಮಾಡಿಕೊಳ್ಳಬಹುದು ಇಲ್ಲ ಅಂದರೆ ಹೊರಗಿನ ಸಂಬಂಧವನ್ನು ಸಹ ಮದುವೆಯಾಗಬಹುದು ಇದು ಸಹ ಧರ್ಮದ ಅಡಿಯಲ್ಲಿ ನಡೆಯುತ್ತದೆ.

ಮದುವೆಯು ಕಾಮಕ್ಕೆ ಅಷ್ಟೇ ಮಹತ್ವವನ್ನು ಕೊಡದೇ ಆತ್ಮಿಕಕ್ಕೂ ಮಹತ್ವವನ್ನು ಕೊಡಲಾಗಿದೆ. ಈ ಸಂಬಂಧದಲ್ಲಿ ಮದುವೆಯನ್ನು ಮಾಡಿಕೊಂಡ (ಹೆಣ್ಣು ಮಗಳು ಗಂಡನ ಮನೆಗೆ) ಹೆಣ್ಣುಮಗಳು ತವರು ಮನೆಯಿಂದ (ಗಂಡನ ಮನೆಗೆ) ಅತ್ತೆಯ ಮನೆಗೆ ಸೊಸೆಯಾಗಲಿರುವ ಸಂದರ್ಭ: ತಂದೆಯ ಸಂರಕ್ಷಣೆಯಿಂದ ಗಂಡನ ಸಂರಕ್ಷಣೆಗೆ ಒಳಪಡಬೇಕಾಗಿರುವ ಗಳಿಗೆ, ತಾಯಿಯ ಅಕ್ಕರೆಯಿಂದ ಅತ್ತೆಯ ಸಕ್ಕರೆಯಾಗಿ ಶುಭ ಮಹೂರ್ತವಾಗಿದೆ.

ಬೆಟ್ಟದ ನೆಲ್ಲಿ, ಸಮುದ್ರದ ಉಪ್ಪು ಒಂದು ಭಂಡಾರದಲ್ಲಿ ಸಮರಸವಾಗುವ ಸಮಯವೇ ಮದುವೆಯ ಮಹತ್ವವಾಗಿದೆ. ಇವೆಲ್ಲವುಗಳಿಗೆ ಜೀವಾಳವಾಗಿರುವ ಪುರುಷನ ಸಂಕಲ್ಪ ಧನದೊಂದಿಗೆ ಪ್ರಕೃತಿಯ ಶಕ್ತಿ ಋಣ ವನ್ನು ಸಂಧಿಸುವ ದಿವ್ಯ ನಿಮಿಷ. ಅಂತೆಯೆ ಮದುವೆ ಮಹಾಸಂಸ್ಕಾರವೆನಿಸುವುದು. ನೆರೆದ ಬಳಗ ಅಣಿಗೊಳಿಸಿದ ಅನ್ನ ಸಾಮಾಗ್ರಿ, ಬೆಳಗುವ ದೀಪ, ಸಿಂಗರಿಸುವ ಮಂಟಪ ಮೊದಲಾದವುಗಳೆಲ್ಲ ಆ ಸಂಸ್ಕಾರ ಸಿದ್ಧತೆಯೇ ಸರಿ, ಮದುವೆಯ ಮಂತ್ರದ ದಾಂಪತ್ಯವು ಜೀವನದ ಬಹು ಮುಖ್ಯವಾದ ಮಹಾ ಸಂಸ್ಕಾರವಾಗಿದೆ.

ಮಾನವ, ತನ್ನ ಕಾಮ ಪ್ರವೃತ್ತಿಯನ್ನು ಪೂರೈಸಿಕೊಳ್ಳಲು ತೀವ್ರ ಸ್ವರೂಪದಲ್ಲಿ ಉತ್ಸುಕನಾಗಿರುತ್ತಾನೆ. ಕೆಲವರಂತೋ ತಮ್ಮ ಹಸಿವೆ ಪೂರೈಕೆಗಿಂತಲೂ ಹೆಚ್ಚಿನ ಆದ್ಯತೆಯನ್ನು ಅದಕ್ಕೆ ಕೊಡುತ್ತಾರೆ. "ಕಾಮಾತುರಾಣಾಂ ನ ಭಯಂ ನ ಲಜ್ಜಾ" ಅಂದರೆ ಕಾಮದ ಆತುರ ಉಳ್ಳವನಿಗೆ ಭಯವಾಗಲಿ, ನಾಚಿಕೆಯಾಗಲಿ ಇರುವದಿಲ್ಲ ಎಂಬಂತೆ ವರ್ತಿಸುತ್ತಾರೆ. ಆದ್ದರಿಂದ ವ್ಯಕ್ತಿಗಳ ಲೈಂಗಿಕ ಅಪೇಕ್ಷೆಯನ್ನು ಪೂರೈಸುವ ಕಾರ್ಯ ಸಮಾಜದವತಿಯಿಂದ ಆಗಲೇಬೇಕಾಗಿದೆ. ಆದ್ದರಿಂದ ಇಂತಹ ಪ್ರಬಲ ಪ್ರವೃತ್ತಿಯನ್ನು ವ್ಯವಸ್ಥಿತವಾಗಿ ಪೂರೈಸಿಕೊಳ್ಳಲು ವ್ಯಕ್ತಿಗಳಿಗೆ ಅನುವು ಮಾಡಿಕೊಡುವ ಸದುದ್ದೇಶದಿಂದ ಸಮಾಜವು ಕೆಲವಾದರೂ ನಿಗದಿತ ಕಟ್ಟು ಪಾಡುಗಳನ್ನು ರೂಪಿಸುವುದು ಗಂಡು-ಹೆಣ್ಣುಗಳ ಸಂಯೋಗಕ್ಕೆ ಹಾದಿ ಮಾಡುವುದು, ಜನಿಸಲಿರುವ ಮಕ್ಕಳಿಗೆ ಗೊತ್ತು-ಗುರಿಯನ್ನು ಗೊತ್ತು ಮಾಡುವುದೆ, ಮದುವೆ ತನ್ಮೂಲಕ ಗಂಡು ಹೆಣ್ಣುಗಳ ಕಾಮ ಪ್ರವೃತ್ತಿ ಸಮಾಜಮನ್ನಿತ ರೀತಿಯಲ್ಲಿ ಪೂರೈಸಲ್ಪಡುವುದರ ಜೊತೆಗೆ ಸಮಾಜದ ಹಿತ [illegible]ದೆ.

ಈ ಒಂದು ವ್ಯವಸ್ಥಿತ ಕಾರ್ಯ ವಿಧಾನವನ್ನು ಸೂಚಿಸುವ ಸಾಮಾಜಿಕ ಸಂಸ್ಥೆಯೇ ಮದುವೆ (ವಿವಾಹ)

ಮದುವೆಯ ಮಹತ್ವ :

ಮದುವೆಯು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದೆ. ವ್ಯವಸ್ಥಿತವಾದ ಮದುವೆಯ ಇಲ್ಲವಾದರೆ ಸಮಾಜವೇ ಮುಂದುವರೆಯುವುದಿಲ್ಲ. ಸುಭದ್ರವಾಗಿರುವುದಿಲ್ಲ, ಆರೋಗ್ಯಕರವಾಗಿರುವುದಿಲ್ಲ. ಹಲವಾರು ಸಾಮಾಜಿಕ ಸಮಸ್ಯೆಗಳನ್ನು ಆಗರವಾಗುವುದು ಎಂಬ ಕಾರಣಕ್ಕಾಗಿ ಹೊಂದಿಕೊಳ್ಳಲು ಒಂದು ಮದುವೆಯ ಮಹತ್ವವನ್ನು ನೋಡಬಹುದು.

೧) ಸಾಮಾಜಿ ಮನ್ನಣೆ :

ವಿವಾಹವು (ಮದುವೆ) ಗಂಡು-ಹೆಣ್ಣುಗಳ ಗಂಡ-ಹೆಂಡತಿಯರಾಗಲು ಅನುಮತಿ ಕೊಡುತ್ತದೆ. ಅವರು ದಂಪತಿಗಳಾಗಿ ಸಹ ಜೀವನ ನಡೆಸಲು ಸಾಮಾಜಿಕ ಮನ್ನಣೆಯೊಡನೆ ಪರವಾಣಿಗೆ (ಅಪ್ಪಣೆ) ನೀಡುತ್ತದೆ ಅವರು ಪರಸ್ಪರ ನಿಷ್ಠೆಯಿಂದಿದ್ದು ಸುಖಸಂಸಾರ ಸಾಗಿಸುವುದನ್ನು ಅನುಮೋದಿಸುತ್ತವೆ

ಮದುವೆಯ ವ್ಯಾಪ್ತಿ :

ಮದುವೆಯು ಅನೇಕ ಆಚಾರ ವಿಚಾರ ಸಂಪ್ರದಾಯವನ್ನು ಹೊಂದಿರುತ್ತದೆ. ಮದುವೆಯನ್ನು ಮಾಡಬೇಕು ಎಂದು ಮೊದಲು ನಿರ್ಧಾರವನ್ನು ಮಾಡಿದ ನಂತರ ಹುಡಗನ ತಂದೆ-ತಾಯಿ ಹುಡುಗಿಯ ತಂದೆ ತಾಯಿಯರು ತಮ್ಮ ಮಗ-ಮಗಳನ್ನು ಮದುವೆ ಮಾಡಬೇಕು ಎಂದು ನಿರ್ಧರಿಸಿದ ನಂತರ ಅವರು ಹುಡಗಿಯವರಾದರೆ ಹುಡಗಿಯನ್ನು ತೋರಿಸುವ ಶಾಸ್ತ್ರ ಪ್ರಾರಂಭವಾಗುತ್ತದೆ. ಇದನ್ನು ನೋಡಲು ಬರುವರು ಹುಡುಗ ಮತ್ತು ಅವರ ಮನೆಯವರು ಬರುತ್ತಾರೆ ಬಂದನಂತರ ಹುಡುಗಿಯು ಒಪ್ಪಿಗೆಯಾದಳು ಎಂದಾಗ ಹುಡುಗನ ಮನೆಯನ್ನು ನೋಡಲು ಹುಡುಗಿಯ ತಂದೆ-ತಾಯಿ ಸಂಬಂಧಿಕರು ಹೋಗುತ್ತಾರೆ. ಈ ಶಾಸ್ತ್ರವು ಮುಗಿದ ನಂತರ ಹುಡುಗನಿಗೆ ಹುಡುಗಿಯನ್ನು ಕೊಡಲು ನಿರ್ಧರಿಸುತ್ತಾರೆ. ನಿರ್ಧರಿಸಿದ ನಂತರ ಹುಡುಗನ ತಂದೆ-ತಾಯಿಯರ ಕೆಲವು ಒಪ್ಪಂದ ವರದಕ್ಷಿಣೆಯನ್ನು ನಿರ್ಧಾರ ಮಾಡಿದ ನಂತರ ಹುಡಗಿಯ ತಂದೆ-ತಾಯಿ ಸಂಬಂಧಿಕರಿಗೆ ಈ ವಿಚಾರಗಳು ಒಪ್ಪಿಕೊಂಡ ನಂತರ ಅವರು ನಿಶ್ಚಯವನ್ನು ಮಾಡುತ್ತಾರೆ. ನಿಶ್ಚಯವನ್ನು ಮಾಡಿದ ನಂತರ ಹುಡಗನ ಮನೆಯಲ್ಲಿಯೇ ಸಿಹಿಯನ್ನು ತಿಂದುಕೊಂಡು ಒಪ್ಪಿಗೆಯಾಗುತ್ತದೆ. ನಿಶ್ಚಯ ನಂತರ ಸಕ್ಕರೆ ಕಾರ್ಯಕ್ರಮವನ್ನು ಮಾಡುತ್ತಾರೆ. ಈ ಕಾರ್ಯಕ್ರಮವು ಹುಡಗಿಯ ಮನೆಯಲ್ಲಿ ಹುಡುಗನ ಸಂಬಂಧಿಕರು ಹುಡಗಿಯು ನಮ್ಮ ಆಕೆ ಎಂದು ನಿರ್ಧರಿಸಲಾಗುತ್ತದೆ. ನಂತರ ಮದುವೆಯ ದಿನವನ್ನು ನಿರ್ಧಾರವನ್ನು ಮಾಡಲಾಗುತ್ತದೆ. ಮದುವೆಯ ದಿನ ನಿರ್ದಾರವಾದ ನಂತರ ಒಳ್ಳುಕಲ್ಲು ಪೂಜೆಯನ್ನು ಮಾಡುತ್ತಾರೆ. ನಂತರ ಭಾಷಣಕಿಯ ಕಾರ್ಯಕ್ರಮ ಮದುವೆಯ ಹಿಂದಿನ ದಿನ ಇರುತ್ತದೆ. ಭಾಷಣಕಿಯ ಕಾರ್ಯ ಹುಡಗಿಯ ಮನೆಯಲ್ಲಿ ಈ [illegible]

ಮೊದಲು ಹುಡಗನಿಗೆ ಕರೆಯಲು ಹುಡಗಿಯ ಸಂಬಂಧಿಕರು ನಾಲ್ಕು, ಐದು ಜನರು ಹೋಗುತ್ತಾರೆ. ಅಲ್ಲಿ ಹೋದಾಗ ಹುಡಗಿಯ ಕಡೆಯವರಿಗೆ ಶಲ್ಯ-ಮುಂಡಸಿಯನ್ನು ಕಟ್ಟುಕೊಂಡು ಹುಡುಗನಿಗೆ ಹುಡಗಿಯ ಮನೆಗೆ ಕರೆದುಕೊಂಡು ಹೋಗುತ್ತಾರೆ ನಂತರ ಅಲ್ಲಿ ಹುಡುಗನಿಗೆ ಹನುಮಾನ ಮಂದಿರದಿಂದ ಮೆರವಣಿಗೆಯ ಮೂಲಕ ಹುಡಗಿಯ ಮನೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಹೋದನಂತರ ಭಾಷಣಕಿಯ ಕಾರ್ಯಕ್ರಮ ಮಾಡುತ್ತಾರೆ. ನಂತರ ಸುರಗಿಯ ನೀರು ಹಾಕುತ್ತಾರೆ. ಈ ರೀತಿಯಾದ ನಂತರ ಭಾಷಣಕಿಯ ಕಾರ್ಯಕ್ರಮ ಮುಗಿಯುತ್ತದೆ. ನಂತರ ಮರುದಿನ ಮದುವೆಯ ದಿನ ಮೊದಲು ದೇವರ ಕರೆಯನ್ನು ತೆಗೆಯುತ್ತಾರೆ. ನಂತರ ಎಣ್ಣಿ ಹಚ್ಚುವ ಕಾರ್ಯವನ್ನು ಮಾಡುತ್ತಾರೆ ನಂತರ ಪೂಜೆಯನ್ನು ಮಾಡುತ್ತಾರೆ. ನಂತರ ಕರಿಮಣಿಯನ್ನು ಪೇಣಿಸುತ್ತಾರೆ. ನಂತರ ಪೂಜೆಯನ್ನು ಮಾಡಿದನಂತರ ಕರಿಮಣಿಯನ್ನು ಹುಡುಗ (ವರನು) ವಧುವಿಗೆ ಕರಿಮಣಿಯನ್ನು (ತಾಳಿಯನ್ನು) ಕಟ್ಟುತ್ತಾನೆ. ಈ ರೀತಿಯಾಗಿ ಒಂದಾದ ನಂತರ ಒಂದು ಕಾರ್ಯಕ್ರಮಗಳು ಮದುವೆಯ ಆಚರಣೆಯನ್ನು ಮುಗಿಯುತ್ತದೆ.

ಇಂಥ ವೈಭವದ ಮದುವೆಯ ಸಂಪ್ರದಾಯವು ತನ್ನದೇ ಆದ ಮಹತ್ವ ಹೊಂದಿದೆ.

ಮದುವೆ ಕುರಿತು ಒಳ್ಳೆಯ ಅಧ್ಯಯನದ ಮಹತ್ವದ ಲಾಭವೇಂದರೆ ನಮ್ಮ ಸಂಪ್ರದಾಯ ಮಹತ್ವದ ಜೊತೆಗೆ ಜಾ ನಪದೀಯರ ವಿಚಾರಗಳನ್ನು ಛಷ್ ಸಂಸ್ಕೃತಿ ಹಾಗೂ ಜನಪದ ಸಾಹಿತ್ಯದ ಒಟ್ಟು ಚಿತ್ರಣ ನೀಡುತ್ತ ಎಲ್ಲವುಗಳನ್ನು ಸೇರಿಸಿ ಚೌಕಟ್ಟನ್ನು ನಿರ್ಮಿಸಿ ದಾಖಲೆಗೊಳಪಡಿಸುವುದೇ ಆಗಿದೆ.

ಹೀಗೆ ಮದುವೆ ಒಂದು ಜಾನಪದ ಅಧ್ಯಯನ ಎಂಬ ವಿಷಯವು ಒಂದೇ ಉದ್ದೇಶಕ್ಕೆ ಇಟ್ಟುಕೊಂಡು ಹೊರಡದೆ ತನ್ನ ತೆಕ್ಕೆಯೊಳಗೆ ಅನೇಕಾನೇಕ ಉದ್ದೇಶಗಳನಿಟ್ಟುಕೊಂಡು ಹೊರಟಿರುವುದು ಈ ಮೂಲಕ ಗಮನಕ್ಕೆ ತಂದಿರುತ್ತೇನೆ.

ಅಧ್ಯಾಯ-೨

ಮದುವೆಯ ಉಗಮ- ವಿಕಾಸ, ಸ್ವರೂಪ, ಲಕ್ಷಣ ಮತ್ತು ಪ್ರಯೋಜನಗಳು

ಅಧ್ಯಾಯ-೨

ಮದುವೆಯ ಉಗಮ, ಸ್ವರೂಪ, ಲಕ್ಷಣ ಮತ್ತು ಪ್ರಯೋಜನಗಳು

ಸಮಾಜ ಮತ್ತು ಧರ್ಮಗಳೇ ಮದುವೆಯ ಪದ್ಧತಿಗೆ ಮೂಲಧಾತುಗಳು. ಮದುವೆಯ ಮುಂದಿನ ಹಂತವೇ ಕುಟುಂಬ ಅಥವಾ ಗೃಹಸ್ಥಾಶ್ರಮ ಈ ಮದುವೆಯನ್ನು ಯಾವಾಗ ಆರಂಭವಾಯಿತು ಎಂಬುವುದರ ಬಗ್ಗೆ ನಮಗೆ ನಿಖರವಾದ ಮಾಹಿತಿಗಳನ್ನು ತಿಳಿಯಬೇಕಾಗಿದ್ದರೆ ನಾವು ಮಾನವನ ಕಡೆಗೆ ಅವನ ಪೂರ್ವದಲ್ಲಿ ಯಾವ ರೀತಿಯ ಅವನ ವರ್ತನೆಯ ಬಗ್ಗೆ ತಿಳಿಯಬೇಕಾಗುತ್ತದೆ.

ಮನುಷ್ಯನ ವರ್ತನೆಯು ಮೊದಲು ಪ್ರಾಣಿಯ ಹಾಗೆಇತ್ತು. ಮಾನವನಿಗೆ ಹಸಿವು, ನಿದ್ದೆ, ಲೈಂಗಿಕ ಅಪೇಕ್ಷೆ ಅಥವಾ ಕಾಮ ಮೊದಲಾದ ಹಲವಾರು ಮೂಲ ಪ್ರವೃತ್ತಿಗಳಿದ್ದು ಮನುಷ್ಯನ ಲೈಂಗಿಕ ಅಪೇಕ್ಷೆಯು ಪ್ರಾಣಿಗಳಲ್ಲಿರುವಂತೆ ನಿರ್ದಿಷ್ಠ ಋತುಮಾನದಲ್ಲೇ ಕಂಡು ಬರುವುದಿಲ್ಲ. ಮನುಷ್ಯನಿಗೆ ಋತುಭೇದವಿಲ್ಲದೆ ಯಾವಾಗಲೂ (ಕಾಮ) ಲೈಂಗಿಕ ಅಪೇಕ್ಷೆಯನ್ನು ಪೂರೈಸಿಕೊಳ್ಳಲು ಸಾಧ್ಯ ಮನುಷ್ಯನು ತನ್ನ ಆಸೆಯನ್ನು ಪೂರೈಸಿಕೊಳ್ಳಲು ತೀವ್ರ ಉತ್ಸುಕನಾಗಿರುತ್ತಾನೆ. ಆದ್ದರಿಂದ ಸಮಾಜದಲ್ಲಿ ತನ್ನ ಗೌರವವನ್ನು ಉನ್ನತ ಸ್ಥಾನದಲ್ಲಿ ಇರುವುದಕ್ಕಾಗಿ ಮದುವೆಯನ್ನು ಮಾಡಲಾಗುತ್ತದೆ.

ಮನುಷ್ಯನು ಹಸಿವೆ, ನಿದ್ದೆಕ್ಕಿಂತಲೂ ಹೆಚ್ಚಿನ ಆದ್ಯತೆಯನ್ನು ಕಾಮಕ್ಕೆ ಕೊಡಲಾಯಿತು. "ಕಾಮಾತುರಾಣಾಂನ ಭಯಂನ ಲಜ್ಜಾ" ಅಂದರೆ ಕಾಮದ ಆತುರ ಉಳ್ಳವನಿಗೆ ಭಯವಾಗಲಿ ನಾಚಿಕೆಯಾಗಲಿ ಇರುವುದಿಲ್ಲ. ಎಂಬಂತೆ ವರ್ತಿಸುತ್ತಾರೆ. ಆದ್ದರಿಂದ ವ್ಯಕ್ತಿಗಳ ಲೈಂಗಿಕ ಅಪೇಕ್ಷೆಯನ್ನು ಪೂರೈಸುವ ಕೆಲಸ ಸಮಾಜದವತಿಯಿಂದ ಆಗಲೇಬೇಕಾಗಿದೆ. ಆದ್ದರಿಂದ ಇಂತಹ ಪ್ರಬಲ ಪ್ರವೃತ್ತಿಯನ್ನು ಸಮಾಜದಲ್ಲಿ ವ್ಯವಸ್ಥಿತವಾಗಿ ಪೂರ್ತಿ ಮಾಡಲು ವ್ಯಕ್ತಿಗಳಿಗೆ ಅನುವು ಮಾಡಿಕೊಡುವ ಸದುದ್ದೇಶದಿಂದ ಸಮಾಜವು ಕೆಲವಾದರೂ ನಿಗದಿತ ಕಟ್ಟು ಪಾಡುಗಳನ್ನು ರೂಪಿಸುವುದು, ಗಂಡು-ಹೆಣ್ಣುಗಳ ಸಂಯೋಗಕ್ಕೆ ಹಾದಿ ಮಾಡುವುದು. ಅದರ ಮೂಲಕ ಗಂಡು-ಹೆಣ್ಣುಗಳ ಕಾಮಪ್ರವೃತ್ತಿ ಸಮಾದಲ್ಲಿ ಗೌರವದ ರೀತಿಯಲ್ಲಿ ಪೂರೈಸಲ್ಪಡುವುದರ ಜೊತೆಗೆ ಸಮಾಜದ ಹಿತ ಕಾಯಲ್ಪಡುತ್ತದೆ. ಈ "ಒಂದು ವ್ಯವಸ್ಥಿತ ಕಾರ್ಯವಿಧಾನವನ್ನು ಸೂಚಿಸುವ ಸಾಮಾಜಿಕ ಸಂಸ್ಥೆಯೇ ಮದುವೆ (ವಿವಾಹ, ಲಗ್ನ, Marriage) ಮುಂತಾದವುಗಳನ್ನು ಮದುವೆಗೆ ಬಂದ ಪದಗಳ ಸಮನಾರ್ಥಕ ಪದಗಳಾಗಿ ಬಳಕೆಯಲ್ಲಿ ಬಂದಿವೆ.

ಒಟ್ಟಾಗಿ ಹೇಳುವುದಾದರೆ ಮದುವೆ ಗಂಡು-ಹೆಣ್ಣು ವಿಧಿವತ್ತಾಗಿ ಒಂದಾಗಿರುವ ಸಾಧನ ಸಮಾಜದ ದೃಷ್ಠಿಯಿಂದ ಗೌರವವನ್ನು ಕಾಣುವ ಸಂಸ್ಕಾರದಿಂದ ಕೂಡಿದ ಕಾರ್ಯವೇ ಮದುವೆಯೆನ್ನುತ್ತಾರೆ.

ಧರ್ಮಶಾಸ್ತ್ರದ ಹಿನ್ನೆಲೆ :

ಈ ಅಧ್ಯಯನದಲ್ಲಿ ವೇದ, ಗೃಹ್ಯಸೂತ್ರ, ಧರ್ಮಸೂತ್ರ, ಸ್ಮತಿ. ಪುರಾಣ ಮುಂತಾದ ಧರ್ಮಗ್ರಂಥಗಳನ್ನು ನೋಡಿದಾಗ ಪ್ರಾಚೀನ ಭಾರತದ ಧರ್ಮಶಾಸ್ತ್ರದ ಗ್ರಂಥಗಳು ಹಾಗೂ ಅವುಗಳ ವ್ಯಾಖ್ಯಾನಕಾರರ ಹೆಸರನ್ನು ಪರಿಚಯ ಮಾಡಲಾಗಿದೆ.

ನಾವು ವೇದಗಳ ಕಾಲದಲ್ಲಿ ನೋಡಿದಾಗ ಮೊದಲು ಋಗ್ವೇದ ಮತ್ತು ಅಥರ್ವ ವೇದಗಳಲ್ಲಿ ತಿಳಿಸಿರುವ ಮದುವೆ ಮತ್ತು ಅವುಗಳ ಮಂತ್ರಗಳು ಭಾರತೀಯ ಮದುವೆ ಪದ್ಧತಿಯ ಬಗ್ಗೆ ಪ್ರಕಾರಗಳು ಚಿಂತನೆಗೆ ಮೊದಲ ಸ್ಥಳವಾಗಿವೆ. ಹಾಗಾಗಿ ಧರ್ಮಶಾಸ್ತ್ರ ಕೃತಿ ಹಾಗೂ ಅವುಗಳ ವಿಚಾರಗಳನ್ನು ಆಳವಾಗಿ ಹೋಗಬೇಕಾಗಿಲ್ಲ.

ಸಮಾಜಶಾಸ್ತ್ರ ಹಿನ್ನೆಲೆ :

ಮದುವೆಯು ಮುಖ್ಯವಾಗಿ ನಾವು ತಿಳಿಯಬೇಕಾಗಿರುವುದನ್ನು ತಿಳಿಸುತ್ತವೆ. ಮದುವೆ ಈ ಸಂಬಂಧವನ್ನು ಸಮಾಜದಲ್ಲಿ ಗೌರವ ಅಥವಾ ಸಮಾಜ ಸಂಸ್ಥೆಯ ಮೂಲವಾಗಿದೆ. ಮದುವೆಯ ಬಗ್ಗೆ ಸಮಾಜಶಾಸ್ತ್ರದ ವ್ಯಾಖ್ಯಾನಕಾರರ ಅವರ ವಿಚಾರಗಳನ್ನು ಅವರ ವ್ಯಾಖ್ಯಾನಗಳು ತಿಳಿದುಕೊಳ್ಳಬಹುದು.

ವೆಸ್ಟರ್ ವರ್ಕ್ :

ಮದುವೆಯು ಸಂತತಿಯ ಜನನ ನಂತರವು ಉಳಿದುಕೊಳ್ಳುವ ಸ್ತ್ರೀ-ಪುರುಷರ ಹೆಚ್ಚು ಕಡಿಮೆ ಸ್ಥಿರ ರೂಪದ ಸಂಬಂಧವಾಗಿದೆ.

ಸಮಾಜಶಾಸ್ತ್ರದ ವ್ಯಾಖ್ಯಾನಕಾರರು ಮದುವೆಯಿಂದ ತಮ್ಮ ಕುಟುಂಬವು ಮುಂದುವರೆಯುತ್ತದೆ. ತಮ್ಮ ಮಕ್ಕಳ ಜನನದಿಂದ ತಮ್ಮ ಪರಂಪರೆಯನ್ನು ಮುಂದುವರೆಯುವುದಕೋಸ್ಕರ ಮದುವೆಯ ಸಂಬಂಧವನ್ನು ಬಾಂಧವ್ಯವನ್ನು ಬೆಳೆಯಲು ಸಾಧ್ಯವಾಗುತ್ತದೆ. ಈ ಮದುವೆಯ ಬಂಧನವನ್ನು ಜನ್ಮ ಜನ್ಮಗಳ ಸಂಬಂಧ ಎಂದು ನಿರ್ಧರಿಸಲಾಗುತ್ತದೆ.

ಜೇಕಬ್ ಮತ್ತು ಸ್ವೆರ್ನ

ಮದುವೆಯು ಪತಿ–ಪತ್ನಿಯರು ಇಲ್ಲವೇ ಬಹುಸಂಖ್ಯಾತ ದಂಪತಿಗಳ ಸಮಾಜಿಕ ಸಂಬಂಧವನ್ನು ಹಾಗೂ ವೈವಾಹಿಕ ಸಂಗಾತಿಗಳ ಸಂಯೋಗದ ಆಚರಣೆಯನ್ನು ಸೂಚಿಸುವ ಪದವಾಗಿದೆ.

ಇವರ ವಿಚಾರದ ಪ್ರಕಾರ ಮದುವೆಯಿಂದ ಗಂಡು–ಹೆಣ್ಣುಗಳು ಸಮಾಜದ ಕಟ್ಟುಪಾಡುಗಳಲ್ಲಿ ವಿಧಿವತ್ತಾಗಿ ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಒಪ್ಪಿಕೊಂಡುಮದುವೆಯಾಗುವುದಕ್ಕೆ ಸಮಾಜದಲ್ಲಿ ಅಥವಾ ನಮ್ಮ ಹಿರಿಯರು ಗೌರವದಿಂದ ಕಾಣುವ ಗಂಡು–ಹೆಣ್ಣುಗಳು ಒಂದಾಗುವ ಆಚರಣೆಯನ್ನು ಸೂಚಿಸುವ ಪದಗಳನ್ನು ಮದುವೆ ಎಂದು ತಿಳಿಸಲಾಗಿದೆ.

ಎ.ಜಿ.ಕೆಲ್ಲರ್

ಮದುವೆ ಸಂಸ್ಥೆಯು ಸ್ತ್ರೀ–ಪುರುಷರಲ್ಲಿ ನೈತಿಕ ಸಂಬಂಧವನ್ನು ನಿರ್ಮಿಸುವ ಸಾಂಸ್ಕೃತಿಕ ವ್ಯವಸ್ಥೆ ಅದರ ಮುಖ್ಯ ಉದ್ದೇಶಗಳು ಮಕ್ಕಳಿಗೆ ಜನ್ಮಕೊಡುವದು ಮತ್ತು ಅವುಗಳನ್ನು ಪೋಷಿಸುವುದು.

ಇವರ ವಿಚಾರದ ಪ್ರಕಾರ ಮದುವೆಯು ಒಂದು ಸಾಮಾಜಿಕ ಸಂಸ್ಥೆಯಾಗಿದೆ. ಗಂಡು–ಹೆಣ್ಣುಗಳಲ್ಲಿ ಕಟ್ಟುಪಾಡುಗಳನ್ನು ಹಾಕಿಕೊಂಡು ಮದುವೆಯ ಬಂಧನದಲ್ಲಿ ಒಂದಾಗಿ ಕುಟುಂಬವನ್ನು ಸ್ಥಾಪನೆಯಾಯಿತು. ನಂತರ ಮದುವೆಯ ಮುಖ್ಯ ಉದ್ದೇಶ ಎಂದರೆ ಮಕ್ಕಳಿಗೆ ಜನ್ಮಕೊಡುವುದು ಮತ್ತು ಆ ಮಕ್ಕಳಿಗೆ ಜನ್ಮನೀಡಿದ ನಂತರ ಅವರಿಗೆ ಲಾಲನೆ ಪಾಲನೆಯನ್ನು ಮಾಡುವುದಾಗಿದೆ.

ಮ್ಯಾಲಿನೌಸ್ಕಿ

ವಿವಾಹವು ಸ್ತ್ರಿ–ಪುರುಷರ ಲೈಂಗಿಕ ಅಪೇಕ್ಷೆಯ ಪೂರೈಕೆಗಾಗಿ ಮತ್ತು ಸಂತಾನೋತ್ಪತ್ತಿಗಾಗಿ ಉದ್ದೇಶಪೂರ್ವಕವಾಗಿ ಏರ್ಪಡಿಸಿಕೊಂಡ ಒಪ್ಪಂದವಾಗಿದೆ.

ಇವರ ಪ್ರಕಾರ ಮದುವೆ ಸ್ತ್ರಿ–ಪುರುಷರನ್ನು ಒಂದು ಮಾಡುವುದು ಕಾಮವನ್ನು (ಲೈಂಗಿಕ) ಪೂರ್ತಿಯನ್ನು ಮಾಡುವುದಕೋಸ್ಕರ ಮನುಷ್ಯರು [illegible]ಗಳ ಹಾಗೆ ಅವರ [illegible] ಸಾಮಾಜಿಕ ಕಟ್ಟು[illegible] ಮದುವೆಯ ಸಂಪ್ರದಾಯದ ಮುಖಾಂತರ ಮಕ್ಕಳ ಜನ್ಮನೀಡುವುದ್ದಾಗಿದೆ.

ಲುಂಡಬರ್ಗ

ವಿವಾಹವು ಪತಿ–ಪತ್ನಿಯರು ಪರಸ್ಪರ ಹೊಂದಿರಬೇಕಾದ ಹಕ್ಕು, ಕರ್ತವ್ಯ ಹಾಗೂ ಸವಲತ್ತುಗಳನ್ನು ವ್ಯಾಖ್ಯಾನಿಸುವ ನಿಯಮ ನಿಬಂಧನೆಗಳನ್ನು ಒಳಗೊಂಡಿರುತ್ತದೆ

ಮದುವೆಯು ಗಂಡು ಹೆಣ್ಣುಗಳ ಪರಸ್ಪರ ಒಪ್ಪಿಕೊಂಡು ಹಕ್ಕು ಕರ್ತವ್ಯಗಳನ್ನು ಹೊಂದಿದೆ ಸಮಾಜದಲ್ಲಿ ಜೀವಿಸುವ ಒಪ್ಪಿಗೆಯನ್ನು ಪಡೆದು ವಿಧಿವತ್ತಾಗಿ ಸಮಾಜದ ನಿಯಮ ಒಪ್ಪಿಕೊಂಡು ಜೀವಿಸುವುದ್ದಾಗಿದೆ.

ಗಿಲಿನ್ ಮತ್ತು ಗಿಲಿನ್

ಸಂತಾನೋತ್ಪತ್ತಿ ಮಾಡುವ ಕುಟುಂಬವನ್ನು ಸ್ಥಾಪಿಸಲು ಸಮಾಜದಿಂದ ಮನ್ನಣೆ ಪಡೆದ ಮಾರ್ಗವೇ ವಿವಾಹ.

ಇವರ ಪ್ರಕಾರ ಮಕ್ಕಳಿಗೆ ಜನ್ಮ ನೀಡುವುದು ಅಥವಾ ಲೈಂಗಿಕ ಪ್ರವೃತ್ತಿಯನ್ನು ಅಥವಾ ಕಾಮದ ಪೂರ್ರೈಕೆ ಪಡೆಯುವ ಒಂದು ಮಾರ್ಗ ಅದನ್ನು ಒಪ್ಪಿಕೊಂಡ ಸಮಾಜದಲ್ಲಿ ವಿಧಿವತ್ತಾದ ಆಚರಣೆಯೆ ಮದುವೆ.

ಜಗತ್ತಿನ ಎಲ್ಲಾ ಕಡೆಗಳಲ್ಲಿ ಒಂದಲ್ಲಾ ಒಂದು ರೀತಿಯಿಂದ ಪ್ರಚಲಿತವಾಗಿರುವ ಮದುವೆ ಸಂಪ್ರದಾಯವನ್ನು ಸಮಾಜ ಶಾಸ್ತ್ರಗಳ (ವ್ಯಾಖ್ಯೆಗಳ) ಮುಖಾಂತರ ವಿದ್ವಾಂಸರ ವಿಚಾರಗಳನ್ನು ತಮ್ಮ ವ್ಯಾಖ್ಯೆಗಳಲ್ಲಿ ಸಮಾಜದ ಚೌಕಟ್ಟಿನಲ್ಲಿ ತಂದಿಡುವುದು ಕಷ್ಟ ಆದರೂ ಈ ಮೇಲಿನ ವ್ಯಾಖ್ಯೆಗಳಿಂದ ಮದುವೆ ಪದ್ಧತಿಯ ಮುಖ್ಯ ಉದ್ದೇಶ ಕಾಮ ಪೂರ್ರೈಕೆಯಾಗಿದೆ. ನಂತರ ಸಂತಾನೋತ್ಪತ್ತಿ ಎಂದು ತಿಳಿಯಲಾಗುತ್ತದೆ.

ಮದುವೆಯು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿರುವುದು ಅದು ಸಾರ್ವತ್ರಿಕವಾದುದು. ಮದುವೆ ಎಲ್ಲಾ ಜನಾಂಗಗಳಲ್ಲಿ ಮದುವೆ ಸಂಪ್ರದಾಯ ಅವರ ಅವರ ಸಂಪ್ರದಾಯದಂತೆ ಅವುಗಳನ್ನು ಆಚರಣೆಯನ್ನು ಮಾಡುತ್ತಾರೆ. ಮದುವೆ ಮಾಡಿದಾಗ ಮಾತ್ರ ಅವರ ಜನಾಂಗ ಬೆಳೆಯಲು ಸಾಧ್ಯವಾಗುತ್ತದೆ ಮತ್ತು ಜಗತ್ತಿನಲ್ಲಿ ಜನಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ.

ಮದುವೆಯು ಒಬ್ಬ ಅಥವಾ ಒಬ್ಬರಿಗಿಂತ ಹೆಚ್ಚು ಪುರುಷರ ಮತ್ತು ಒಬ್ಬಳು ಇಲ್ಲವೇ ಒಬ್ಬಳಿಗಿಂತ ಹೆಚ್ಚು ಸ್ತ್ರೀಯರ ಸಂಯೋಗವಾಗಿದೆ. ಅದುವೇ ದಾಂಪತ್ಯ ಜೀವನವಾಗಿದ್ದು ಸಾಮಾನ್ಯವಾಗಿ ಹೆಚ್ಚು ಕಾಲದವರೆಗೆ ಮುಂದುವರೆಯುವುದು ಮದುವೆಯ ಸಂಪ್ರದಾಯ ಇಲ್ಲವೇ ಕಾನೂನುಗಳ ಮೂಲಕ ದೊರೆತ ಸಾಮಾಜಿಕ ಮನ್ನಣೆಯ ಅಗತ್ಯವಿರುತ್ತದೆ.

ಮದುವೆಯು ಗಂಡು-ಹೆಣ್ಣು, ಗಂಡ-ಹೆಂಡತಿಯರಾಗುವುದನ್ನು ಸೂಚಿಸುತ್ತದೆ. ಅದು ಮನುಷ್ಯನ ಲೈಂಗಿಕ ಜೀವನಕ್ಕೆ ಅಧಿಕೃತವಾಗಿ ಅಧಿಕಾರ ಕೊಟ್ಟು ಅವರ ಮೇಲೆ ಹೊಣೆಗಾರಿಕೆಯನ್ನು ಹೇರುತ್ತದೆ. ಅದು ಲೈಂಗಿಕ ಸಂಬಂಧದ ಅವ್ಯವಸ್ಥೆಯಿಂದ ಉಂಟಾಗಬಹುದು. ಸಾಮಾಜಿಕ ರೋಗ-ರುಜಿನಗಳನ್ನು ತಡೆಗಟ್ಟಿ ಸಮಾಜವು ಸುವ್ಯವಸ್ಥಿತ ರೀತಿಯಿಂದ ಈ ಕಾರಣಕ್ಕಾಗಿಯೇ ಮದುವೆಯು ಸಾಮಾಜಿಕ ಸಂಸ್ಥೆಯಲ್ಲಿ ಮುಖ್ಯವಾಗಿವೆ. ಮದುವೆ.

ಉಗಮ- ವಿಕಾಸ

ಮದುವೆಯ ಉಗಮಕ್ಕೆ ಸಂಬಂಧಿಸಿದ ಸಂಗತಿಗಳನ್ನು ಧರ್ಮಗ್ರಂಥ, ಧರ್ಮಶಾಸ್ತ್ರಗಳಲ್ಲಿ ಅದರ ಬಗ್ಗೆ ನಿಖರವಾದ ಮಾಹಿತಿಗಳಿಲ್ಲ ಮದುವೆಯ ಉಗಮವನ್ನು ನೋಡಿದಾಗ ಪ್ರಕೃತಿಯ ಹುಟ್ಟಿನಲ್ಲಿಯೇ ಮದುವೆಯ ಉಗಮವಾಗಿರಬೇಕು. "ಇಮೌ ವೈ ಲೋಕೌ ಸಹಾಸ್ತಾಂತೌ ವಿಯಂ ತಾವಭೂತಂ ವಿವಾಹಂ ವಿವಹ ಹ್ಯೆಸಹ ನಾವಸ್ತ್ವಿತಿ:" ಎಂಬ ಉಕ್ತಿ ತಾಂಡ್ಯ ಮಹಾಬ್ರಾಹ್ಮಣದಲ್ಲಿದೆ. ಹಾಗೆಂದರೆ ಸ್ವರ್ಗ ಮತ್ತು ಪೃಥ್ವಿಗಳು ಒಟ್ಟಾಗಿಯೇ ಇದ್ದವು ಎಂದರ್ಥ. ಆದರೆ ಒಮ್ಮೆ ಅವು ಬೇರೆಯಾದವು; ಆಗ ಅವು ಪರಸ್ಪರ ವಿವಾಹವೆಂಬುದನ್ನು ಮಾಡಿಕೊಮಡು ನಾವಿಬ್ಬರು ಒಳ್ಳೆಯ ರೀತಿಯಿಂದ ಕೊನೆಯವರೆಗೆ ಕೂಡಿರೋಣ" ಎಂದು ಹೇಳಿಕೊಂಡವು ಇಲ್ಲಿ ಇಹಪರಗಳೆರಡೂ ಮದುವೆಯ ನೆಪದಲ್ಲಿ ಒಂದಾಗಿರುವ ಧ್ವನಿಯಿದೆ. ಇದರಿಂದ ಮನುಷ್ಯನ ಮದುವೆ ಉಗಮಕ್ಕೆ ಸೃಷ್ಟಿಯೇ ಮೂಲವೆನ್ನುವಂತಿವೆ. ಬ್ರಹ್ಮಾಂಡದ ಸೃಷ್ಟಿಯೇ ಮದುವೆಯ ಉಗಮ ಮತ್ತು ಅದರ ಮಹತ್ವ ತಿಳಿಯಲಾಗುತ್ತದೆ.

ಮದುವೆಯ ಪೂರ್ಣ ಕಲ್ಪನೆಯು ಮದುವೆಯ ಉಗಮ ಪ್ರಾಚೀನತೆಯುತ್ತ ನೋಡಲು ಸಾಧ್ಯವಾಗುತ್ತದೆ. ಭಾರತೀಯರು ಇಂತಹ ವಿಚಾರವನ್ನು ಇಟ್ಟುಕೊಂಡಿರುವುದರಿಂದಲೇ ಪ್ರಾಯಶಃ ಮದುವೆ ಪದ್ಧತಿಯ ಉಗಮವನ್ನು ಮಾನವನ ಸಮಾಜದಲ್ಲಿ ಹುಡುಕುವ ಅರ್ಥ ನಿರ್ದಿಷ್ಟವಾಗಿ ದಾಖಲಿಸುವ (ಬರೆಯುವ) ಪ್ರಯತ್ನ ಮಾಡಲಿಲ್ಲ. ಅದರ ಬದಲಿಗೆ ಮದುವೆ ಎನ್ನುವುದು "ಬ್ರಹ್ಮಗಂಟು" "ಸೃಷ್ಟಿ ನಿಯಮ" ಅಥವಾ "ದೈವ ನಿಯಮ" ದೇವರ ಇಚ್ಛೆಯಂತೆ ಎಂದೇ ಎಲ್ಲರೂ ಭಾವಿಸಿದ್ದಾರೆ

ಸ್ವರೂಪ (ಅರ್ಥ).

ಉದ್ವಾಹ, ಪರಿಣಯ ಅಥವಾ ಪರಿಣಯನ, ಉಪಯವ ಪಾಣಿಗ್ರಹಣ ಮತ್ತು ವಿವಾಹ, ಇಂಥ ಕೆಲವು ಶಬ್ದಗಳು ಪ್ರಾಚೀನ ಭಾರತ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಪ್ರಯೋಗಗೊಂಡಿವೆ. ಈ ಎಲ್ಲವೂ ವಿವಾಹ, ಮದುವೆ ಎಂಬುದಕ್ಕೆ ಸ್ಥೂಲ ಸಮನಾರ್ಥಕ ಪದಗಳಾಗಿವೆ. ಮತ್ತು ನಿರ್ದಿಷ್ಟ ಅರ್ಥವನ್ನು ಹೊಂದಿವೆ. ಅವುಗಳ ಹಿನ್ನೆಲೆಯಲ್ಲಿ ಪ್ರಾಚೀನಕಾಲದ (ವಿವಾಹ) ಮದುವೆ ಪದ್ಧತಿಯ ಸ್ವರೂಪವನ್ನು ಸ್ವಲ್ಪಮಟ್ಟಿಗೆ ಅರಿಯಲು ಸಾಧ್ಯವಿದೆ.

- ಉದ್ವಾಹ ಎಂದರೆ ಕನ್ಯೆಯನ್ನು ಅವಳ ತಂದೆ ತಾಯಿಯರ ಮನೆಯಿಂದ ಹೊರಗೆ ಒಯ್ಯುವುದು.
- ಪರಿಣಯ ಅಥವಾ ಪರಿಣಯನ ಎಂದರೆ ಕನ್ಯೆಯು ಅಗ್ನಿ ಕುಂಡಕ್ಕೆ ಪ್ರದಕ್ಷಿಣೆ ಹಾಕುವುದು
- ಉಪಯಮ ಎಂದರೆ ಕನ್ಯೆಯನ್ನು ಕರೆ ತಂದು ಒಬ್ಬನ ಹತ್ತಿರದವಳಾಗಿ ಮಾಡುವುದು
- ಪಾಣಿಗ್ರಹಣ ಎಂದರೆ ಕನ್ಯೆ ಕರವನ್ನು ಹಿಡಿಯುವುದು ಎಂದರ್ಥ
- ವಿವಾಹ ಅಥವಾ ಮದುವೆ ಎಂದರೆ ಕನ್ಯೆಯೊಬ್ಬಳನ್ನು ವಿಶೇಷ ಕಾರಣಕ್ಕಾಗಿ ಕರೆದೊಯ್ಯುವುದು ಎಂದರ್ಥ.

ಈ ಶಬ್ದಾರ್ಥಗಳು ಮದುವೆಯ ವಿಧಿ ಆಚರಣೆಯನ್ನು ಅವಲಂಬಿಸಿ ಪ್ರಯೋಗವಾಗಿವೆ. ಮದುವೆಯ ಸಲುವಾಗಿ ಕನ್ಯೆಯನ್ನು ಕರೆದೊಯ್ದು ಪುರುಷನೊಡನೆ ಸಂಬಂಧ ಬೆಸೆದು ಅವರಿಗೆ ಹೊಣೆಯನ್ನು ಜೀವನ ಪಾಲನೆಯ ಮಾರ್ಗವನ್ನು ಅಂದು ತಿಳಿಸಿ ಕೊಡಲಾಗುತ್ತಿತ್ತು. ಮದುವೆ ಇಂಥ ಸ್ವರೂಪ ಅರಿಯಲು ಈ ಶಬ್ದಗಳೂ ಸ್ವಲ್ಪ ಸಹಕಾರಿಯಾಗಿವೆ. ಪರಸ್ಪರ ಗಂಡು ಹೆಣ್ಣು ಒಂದುಗೂಡುವುದು. ಹತ್ತಿರವಾಗುವುದು "ವಿಶೇಷ ಕಾರಣ" ವೆನ್ನುವ ಮಾತಿನಿಂದ ಹೇಳಲಾಗಿದೆ.

ವಿಶೇಷಣ ವಹತಿ ಇತಿ ವಿವಾಹ ಉಕ್ತಿಯಲ್ಲಿ ಸಂಸ್ಕೃತದ "ವಹ" ಧಾತುವಿನೊಂದಿಗೆ "ವಿ" ಪೂರ್ವಪ್ರತ್ಯಯ ಸೇರಿದೆ. ಎಂದರೆ ವಿಶೇಷ ಕಾರ್ಯಕ್ಕಾಗಿ ಹೆಣ್ಣನ್ನು ಕರೆದೊಯ್ಯುವುದಕ್ಕೆ "ಬವಾಹಿ" ಎಂದು ಹೆಸರು.

"ಹಸ್ತಗ್ರಾಭಾ" ಮತ್ತು "ವಾಹತು" ಎಂಬ ಎರಡು ಶಬ್ದಗಳು ಋಗ್ವೇದದಲ್ಲಿ ಪ್ರಯೋಗವಾಗಿದೆ.

ಇವು ಮದುವೆಯ ಸ್ವರೂಪವನ್ನು ಸೂಚಿಸುವುದು ಎಂಬುದು ಸಾಯಣನ ಅಭಿಮತ. "ವಾಹ" ಧಾತುವಿನ ಅರ್ಥ ಪಡೆಯುವುದು ಎಂದರೆ ವಿಶೇಷವಾಗಿ ಪಡೆಯುವುದು ಎಂದಾಗುತ್ತದೆ. ಅಂದರೆ ಕನ್ಯೆಯನ್ನು ವಿಶೇಷವಾಗಿ ಹೊಂದುವುದು ಎಂದೇ ಅರ್ಥ. "ಪ್ರಾಪಣ" ವೆಂದರೆ ವಿಶಿಷ್ಟ "ಒಪ್ಪಿಗೆ" ಎಂದರ್ಥ ವಿಧಿವತ್ತಾಗಿ ವಧುವನ್ನು ವಿಶೇಷ ಸಂದರ್ಭದಲ್ಲಿ ಪಡೆದು ಅವಳು ಗೃಹಿಣೀ ಧರ್ಮವನ್ನು ಒಪ್ಪಿಕೊಂಡು ಒಟ್ಟಿಗೆ ಬಾಳುವುದು ಮದುವೆಗಿರುವ ವಿಶಿಷ್ಟ ಅರ್ಥ ಎಂಬುದು ಮಿತ್ರ ಮಿಶ್ರನ ಸಂಸ್ಕಾರ ಪ್ರಕಾಶದ ವಿವರಣೆ [illegible] ಪೂರ್ವೋಕ್ತ ಶಬ್ದಗಳು ತಮ್ಮ ಪ್ರಯೋಗಾರ್ಥದ ಹಿನ್ನೆಲೆಯಲ್ಲಿ ಮದುವೆಯ ವಿಧಿಗಳನ್ನು ಸ್ವಲ್ಪ ಮಟ್ಟಿಗೆ ಪರಿಚಯಿಸುವಂತಿವೆ. ಇದರಿಂದ ಪ್ರಾಚೀನ ಮದುವೆ ಪದ್ಧತಿಯ ಸ್ಥೂಲ ಸ್ವರೂಪವನ್ನು ತಿಳಿಯಲು ನೆರವಾಗಿದೆ.

ಮದುವೆಯ ಸಂದರ್ಭಗಳ ಸಮಯದಲ್ಲಿ ಅನೇಕ ಸಂಸ್ಕಾರ ವಿಧಿಗಳ ಆಚರಣೆಯನ್ನು ಮಾಡಲಾಗುತ್ತದೆ.

ಉದ್ದೇಶ:

ವೇದಕಾಲದಿಂದಲೂ ಭಾರತೀಯರು ಇಹಕ್ಕಿಂತ ಪರಕ್ಕೆ ಹೆಚ್ಚು ಪ್ರಾಮುಖ್ಯ ನೀಡಿದ್ದಾರೆ. ಆದರೂ ಲೌಕಿಕ ಬದುಕನ್ನು ಸಂಪೂರ್ಣವಾಗಿ ನಿರಾಕರಿಸಿಲ್ಲ. ಲೌಕಿಕ ಜೀವನದ ಅನಿವಾರ್ಯತೆಯನ್ನು ಪ್ರಾಚೀನರೆಲ್ಲರೂ ಒಪ್ಪಿದ್ದಾರೆ. ಅವರ ಬದುಕಿನ ಎಲ್ಲಾ ಕರ್ಮಾಚರಣೆಗಳನ್ನು ಮಾಡಲು ಸಿದ್ದರಿದ್ದಾರೆ. ಹಾಗೆಯೇ ಬಾಳಿದ್ದಾರೆ. ಆದರೆ ಲೌಕಿಕ ಬದುಕಿನ ಸುಖಕ್ಕೂ ಆಧ್ಯಾತ್ಮಿಕ ಸಾಧನೆಯ ಸ್ವಾತಂತ್ರ್ಯಕ್ಕೂ ಯಾವುದೇ ಬಗ್ಗೆಯ ವಿರೋಧ ಮತ್ತು ಪ್ರತಿರೋಧವನ್ನು ಹಿಂದಿನವರು ಗಂಟು ಹಾಕಿಲ್ಲ. ಅದಕ್ಕೆ ಬದಲಾಗಿ ಜೀವನದ ಸಫಲತೆಯನ್ನು ಸಮೃದ್ಧಿಯನ್ನು ಕುರಿತು ಚಿಂತಿಸಿದ್ದಾರೆ. ಆದರೂ ದೀರ್ಘಕಾಲದವರೆಗೆ ಬಾಳಿ ಬದುಕಲು ಅವರಿಗೆ ಅಪೇಕ್ಷೆಯಿತ್ತು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವೇಧ ಪುರುಷಾರ್ಥ ಸಾಧನೆಗೆ ಮದುವೆ ಸಂಸ್ಕಾರದಿಂದಲೇ ಆಗಬೇಕು.

ಪುರುಷಾರ್ಥಗಳಲ್ಲಿ ಒಂದಾದ ಕಾಮ ಮಾನವನ ಸಹಜ ಪ್ರವೃತ್ತಿ ಈ ಕಾಮದ ಹಿನ್ನೆಲೆಯಲ್ಲಿ ಸಂತಾನದ ಅಪೇಕ್ಷೆ, ಅಡಗಿದೆ, ಸಮಾಜಿಕ ಧರ್ಮ ಪರಿಪಾಲನೆಯ ಸಲುವಾಗಿ ಸ್ತ್ರಿ–ಪುರುಷರು ಮದುವೆವಾಗುವರು. ಇದರ ಬಹುಮುಖ್ಯ ಉದ್ದೇಶ ಸಂತಾನೋತ್ಪತ್ತಿ ಮತ್ತು ಕುಟುಂಬದ ಬೆಳವಣಿಗೆ.

ಆಶ್ರಮಧರ್ಮ ಪದ್ಧತಿಯ ಎರಡನೇ ಪ್ರಮುಖ ಘಟ್ಟ ಗೃಹಸ್ಥಾಶ್ರಮ ಇದರಲ್ಲಿ ಮದುವೆಯು ಪರಮ ಉದ್ದೇಶವಿದೆ. ವಿದ್ಯಾಭ್ಯಾಸ ಪೂರ್ಣಗೊಳಿಸಿದ ಸಾರ್ಥಕ ಮದುವೆಯಾಗಲು ಅರ್ಹ ಇದರಿಂದ ಮದುವೆಯಲ್ಲಿ ತಾಯಿ ತಂದೆ ಸೋದರ ಮತ್ತು ಸಹೋದರಿಯರ ನಡುವೆ ನೈತಿಕ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಜೊತೆಗೆ ಅನೈತಿಕ ಲೈಂಗಿಕ ಸಂಪರ್ಕ ಮತ್ತು ಸ್ವೇಚ್ಛಾಚಾರ ಪ್ರವೃತ್ತಿ ಕೂಡ ನಿಯಂತ್ರಣಗೊಳ್ಳುತ್ತದೆ. ಸ್ತ್ರೀ-ಪುರುಷರ ವರ್ಣ, ವಂಶ, ಗುಣಲಕ್ಷಣ ಮೊದಲಾದ ಮದುವೆಯ ಪೂರ್ವದ ನಿರ್ಣಯಾಂಶಗಳು ಮುಖ್ಯವೆಂದುಧರ್ಮಶಾಸ್ತ್ರ ಸಾರಿರುವುದು. ವಂಶೋದ್ಧಾರದ ಸದುದ್ದೇಶದಿಂದ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕರ್ತವ್ಯಗಳ ನಿರ್ವಹಣೆ ಗೃಹಸ್ಥನಾಗಿದೆ. ಆತನು ಭೋಗಜೀವನವನ್ನಷ್ಟೇ ಅಲ್ಲ ತ್ಯಾಗ ಜೀವನವನ್ನು ನಡೆಸಬೇಕು. ಆತ ಒಂದು ದಿವನ್ನು ಹದಿನಾರು ಭಾಗ ಮಾಡಿ ಆಯಾ-ಆಯಾ ಕಾಲಕ್ಕೆ ತಕ್ಕ ಕರ್ಮಗಳನ್ನು ಆಚರಿಸಬೇಕೆಂದು ಸ್ಥಿತಿಗಳು ಸೂಚಿಸುತ್ತವೆ. ಮುಕ್ತಿ ಸಾಧನೆಗೆ ದೇಹಧಾರಣೆ ಅಗತ್ಯ ಇದಕ್ಕೆ ಕಾರಣರಾದ ಪ್ರವೃತ್ತಿಗಳಿಗೆ ಆಧ್ಯಾತ್ಮದ ಕಡೆಗೆ ಪ್ರೇರೆಪಿಸುವ ದೇವತೆ ಹಾಗು ಉತ್ತಮ ಜ್ಞಾನ ಸಮುಪಾದನೆಗೆ ಮಾರ್ಗತೊರುವ ಗುರು-ಮುನಿಗಳ ಋಣ ತೀರಿಸುವುದು. ಪ್ರತಿಯೊಬ್ಬ ಗೃಹಸ್ಥನ ಕರ್ತವ್ಯ ಆದ್ದರಿಂದ ಮದುವೆ ಅನಿವಾರ್ಯ ಹಾಗೂ ಮದುವೆಯಾಗದೆ ಗೃಹಸ್ಥನಾಗದೆ ಇವುಗಳಿಂದ ಋಣಮುಕ್ತನಾಗಲಾರ ಪಿತೃಗಳ ಕರ್ಮಾಚರಣೆಗೆ ಗೃಹಸ್ಥ ಹೆಂಡತಿಯನ್ನು ಹೊಂದಿರಲೇಬೇಕು. ಉಳಿದ ಆಶ್ರಮ ಪಾಲನೆಗೆ ಗೃಹಸ್ಥಾಶ್ರಮ ಅರ್ಥಾತ್ ವೈವಾಹಿಕ ಜೀವನ ಕ್ರಮವೇ ತಳಹದಿಯಾಗಿದೆ. ಪ್ರತಿಯೊಬ್ಬರು ಸನ್ಯಾಸಿಯಾದರೆ ಸಮಾಜ ಮುಂದುವರೆಯುವುದಿಲ್ಲ.

ಲಕ್ಷಣ :

ಮದುವೆಯನ್ನು ಮಾಡುವ ಮುಖ್ಯ ಉದ್ದೇಶವೆಂದರೆ ಕುಟುಂಬ (ಗೃಹಸ್ಥ ಆಶ್ರಮ) ಮುಂದುವರೆಯುವುದಕ್ಕೆ ಮದುವೆಯನ್ನು ಮಾಡುತ್ತಾರೆ.

- ಮದುವೆಯನ್ನು ಮಾಡಲು ಮೊದಲನೇ ಹಂತವೇ ಗಂಡು-ಹೆಣ್ಣನ್ನು ನೋಡಬೇಕು.
- ವಧುವಿನ ಸಂಬಂಧಿಕರು ಅಥವಾ ಹಿರಿಯರು ನಿಶ್ಚಿತಾರ್ಥವನ್ನು ಮಾಡಿಕೊಳ್ಳುವ ವಾಗ್ದಾನದಿಂದ ಈ ಸಂಸ್ಕಾರ ಆರಂಭವಾಗುತ್ತದೆ.
- ವರನ ಔಪಚಾರಿಕ ಸಮ್ಮತಿಯೊಡನೆ ಹಾಗೂ ಶ್ರೇಷ್ಠ [illegible] [illegible] ಮಾಡಲಾಗುತ್ತದೆ.

- ವಧುವಿನ ತಂದೆ ಅಥವಾ ಪೋಷಕರು ವರನಿಗೆ ಹೆಣ್ಣನ್ನು ದಾನದ ರೂಪವಾಗಿ ಕೊಡುತ್ತಾರೆ.
- ವಧುವರರು ದೈವ ಸಾಕ್ಷಿಯಾಗಿ ಒಂದುಗೂಡಿಸುವ ಕೇಂದ್ರ ಅಥವಾ ಸಂಕೇತವೇ ಮದುವೆಯಾಗಿದೆ.
- ವರ ತನ್ನ ವಧುವಿನ ಹೊಣೆಗಾರಿಕೆಯನ್ನು ಸ್ವೀಕರಿಸಿದ್ದೇನೆ ಎಂಬುದರ ಸಂಕೇತಾರ್ಥವಾಗಿ ಅವಳ ಕೈಹಿಡಿದು ಮಡದಿಯಾಗಿ ಪರಿಗ್ರಹಿಸುವ ವಿಧಿಯೇ ಆಗಿದೆ.
- ಗುರುವಿನ ಮಂತ್ರ ಪಠಣೆಯ ನಂತರ ಪ್ರಮಾಣಗಳನ್ನು ಹೇಳಿಸುತ್ತಾರೆ

ಪ್ರಯೋಜನಗಳು :

- ಮದುವೆ ಮತ್ತು ಕುಟುಂಬ ಯಾವುದೇ ಸಮಾಜದ ಮೂಲಭೂತ ಅವಶ್ಯಕ ಮತ್ತು ಅನಿವಾರ್ಯ ಅಂಗಗಳು ಅವು ಒಂದೇ ನಾಣ್ಯದ ಎರಡು ಮುಖಗಳಂತೆ ಪರಸ್ಪರ ಪೂರಕವಾಗಿ ಸ್ತ್ರೀ-ಪುರುಷರು ಆ ಅಂಗಗಳ ಆಧಾರ ಘಟಕಗಳು
- ಕುಟುಂಬ ವ್ಯವಸ್ಥೆಗೆ ಮದುವೆ ಹೆಬ್ಬಾಗಿಲು
- ಮದುವೆಯೇ ಕುಟುಂಬದ ಪದ್ಧತಿಯ ಅಡಿಗಲ್ಲು
- ಹುಡುಗ-ಹುಡುಗಿಯರಿಗೆ ಏರ್ಪಡಿಸುವ ಧಾರ್ಮಿಕ ಮತ್ತು ಸಾಮಾಜಿಕ ಸಂಬಂಧವೇ ಮದುವೆ.
- ಮದುವೆಯಿಂದ ಸಮಾಜದಲ್ಲಿ ಗೌರವ ಹೆಚ್ಚಾಗುತ್ತದೆ.
- ಮದುವೆಯಿಂದ ವಂಶಾಭಿವೃದ್ಧಿಯಾಗುತ್ತದೆ.

ಹೀಗೆ ಮದುವೆಯಿಂದ ವಿವಿಧ ರೀತಿಯ ಪ್ರಯೋಜನೆಗಳಾಗುತ್ತವೆ.

ಅಧ್ಯಾಯ – ೩

ಮದುವೆಯ ಪ್ರಕಾರಗಳು

ಅಧ್ಯಾಯ – ೩

ಮದುವೆಯ ಪ್ರಕಾರಗಳು

ಮಾನವನ ಜೀವನದಲ್ಲಿ ಮದುವೆ ಎನ್ನುವುದು ಮಹತ್ವದ ಘಟನೆ. ಭಾರತೀಯರ ಜೀವನ ಪದ್ಧತಿಯಲ್ಲಿ ಇದೊಂದು ಮಹತ್ವದ ಸಂಸ್ಕಾರ ಈ ಸಂಸ್ಕಾರದ ಬಗ್ಗೆ ನಾವು ತಿಳಿಯಲು ವೀರಶೈವರಲ್ಲಿ ಬಹುಮುಖ್ಯವಾದ ಸ್ಥಾನವನ್ನು ಪಡೆದುಕೊಂಡಿದೆ. ಈ ಎಲ್ಲಾ ಸಂಸ್ಕಾರಗಳಿಗೆ ವೀರಶೈವನಾದವನು ಸ್ವಾಮಿ (ಜಂಗಮು)ನೊಬ್ಬನನ್ನು ಕರೆತಂದು ಊಟ–ಉಪಚಾರಗಳ ಮೂಲಕ ಆ ಸ್ವಾಮಿಯನ್ನು ಸಂತೋಷ ಪಡಿಸಲಾಗುತ್ತದೆ. ಆ ಸ್ವಾಮಿಯು ಸಂಸ್ಕಾರ ಕಾರ್ಯವನ್ನು ಕಡಿಮೆ ಸಮಯದಲ್ಲಿ ಎಲ್ಲಾ ಕಾರ್ಯಗಳನ್ನು ಸರಳವಾಗಿ ಮದುವೆಯ ವಿಧಿ–ವಿಧಾನಗಳನ್ನು ಪೂರ್ಣಗೊಳಿಸುತ್ತಾನೆ.

ಈ ಮದುವೆಯು ಆದಿಮಾನವರಲ್ಲಿ ಅನಾಗರಿಕ ವಾತಾವರಣವಿದ್ದ ಕಾಲದಲ್ಲಿ ಈ ಸಂಸ್ಕಾರಗಳ ಬಳಕೆಯಿರಲಿಲ್ಲ ಕಾಲಗತಿಸಿದಂತೆ ನಾಗರಿಕತೆಯು ಬೆಳೆದಂತೆ ಸಮಾಜದಲ್ಲಿ ಒಂದು ನಿರ್ದಿಷ್ಟ ನೆಲೆಯನ್ನು ಹೊಂದ ನಂತರ ಪ್ರಮುಖವಾಗಿ ಆಚಾರ–ವಿಚಾರಗಳನ್ನು ಮಾಡಿಕೊಂಡು ಮದುವೆ ಎಂಬ ಮೂರು ಅಕ್ಷರದ ಪದದಲ್ಲಿ ಎಲ್ಲಾ ಅಂಶಗಳನ್ನು ಒಳಗೊಂಡಿದ್ದು ಮುಂದೆ ಮುಖ್ಯ ಸಂಸ್ಕಾರವಾಗಿ ಬಳಕೆಗೆ ಬಂದಿತ್ತು

ಮದುವೆಯು ನಡೆದು ಬಂದದಾರಿಯನ್ನು ನೋಡಿದರೆ ಮೊದಲಿನ ಮದುವೆಗೂ ಈಗಿನ ಸಮಯದಲ್ಲಿ ನಡೆಯುವ ಮದುವೆಗಳಲ್ಲಿ ಒಂದಕ್ಕೆ ಒಂದು ಸಂಬಂಧವನ್ನು ಹೊಂದಿದ ಹಾಗೆ ಕಾಣುತ್ತವೆ. ನಾಗರಿಕತೆಯು ಬೆಳೆದಂತೆ ಸಾಮಾಜಿಕ ಕಟ್ಟುಪಾಡುಗಳಿಗೆ ಹಾಕಿದ ದಾರಿಯಲ್ಲಿ ನಡೆಯಲು ಮದುವೆಯು ನಡೆದು ಬಂದ ವೀರಶೈವ ಧರ್ಮ ಎಲ್ಲ ಧರ್ಮಗಳಲ್ಲಿ ಮದುವೆಯು ಪ್ರಮುಖ ಸಂಸ್ಕಾರವಾಗಿದೆ ಎಂದು ಒತ್ತಿ ಹೇಳುತ್ತದೆ.

ಪ್ರಾಚೀನ ಕಾಲದಲ್ಲಿ ಮದುವೆಯು ನಡೆದು ಬಂದ ದಾರಿಯನ್ನು ನೋಡಿದಾಗ ಒಟ್ಟು ಎಂಟು ರೀತಿಯ ಮದುವೆಯ ಪ್ರಕಾರಗಳನ್ನು ತಿಳಿಯಲಾಗುತ್ತದೆಮತ್ತು ಸ್ವಲ್ಪ ಸಮಯದ ನಂತರ ಅಂದರೆ ಪಾಶ್ಚಾತ್ಯ ಸಂಸ್ಕೃತಿಗಳ ಪ್ರಭಾವದಿಂದಾಗಿ ಈಗಿನ ರಿಜಿಸ್ಟ್ರ ಮದುವೆಯು ಆಧುನಿಕವಾಗಿ ಮದುವೆಯನ್ನು ನೋಡುತ್ತಿದ್ದೇವೆ.

ಮದುವೆ ನಡೆದು ಬಂದ ದಾರಿ :

೧) ಬ್ರಾಹ್ಮ ವಿವಾಹ (ಮದುವೆ)

೨) ದೈವ ವಿವಾಹ

೩) ಪ್ರಜಾಪತ್ಯ ವಿವಾಹ

೪) ಆರ್ಷ ವಿವಾಹ

೫) ಗಾಂಧರ್ವ ವಿವಾಹ

೬) ಅಸುರ ವಿವಾಹ

೭) ರಾಕ್ಷಸ ವಿವಾಹ

೮) ಪೈಶಾಚ ವಿವಾಹ

೧) ಬ್ರಾಹ್ಮ ಮದುವೆ :

ಮದುವೆಯು ನಡೆದು ಬಂದ ದಾರಿಯಲ್ಲಿ ಬ್ರಾಹ್ಮ ವಿವಾಹವು ಒಳ್ಳೆಯ ಸಂಸ್ಕಾರವನ್ನು ಹೊಂದಿತ್ತು ಎಂದು ನನ್ನ ವಿಚಾರವಾಗಿದೆ. ಏಕೆಂದರೆ ಈ ಮದುವೆ ಪದ್ಧತಿಯು ಇಂದಿನದಿನಗಳಲ್ಲಿ ಕಡಿಮೆಯಾಗಿದೆ ಎಂದು ಹೇಳಬಹುದು.

ಬ್ರಾಹ್ಮ ಮದುವೆ ಎಂದರೆ ವಧುವಿನ ತಂದೆ ಬಂಧುಗಳು ಒಳ್ಳೆಯ ವರನನ್ನು ನೋಡಿ ಮದುವೆ ಅಥವಾ ಧಾರೆಯ ಮೂಲಕ ವಧುವನ್ನು ಧಾರೆಯೆರೆಯುವ ಪದ್ಧತಿಯು ಇತ್ತು. ತಮ್ಮ ಕುಲಕ್ಕೆ, ಶೀಲ, ಉದ್ಯೋಗ, ಒಳ್ಳೆಯ ಗುಣ, ಆರೋಗ್ಯವಂತ, ಸುಂದರನಾದ ಹುಡುಗನನ್ನು ನೋಡಿ ಒಳ್ಳೆಯ ರೀತಿಯಿಂದ ತನ್ನ ಮಗಳು ಸಂತೋಷವಾಗಿರಬೇಕು ಎನ್ನುವ ವಿಚಾರ ಹುಡಗಿಯ ತಂದೆ ಬಂಧು ಬಳಗದವರ ವಿಚಾರವಾಗಿತ್ತು.

ಈ ಮದುವೆ ಪದ್ಧತಿಯು ಹಿಂದೂ ಮದುವೆ ಪದ್ಧತಿಯಲ್ಲಿ ಹುಡಗಿಯನ್ನು ಧಾರೆಯೆರೆದು ಆಕೆಯನ್ನು ಧಾನ ಮಾಡುವ ಒಂದು ಪವಿತ್ರ ಧಾರ್ಮಿಕ ಪವಿತ್ರ ಸಂಸ್ಕಾರವಾಗಿತ್ತೆಂದು ತಿಳಿಯಬೇಕಾಗುತ್ತದೆ. ಮದುವೆಯ ಪದ್ಧತಿಯಲ್ಲಿ ಮುಖ್ಯವಾಗಿ ತಿಳಿಯಬೇಕಾದೆಂದರೆ ಹುಡುಗಿಯ ಒಪ್ಪಿಗೆ ಮುಖ್ಯವಾಗಿ ಇರದೇ ತಂದೆಯ ಒಪ್ಪಿಗೆಯು ಆಕೆ ಒಪ್ಪಿಕೊಳ್ಳಬೇಕಾಗಿತ್ತು.

ಪರಂಪರೆಯಿಂದ ಮನೆತನಗಳಲ್ಲಿ ಈ ಮದುವೆ ಪದ್ಧತಿಯು ಮಹತ್ವವನ್ನು ಪಡೆದುಕೊಂಡಿರುತ್ತದೆ. ಅವರು ತಮ್ಮ ಗೌರವಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿರುತ್ತಾರೆ.

ಈ ಪದ್ಧತಿಯು ಕನ್ಯಾದಾನವನ್ನು ಮಾಡುವುದು ಬೇರೆ ಜೀವಿಯಲ್ಲಿ ಸೋದರಮಾವನ ಅಂದರೆ ತಾಯಿಯ ತಮ್ಮ-ಅಣ್ಣ ಯಾರಾದರು (ಕನ್ಯೆಯನ್ನು) ವಧುವನ್ನು ವರನಿಗೆ ಧಾನವಾಗಿ ಮಾಡುತ್ತಾರೆ ಆದರೆ ಕೆಲವು ಕಡೆಯ ವರನಿಗೆ ವಧುವನ್ನು ಧಾರೆಯೆರೆಯುತ್ತಿದ್ದಾರೆ.

ಒಟ್ಟಾರೆಯಾಗಿ ತಂದೆ-ತಾಯಿ ಕನ್ಯಾದಾನ ಮಾಡುವುದು ಬ್ರಾಹ್ಮ ವಿವಾಹ ಇದನ್ನು ಇಂದಿಗೂ ಆಚರಣೆಯಲ್ಲಿರುವುದನ್ನು ನಾವು ನೋಡುತ್ತಿದ್ದೇವೆ.

೨) ದೈವ ಮದುವೆ

ದೈವ ಮದುವೆ ಎಂದರೆ ಮಹಾಮೇಧಾವಿಯೂ ವಿದ್ವಾಂಸನು ಆದ ಪುರೋಹಿತನಿಗೆ ಕನ್ಯೆಯನ್ನು ಕೊಟ್ಟು ಮದುವೆ ಮಾಡುವುದು ಅಥವಾ ಪುರೋಹಿತನಿಗೆ ಹೆಣ್ಣನ್ನು ದಾನ ಕೊಡುವ ಅಥವಾ ಅಲಂಕೃತವಾದ ಹೆಣ್ಣನ್ನು ಯಜ್ಞಾಯಾಗಗಳನ್ನು ವೇದಿಕೆಯಲ್ಲಿ ಅಥವಾ ಪರಿಸರದಲ್ಲಿ ಯಜ್ಞಪುರೋಹಿತನಿಗೆ ಅಥವಾ ಜಂಗಮನಿಗೆ ವಧುವನ್ನು ದಾನಕೊಡುವ ಕ್ರಮವೇ ದೈವ ಮದುವೆ.

ದೈವ ಮದುವೆ ಎಂಬ ಹೆಸರು ಬರಲು ಕಾರಣವೇನೆಂದರೆ ದೇವರ ಅನುಗ್ರಹ ಮತ್ತು ಅನುಮತಿ ಪಡೆದೇ ಮದುವೆಯಾಗುವುದು ದೈವ ಮದುವೆಯ ಪದ್ಧತಿಗೆ ದೈವ ಮದುವೆ ಎಂದು ಕರೆಯಲಾಗಿದೆ. ಯಾರು ದೇವರನ್ನು ಯಜ್ಞಾನದಿಗಳ ಮೂಲಕ ಕರ್ಮಾಚರಣೆಗಳಿಂದ ಸಂತೃಪ್ತಗೊಳಿಸಲು ತಕ್ಕವರೋ ಅವರೇ ದೇವರಿಗೆ ಸಮಾನರಾದ ದೇವಮಾನವರು. ಅಂದರೆ ಋಷ್ವಿಜರು. ಅವರ ಜೊತೆಗೆ ಮಾಡುವ ಮದುವೆಯ ದೈವ ಮದುವೆಯ ಈ ಹೆಸರು ದೇವತೆಗಳ ಸಂಸರ್ಗದಿಂದ ನಿಷ್ಪನ್ನವಾದುದು. ದೇವತೆಗಳು ಈ ಪದ್ಧತಿಯನ್ನು ಶೋಧಿಸಿದವರು. ಹಾಗೆ ನೋಡಿದರೆ ಇದರಲ್ಲಿ ದೇವರ ಸಂಪರ್ಕದ ವಿಚಾರ ಎಲ್ಲ ನಿಜ. ಆದರೆ ದೇವಮಾನವರಾದ ಯಜ್ಞಪುರೋಹಿತರು ದೇವರ ಸಂತೃಪ್ತಿಗೆ ಶ್ರಮಿಸುವ ಮೂಲಕ ದೈವ ಸಮಾನರೆನಿಸಿದ್ದಾರೆ. ಹಾಗಾಗಿ ಈ ಮದುವೆಗೆ ದೈವಮದುವೆಯಂಬ ಹೆಸರು ಬರಲು ಕಾರಣವೆಂದು ತಿಳಿಯಲಾಗಿದೆ

ಈ ಮದುವೆಯು ಕನ್ಯೆಗಿಂತ ಉಚ್ಚ ಜನಾಂಗದವರಿಗೆ ದಾನಮಾಡುವ ಪದ್ಧತಿ ಸಾಮಾನ್ಯವಾಗಿ ಮದುವೆಯಾದ ನಂತರ ಮಗುವಿಗೆ ಜನ್ಮಕೊಟ್ಟ ಸ್ತ್ರೀಯು

ಆಕೆಗೆ ಮಕ್ಕಳು ಜೀವಂತ ಇಲ್ಲದಿರುವಾಗ ಅವರು ಹೇಳಿ ಕೇಳಿಸಿದಾಗ ಅಥವಾ ಪಂಚಾಗ ನೋಡಿದಾಗ ಜಂಗಮರು (ಗುರು) ತಿಳಿಸಿದಾಗ ಈ ತನಗೆ ಹೆಣ್ಣುಮಗಲು ಜನ್ಮಿಸಿದ್ದರೆ ನಾನು ಜಂಗಮನಿಗೆ ಮದುವೆಯನ್ನು ಮಾಡುಕೊಡುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿದಾಗ ಆ ಮಗು ಜನಿಸಿದ ನಂತರ ಮದುವೆಯ ವಯಸ್ಸಿಗೆ ಬಂದಾಗ ಆಕೆಯನ್ನು ಜಂಗಮರ ಮನೆಗೆ ಕೊಟ್ಟು ಮದುವೆಯನ್ನು ಮಾಡಿ ನಂತರ ಅವರಿಗೆ ದಾನದ ರೂಪದಲ್ಲಿ ಹಣಗಳನ್ನು ಕೊಡುತ್ತಾರೆ. ಈ ರೀತಿಯ ಮದುವೆ ಮಾಡಿದ್ದನ್ನು ನಾವು ಸಂಪ್ರದಾಯದಿಂದ ಕೂಡಿದ ಮನೆಯಲ್ಲಿ ನೋಡುತ್ತೇವೆ ಮತ್ತು ದೇವರಲ್ಲಿ ನಂಬಿಕೆಯನ್ನು ತಿಳಿಸುತ್ತದೆ.

೩) ಪ್ರಜಾಪತ್ಯ ಮದುವೆ

ಪ್ರಾಚೀನಕಾಲದಲ್ಲಿ ಈ ಮದುವೆಯು ಬ್ರಾಹ್ಮರ ಮದುವೆ ಪ್ರಕಾರದಲ್ಲಿ ಒಂದು ಆದರೆ ಈ ಪದ್ಧತಿಯು ನಮ್ಮ ಧರ್ಮದಲ್ಲಿಯು ರೂಢಿಯಲ್ಲಿ ಇವೆ.

ಪ್ರಜಾಪತ್ಯ ಮದುವೆಯು ಬ್ರಾಹ್ಮ ಮದುವೆಯಂತೆ ಆದರೆ ಈ ವಿಧಾನದಲ್ಲಿ ಕನ್ಯಾದಾನ ಮಾಡುವವರು ತಂದೆ-ತಾಯಿಗಳ ಬದಲಾಗಿ ಬೇರೆ ಯಾರಾದರೂ ಆಗಿರಬಹುದು.

ಈ ಮದುವೆಯ ಪದ್ಧತಿಯಲ್ಲಿ ಒಳ್ಳೆಯ ಯೋಗ್ಯನಾದ ವರನನ್ನು ಗೌರವದಿಂದ ಕರೆತಂದು ಕನ್ಯಾದಾನ ಮಾಡುತ್ತಾರೆ. ಕನ್ಯಾಪಿತೃವಿನ ಬದಲಾಗಿ ಆಕೆಯ, ಕನ್ಯೆ ಸಂಬಂಧಿಕರು ಆಕೆಯನ್ನು ಆ ವರನ ಜೊತೆಗೆ ದಾನವನ್ನು ಮಾಡುತ್ತಾರೆ. ಈ ಪದ್ಧತಿಯಲ್ಲಿ ಧಾರ್ಮಿಕ ಆಚರಣೆಯಿಂದ ವಧು ವರ ಇಬ್ಬರು ತಮ್ಮ ಒಳ್ಳೆಯ ಉದ್ದೇಶದಿಂದ ಕೊನೆಯವರೆಗೂ ಅವರು ಒಂದಾಗಿ ಬಾಳಬೇಕು ಎಂಬುವುದಾಗಿದೆ.

ನೀವಿಬ್ಬರೂ ಒಂದುಗೂಡಿ ಧಾರ್ಮಿಕ ವಿಧಿ-ವಿಧಾನಗಳನ್ನು ಆಚರಿಸಿ ಎಂಬ ಮಂತ್ರಪಠಣದ ಮೂಲಕ ಕನ್ಯೆಯನ್ನು ವರನಿಗೆ ದಾನ ಮಾಡುತ್ತಿದ್ದರು. ನೀವಿಬ್ಬರೂ ಒಂದುಗೂಡಿ ಧಾರ್ಮಿಕ ಕರ್ತವ್ಯಗಳನ್ನು ಆಚರಿಸಬೇಕೆಂಬುದು ಕನ್ಯಾದಾನದ ಕಾಲದಲ್ಲಿ ಹೇಳುತ್ತಾ ಅವಳನ್ನು ಸತ್ಕರಿಸಿ ದಾನ ಮಾಡುವುದು ಪ್ರಜಾಪತ್ಯದ ಲಕ್ಷಣ ವರ-ವಧುವಿನ ಕೈಯನ್ನು ಹಿಡಿಯಲು ಪ್ರತಿಜ್ಞೆಯನ್ನು ಮಾಡುತ್ತಾರೆ.

ಈ ಮದುವೆಯು ಕಾಮತೃಪ್ತಿಯ ಸಲುವಾಗಿ (ಪುತ್ರ) ಸಂತಾನ ಜನನದಿಂದ ಪುಣ್ಯ ಬರುತ್ತದೆ ಮತ್ತು ಮುಖ್ಯವಾಗಿ ಗಂಡು ಮಗನ ಜನನದಿಂದ

(ವಂಶವು) ತಮ್ಮ ಕುಲವು ಮುಂದುವರೆಯುತ್ತದೆ ಅಷ್ಟೇ ಅಲ್ಲ ಗಂಡು ಮಗನ [illegible] ಮೋಕ್ಷವು ದೊರೆಯುತ್ತದೆ. [illegible] ಸ್ಥಾನದೊರೆಯುತ್ತವೆ ಈ ರೀತಿಯಾದ ಕೆಲವು ವಿಚಾರಗಳು ಒಟ್ಟಾರೆಯಾಗಿ ಈ ಪ್ರಜಾಪತ್ಯ ಮದುವೆಯ ಪದ್ಧತಿಯು ಏಕಪತ್ನಿತ್ವ ಮದುವೆಗೆ ಪೂರಕವಾಗಿದೆ ತಂದೆ ತನ್ನ ಮಗಳನ್ನು ಸ್ವ ಇಚ್ಛೆಯಿಂದ ದಾನವನ್ನು ಮಾಡುತ್ತಾನೆ ಈ ಪದ್ಧತಿಯಲ್ಲಿ ಸಮಾಜಿಕವಾಗಿಯು ಉನ್ನತ ಸ್ಥಾನದಲ್ಲಿತ್ತು.

೪) ಆರ್ಷ ಮದುವೆ :

ಆರ್ಷ ಮದುವೆ ಪದ್ಧತಿಯು ವ್ಯಾಪಾರದ ಹಾಗೆ ನಡೆದು ಬಂದಿತ್ತು. ಮಾರಾಟ ಮದುವೆ ಪದ್ಧತಿಯು (ತಲೆದೋರಿದೆ) ಹೆಚ್ಚಾಗಿ ಕಾಣಿಸಿಕೊಂಡಿತ್ತು. ಮದುವೆ ಎಂತಹ ಸಾಂಸ್ಕೃತಿಕ ವಲಯದಲ್ಲಿ ಮಾರಾಟ ಪದ್ಧತಿಯನ್ನು ದಿಕ್ಕರಿಸುವ ವ್ಯವಸ್ಥೆಯನ್ನು ಹುಡುಕಿಕೊಳ್ಳುವ ಪ್ರಯತ್ನ ಅಂದಿನ ಸಮಾಜದಲ್ಲಿ ಜನಸಮುದಾಯದಲ್ಲಿ ಒಂದು ಸಸಿಯನ್ನು ಮೂಡಲು ಪ್ರಾರಂಭವಾಯಿತು.

"ಆರ್ಷ" ಎಂದರೆ "ಋಷಿ ಅಥವಾ ಜ್ಞಾನಿ" ಮೊದಲಾದ ಪ್ರಾಜ್ಞರ ಜತೆ ಮದುವೆ ಸಂಬಂಧ ಹೊಂದಿರುವುದನ್ನು ಸೂಚಿಸುತ್ತದೆ. ಯಾವುದೇ ಬಗ್ಗೆಯು ಶುಲ್ಕವಿಲ್ಲದೆ ವಧುವನ್ನು ಮದುವೆಯಾಗುತ್ತಿದ್ದ ವಿದ್ವಾಂಸರು ತಮ್ಮ ಧರ್ಮಚಾರಣೆಗಾಗಿ ಜೋಡಿ ಆಕಳನ್ನು ವಧುವಿನ ಜೊತೆಗೆ ಪಡೆಯುತ್ತಿದ್ದರು ಹಾಗೆಯೇ ಕೆಲವು ಸಲ ಯಾವುದೇ ನಿಯಮವನ್ನೂ ವಿಧಿಸದೆ ಮುನಿಗಳ ಜೊತೆಗೆ ಗೌರವದಿಂದ ಮದುವೆಯಾಗುತ್ತಿತ್ತು. ಹಾಗಾಗಿ ಆರ್ಷ ಮದುವೆಯು ದಿವ್ಯ ಮುನಿಗಳ ಮದುವೆ ಪದ್ಧತಿಯಾಗಿತ್ತು.

ಮದುವೆಯ ಸಮಯದಲ್ಲಿ ಹಸುವನ್ನು ಈ ಸಮಯದಲ್ಲಿಯು ಸಹ ಕೊಡುತ್ತಾರೆ. ಏಕೆಂದರೆ ವಧುವಿನ ಸಂಬಂದಿಕರು ಮದುವೆಯನ್ನು ನಿಶ್ಚಯಿಸಿದಾಗ ಮೊದಲೇ ಆ ಮನೆಯವರ ಜೊತೆಗೆ ತನ್ನ ಹಿರಿಯ ಮಗಳನ್ನು ಕೊಟ್ಟು ಮದುವೆಯನ್ನು ಮಾಡಿದರೆ ಆ ಮನೆಗೆ ಹೊಸ ವಧುವನ್ನು ಮೂರನೇಯ ಹೆಣ್ಣು ಮಗಳನ್ನು ಅದೇ ಮನೆಗೆ ಕೊಡಬೇಕು ಎಂದು ನಿಶ್ಚಿಯಿಸಿದ್ದಾಗ ಮೂರು ಸಂಖ್ಯೆಯು ಒಳ್ಳೆಯದಲ್ಲ ಎಂಬ ನಂಬಿಕೆಯು ನಮ್ಮ ಹಿರಿಯರದಾಗಿತ್ತು ಆದ್ದರಿಂದ ಮೊದಲು ಒಂದು ಹಸುವನ್ನು ಕೊಟ್ಟು ನಂತರ ತನ್ನ ಮೂರನೇಯ ಮಗಳನ್ನು ವರನ ಜೊತೆಯಲ್ಲಿ ಮದುವೆಯನ್ನು ಮಾಡುತ್ತಿದ್ದರು.

ಈ ಮದುವೆ ಪದ್ಧತಿಯು ಬ್ರಾಹ್ಮಣರಲ್ಲಿ ಹೆಚ್ಚಾಗಿ ನಡೆದುಕೊಂಡು ಬಂದಿದೆ ಎಂದು ತಿಳಿಸಬಹುದು.

೫) ಗಾಂಧರ್ವ ಮದುವೆ

ಈ ಮದುವೆಯು ಪ್ರೇಮ ಮದುವೆಯ ರೀತಿಯಲ್ಲಿ ನಡೆಯುವುದು ಹುಡುಗ ಹುಡುಗಿಯ ಒಪ್ಪಿಗೆಯ ಮೇರೆಗೆ, ಹಿರಿಯರು ನಿಶ್ಚಯಿಸ ಬೇಕಾಗಿಲ್ಲ. ಸ್ವ ಇಚ್ಛೆಯಿಂದ ಒಬ್ಬರಿಗೊಬ್ಬರು ಒಪ್ಪಿಕೊಂಡು ಮದುವೆಯಾಗುವುದಕ್ಕೆ ಪ್ರೇಮ ಮದುವೆ ಅಥವಾ ಗಾಂಧರ್ವ ಮದುವೆ ಎನ್ನುತ್ತಾರೆ.

ಈ ಮದುವೆ ಪದ್ಧತಿಯ ಮುಖ್ಯ ಉದ್ದೇಶ ದೈಹಿಕ ಸುಖವಾಗಿದೆ ಏಕೆಂದರೆ ಹುಡುಗ-ಹುಡುಗಿಯು ಒಬ್ಬರಿಗೊಬ್ಬರು ಒಪ್ಪಿಕೊಂಡು ಮದುವೆಯಾದರೆ ಅವರ ಅಭಿರುಚಿಗಳನ್ನು ತಿಳಿದುಕೊಂಡವರಾಗಿರುತ್ತಾರೆ. ಅವರ ದಾಂಪತ್ಯ ಜೀವನವು ಸುಖವಾಗಿ ನೆಮ್ಮದಿಯಿಂದ ಜೀವನವನ್ನು ನಡೆಸುತ್ತಾರೆ ಎಂಬ ನಂಬಿಕೆಯಿರುತ್ತದೆ. ಈ ರೀತಿಯ ಮದುವೆ ಪದ್ಧತಿಯಲ್ಲಿ ಯಾವುದೇ ಸಂಪ್ರದಾಯದ ನಂಬಿಕೆಗಳಾಗಲಿ ಆಚಾರ-ವಿಚಾರಗಳಾಗಲಿ ಇರುವುದಿಲ್ಲ. ವಧು - ವರನ ಪ್ರೇಮವೇ ಈ ಎಲ್ಲದಕ್ಕೂ ಒಂದೆ ಎರಡು ಮನಸ್ಸುಗಳು ಮದುವೆಯಾಗಿರುತ್ತವೆ ಈ ಮದುವೆಯಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.

ಈ ಮದುವೆ ಪದ್ಧತಿಯಲ್ಲಿ ಗಂಡು-ಹೆಣ್ಣುಗಳಿಬ್ಬರೂ ಮದುವೆಯಾಗಲು ಒಪ್ಪಿರಬೇಕು ಗಂಡನಿಗೆ ತನಗೆ ಸರಿಸಮಾನಳಾದ ಅಂತಸ್ತಿಗೆ ತಕ್ಕ ಗೌರವದ ಹೆಣ್ಣನ್ನು ಒಪ್ಪಿರಬೇಕು. ಇಲ್ಲಿ ತಾನು ಯಾವಜಾತಿಯವನು ಹೆಣ್ಣು ಸಹ ಅದೇ ಜಾತಿಯವಳು ಆಗಿರಬೇಕು ಎಂಬ ವಿಚಾರ ಇರುವುದಿಲ್ಲ. ಗಂಡು-ಹೆಣ್ಣುಗಳ ಇಬ್ಬರ ಮನಸ್ಸು ಒಪ್ಪಿದರಾಯಿತು ಅದೇ ಗಾಂಧರ್ವ ಮದುವೆಯಾಗಿವೆ ಅಥವಾ ಪ್ರೇಮ ಮದುವೆ.

೬) ಅಸುರ ಮದುವೆ :

ಈ ಮದುವೆ ಪದ್ದತಿಯಲ್ಲಿ ಕನ್ಯೆಯನ್ನು ಹಣವನ್ನು ಕೊಟ್ಟುಕೊಂಡು ಕೊಳ್ಳುವುದು ಅಥವಾ ಕನ್ಯೆಯನ್ನು ಬಹುಮಾನವಾಗಿ ಕೊಡುವುದು ಮುಂತಾದವು. ಇಂತಿಷ್ಟು ಹಣ ಕೊಡಬೇಕು ಎಂದು ಮೊದಲೇ ನಿರ್ಧಾರ ಮಾಡಿ ಆ ಹಣವನ್ನು ಸಲ್ಲಿಸಿದ ನಂತರ ಕನ್ಯೆಯನ್ನು ಮದುವೆ ಮಾಡುತ್ತಾರೆ ಈ ಪದ್ಧತಿಯ ಹಣವನ್ನು ಕೊಟ್ಟು ಕನ್ಯೆಯನ್ನು ಮದುವೆಯಾಗುವುದಕ್ಕೆ ವಧು ದಕ್ಷಿಣೆ ಎಂದು ಕರೆಯುತ್ತಾರೆ.

ಈ ಆಚರಣೆಯಲ್ಲಿ ಹಣವನ್ನು ಹೆಣ್ಣಿನ ಬಂಧುಗಳಿಗೆ ಹಣವನ್ನು ಕೊಟ್ಟು ಸಂತೋಷ ಪಡಿಸುವುದಾಗಿದೆ. ಹೆಣ್ಣನ್ನು ಮದುವೆಯ ಸಮಯದಲ್ಲಿ ಹಣ್ಣಿಗೆ ವಧು ದಕ್ಷಿಣೆಯನ್ನು ಕೊಟ್ಟು ಮದುವೆ ಆಗುವುದು ಅಸುರ ಪದ್ಧತಿಯಲ್ಲಿ ಬಂದಿದೆ ಅಂದರೆ "ಅಸುರ" ಹೆಸರು ಹೇಳುವಂತೆ ಅವರು ಶ್ರೀಮಂತ ವರ್ಗದವರಾಗಿರುತ್ತಿದ್ದರು. ಅದರಿಂದ ಅವರ ಮದುವೆಯಾಗುವ ಹೆಣ್ಣನ್ನು ಹಣವನ್ನು ಕೊಟ್ಟು ಮದುವೆಯಾಗುತ್ತಿದ್ದರು.

ಅಸುರ ಮದುವೆ ಅಸುರ ಎಂದರೆ ರಾಜ ಸಹ ಆಗುತ್ತದೆ. ಆ ಪ್ರಾಚೀನ ಸಮಯದಲ್ಲಿ ಅಸುರ ಮದುವೆ ಎಂದರೆ ಶ್ರೀಮಂತರ ಮದುವೆ ಎಂದು ತಿಳಿಯಲಾಗುತ್ತದೆ. ಈ ಮದುವೆಯು ಈ ಸಮಯದಲ್ಲಿ ಬದಲಾಗಿದೆ ವಧುವನ್ನು ವರನಿಗೆ ವರದಕ್ಷಿಣೆಯನ್ನು ಕೊಟ್ಟು ಮದುವೆಯಾಗುವ ಪದ್ಧತಿಯಿದೆ.

ಅಸುರ ಮದುವೆಯು ಸಾಮಾಜಿಕವಾಗಿ ವರನು ಶ್ರೀಮಂತನು ಅಥವಾ ಅಂತಸ್ಥನ್ನು ನಿರ್ಧರಿಸಲಗಿದೆ. ವರನು ಶ್ರೀಮಂತನಾಗಿದ್ದರೆ ಆತನಿಗೆ ಅನೇಕ ಸೌಲಭ್ಯಗಳನ್ನು ದೊರೆಯುತ್ತವೆ. ಜೊತೆಗೆ ವಧುವಿನ ಸಂಬಂಧಿಕರಿಗೆ ಗೌರವವೂ ದೊರೆಯುತ್ತದೆ. ಈ ಕಾರಣಕ್ಕಾಗಿಯೇ ಅಸುರ ಮದುವೆಯು ವರನನ್ನು ಶ್ರೀಮಂತ ಎಂದು ಗೌರವಕ್ಕೆ ಮಹತ್ವವನ್ನು ಕೊಡಲಗುತ್ತದೆ.

೭) ರಾಕ್ಷಸ ಮದುವೆ

ಕನ್ಯೆಯನ್ನು ಆಕೆಯ ಇಚ್ಛೆಗೆ ವಿರುದ್ಧವಾಗಿ ಅಪಹರಿಸಿ ಆಕೆಯನ್ನು ತನ್ನ ಕಾಮದ ಆಸೆ ಅಥವಾ ಲೈಂಗಿಕ ಆಸೆಯನ್ನು ಬಲತ್ಕಾರವಾಗಿ ಆಕೆಯನ್ನು ಅಪಹರಿಸಿ ಕಾಮ ತೃಪ್ತಿ ಮಾಡುವುದೇ ರಾಕ್ಷಸ ಮದುವೆ. ಕನ್ಯೆಯನ್ನು ಅಪಹರಿಸುವಾಗ ಆಕೆಯ ಸಂಬಂಧಿಕರು ತಡೆಯನ್ನು ಮಾಡಿದರೆ ಅವರನ್ನು ಕೊಂದು ಕನ್ಯೆಯನ್ನು ಭುಜದ ಮೇಲೆ ತೆಗೆದುಕೊಂಡು ಹೋಗುತ್ತಾರೆ.

ಈ ಮದುವೆ ಪದ್ಧತಿಯಲ್ಲಿ ಹೆಣ್ಣಿನ ಇಚ್ಛೆಯ ವಿರುದ್ಧ ಆಕೆಯನ್ನು ಲೈಂಗಿಕ ಸುಖದ ನಂತರವೇ ಮದುವೆ ಯಾಗುವ ಪದ್ಧತಿ ಈ ಪದ್ಧತಿಯಲ್ಲಿ ಹೆಣ್ಣು ಅಳುವುದನ್ನು ಆಕೆಯು ಗಂಡನ ಮನೆಗೆ ಹೋಗುವಾಗ ಅಳುವುದನ್ನು ಈ ರಾಕ್ಷಸ ಮದುವೆ ಪದ್ಧತಿಯಲ್ಲಿ ಆಕೆಯನ್ನು ಬಲತ್ಕಾರವಾಗಿ ಎತ್ತಿಕೊಂಡು ಹೋಗುವ ಸಮಯದಲ್ಲಿ ಆಕೆಯ ರೋಧನೆಯನ್ನು ತಿಳಿಸುತ್ತದೆ. ಅಂದರೆ ಆಕೆಯು ಇಚ್ಛೆಯ ವಿರುದ್ಧ ಎಂದು ತಿಳಿಯಲಾಗುತ್ತದೆ. ಕನ್ಯೆಯು ತವರು ಮನೆಯನ್ನು ಬಿಡುವಾಗ ಅಳುವುದು ಈಗಲೂ ಇದೆ. ಹಿಂದೂ ಮದುವೆ ಸಂದರ್ಭದಲ್ಲಂತೂ ಹೆಣ್ಣು ಮದುವೆ ಸಮಯದಲ್ಲಿ ಅಳುವುದು ಸಾಮಾನ್ಯ ಇವು ರಾಕ್ಷಸ ಮದುವೆಯ ಚಿನ್ಹೆಗಳೇ ಆಗಿವೆ.

೮) ಪೈಶಾಚ ಮದುವೆ

ಈ ಮದುವೆಯು ಸಹ ರಾಕ್ಷಸ ಮದುವೆ ಯಾವರೀತಿಯಿಂದ ಮದುವೆಯು ನಡೆಯುತ್ತದೆ ಹಾಗೆಯೇ ಈ ಪೈಶಾಚ ಮದುವೆಯಾಗಿವೆ. ಅಂದರೆ ಹೆಣ್ಣೊಬ್ಬಳು ಮಲಗಿದ ಸಮಯದಲ್ಲಿ ಪ್ರಜ್ಞೆಯನ್ನು ಕಳೆದುಕೊಂಡಿದ್ದಾಗ ಆಕೆಯನ್ನು ಮೋಸದಿಂದ ಆಕೆಗೆ ತಿಳಿಯದ ಸ್ಥಳಕ್ಕೆ ಕರೆದುಕೊಂಡು ಹೋಗಿ ಆಕೆಯ ಜೊತೆಗೆ ಲೈಂಗಿಕ ಅಪೇಕ್ಷೆಯನ್ನು ಪೂರೈಸಿಕೊಂಡ ನಂತರ ಆಕೆಯನ್ನು ಮದುವೆಯಾಗುವುದಕ್ಕೆ ಪೈಶಾಚ ಮದುವೆ ಎನ್ನುತ್ತಾರೆ.

ಪ್ರಾಚೀನ ಸಮಾಜ ಅಭಿವೃದ್ಧಿಯನ್ನು ಪಡೆದಂತೆಲ್ಲಾ ಪೈಶಾಚ ಪದ್ಧತಿಯಲ್ಲಿ [illegible] [illegible] ಬದಲಾವಣೆಗಳು [illegible] ತಲೆದೋರಿದ್ದವು. ಈ ಪದ್ಧತಿಯ ಬದಲಾಗಿ ಹಣ ಅಥವಾ ವಸ್ತುಗಳನ್ನು ಕೊಟ್ಟು ಸ್ನೆಹದಿಂದ ಪ್ರೀತಿಯಿಂದ ಸಂಬಂಧ ಬೆಳೆಸಲಾಯಿತು.

ಈ ಮೇಲಿನ ಮದುವೆಯ ಪದ್ಧತಿಗಳು ರಾಮಾಯಣ ಮಹಾಭಾರತ ಋಗ್ವೇದ ಕಾಲದಿಂದ ಮದುವೆಯ ಪದ್ಧತಿಯ ಆಚರಣೆಯನ್ನು ನೋಡಿದ್ದೇವೆ ಈಗ ನಾವು ಸಮಾಜಶಾಸ್ತ್ರದ ಹಿನ್ನಲೆಯಲ್ಲಿ ಮದುವೆಯ ಪ್ರಕಾರಗಳನ್ನು ನೋಡೋಣ

ಸಮಾಜಶಾಸ್ತ್ರ ಹಿನ್ನೆಲೆ :

೧) ಬಾಲ್ಯ ಮದುವೆ
೨) ವಿಧುವಾ ಮದುವೆ
೩) ವಯಸ್ಕರ ಮದುವೆ
೪) ಪ್ರೇಮ ಮದುವೆ
೫) ಕಲ್ಯಾಣ ಮದುವೆ
೬) ರಿಜಿಸ್ಟ್ರ ಮದುವೆ
೭) ಇಂಟರನೇಟ ಮದುವೆ
೮) ಏಕ ಪತ್ನಿತ್ವ
೯) ಬಹುಪತ್ನಿತ್ವ
೧೦)ಬಹುಪತಿತ್ವ

ಈ ಎಲ್ಲಾ ಮದುವೆಗಳು ಇಂದಿನ ಸಮಾಜದಲ್ಲಿ ಜಾರಿಯಲ್ಲಿವೆ ಆಧುನಿಕತೆ ಬೆಳೆದಂತೆಲ್ಲಾ ಪಾಶ್ಚಾತ್ಯ ದೇಶಗಳ ಪ್ರಭಾವದಿಂದಾಗಿ ಮದುವೆಯ ಬಗ್ಗೆ ಕೆಲವು ಬದಲಾವಣೆಗಳನ್ನು ನೋಡಬಹುದಾಗಿದೆ. ಮದುವೆಯನ್ನು ಮಾಡುವಾಗ ಕೆಲವು ಕಟ್ಟುಪಾಡು ನಂಬಿಕೆಗಳನ್ನು ಹೊಂದಿವೆ. ಒಳ ಸಂಬಂಧಿಕರಿಗೆ ಮದುವೆಯಾಗಬಾರದು ಏಕೆಂದರೆ (ರಕ್ತ) ಸಂಬಂಧದಿಂದ ಮುಂದೇ ಅವರು ಜನ್ಮ ನೀಡುವ ಮಕ್ಕಳು ಅಂಗವಿಕಲರಾಗುತ್ತಾರೆ ಎಂಬುದು ವೈದ್ಯರ ಅನಿಸಿಕೆ. ಇದೇರೀತಿ ಮದುವೆಯು ಕಾಲ ಮಾನಕ್ಕೆ ತಕ್ಕಂತೆ ಅದರ ಮಹತ್ವ ಮತ್ತು ಪ್ರಕಾರಗಳನ್ನು ಹೊಂದಿದೆ.

೧) ಬಾಲ್ಯ ಮದುವೆ

ಈ ಮೊದಲು ಬಾಲ್ಯವಿವಾಹವು ಹೆಚ್ಚು ಬಳಕೆಯಲ್ಲಿತ್ತು ಬಾಲ್ಯ ವಿವಾಹ ಎಂದರೆ ಹುಡುಗ ಹುಡಗಿಯು ಚಿಕ್ಕ ಮಕ್ಕಳಾಗಿದ್ದಾಗಲೇ ಮದುವೆಯನ್ನು ಮಾಡುತ್ತಿದ್ದರು.

ಆ ಮಕ್ಕಳ ತಂದೆ-ತಾಯಿಂದಿರು, ಕೆಲವರಂತೂ ತೊಟ್ಟಿಲಿನ್ನಲ್ಲಿ ಮದುವೆಯನ್ನು ಮಾಡುತ್ತಿದ್ದರು. ಆ ಮಕ್ಕಳಿಗೆ ತಿಳಿದಿರುತ್ತಿರಲಿಲ್ಲ. ಯೌವನದ ಸಮಯದಲ್ಲಿ ಆ ಹುಡುಗನು ಈಕೆಯ ಗಂಡ ಎಂದಾಗ ಆ ಮಕ್ಕಳಿಗೆ ಅಥವಾ ಹುಡಗಿಗೆ ತಿಳಿಯುತ್ತಿತ್ತು.

ಈ ಬಾಲ್ಯ ಮದುವೆಯನ್ನು ಮಾಡಲು ಮುಖ್ಯವಾದ ಕಾರಣ ಅವರ ಆರ್ಥಿಕ ಪರಿಸ್ಥಿತಿ, ಒಂದು ಮದುವೆ ನಡೆದಾಗಿ ಅದರೊಂದಿಗೆ ಇನ್ನೊಂದು ಮದುವೆ ನಡೆಸುತ್ತಿದ್ದರು. ಹೆಣ್ಣನ್ನು ಜನ್ಮ ಕೊಟ್ಟ ತಂದೆ-ತಾಯಿಯರ ಹೊರೆ ಕಡಿಮೆಯಾಗುತ್ತದೆ. ಎಂಬ ವಿಚಾರ. ಬಾಲ್ಯದಲ್ಲಿ ಮಕ್ಕಳಿಗೆ ಮದುವೆಯನ್ನು ಮಾಡಿದರೆ ಅವರು ನಾವು ಹೇಳಿದ ಹಾಗೆ ನಡೆದುಕೊಳ್ಳುತ್ತಾರೆ ಎಂಬ ನಂಬಿಕೆಯಿಂದ

ಬಾಲ್ಯ ಮದುವೆಯು ಹೆಚ್ಚಾಗಿ ರಕ್ತ ಸಂಬಂಧದಲ್ಲಿಯೆ ಅಂದರೆ ಸಂಬಂಧದಲ್ಲಿಯೇ (ತಂಗಿಯ ಮಗ-ಅಣ್ಣನ ಮಗಳು) ಈ ರೀತಿಯಿಂದ ತಮ್ಮ ಸಂಬಂಧವು ಮುಂದೆಯು ಒಳ್ಳೆಯ ರೀತಿಯಿಂದ ಮುಂದುವರೆದು ಹೋಗಲಿ ಎಂದು ತಮ್ಮ ಮನೆಯ ಸಂಬಂದ ಇರಲಿ ಎಂದು ಅಕ್ಕ-ತಂಗಿಯರು ಅಣ್ಣನ ಮಕ್ಕಳಿಗೆ ಹೆಣ್ಣು ಕೊಡುವರು.

ಆದರೆ ಈ ಪದ್ಧತಿಯು ಈ ಸಮಯದಲ್ಲಿ ಕಡಿಮೆಯಾಗಿದೆ. ಮದುವೆಗೂ ಸಹ ಕಾನೂನಿನಲ್ಲಿ ನಿರ್ದಿಷ್ಠವಾದ ವಯಸ್ಸನ್ನು ನಿರ್ಧರಿಸಲಾಗಿದೆ. ಆ ವಯಸ್ಸಿಗಿಂತ ಕಡಿಮೆ ವಯಸ್ಸಿನಲ್ಲಿ ಮದುವೆಯನ್ನು ಮಾಡಿದರೆ ಅವರಿಗೆ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಜನರಲ್ಲಿಯು ತಿಳುವಳಿಕೆ ಬಂದಿದರಿಂದ ತಮ್ಮ ಮಕ್ಕಳಿಗೆ ಬಾಲ್ಯದಲ್ಲಿ ಮದುವೆಯನ್ನು ಮಾಡುತ್ತಿಲ್ಲ.

ಬಾಲ್ಯ ವಿವಾಹ ತಡೆ ಕಾಯ್ದೆ-೧೯೨೯ರಲ್ಲಿ ಬಾಲ್ಯ ವಿವಾಹವನ್ನು ಮಾಡಬಾರದೆಂದು ಸರಕಾರವೂ ೧೯೨೯ರಲ್ಲಿ ಕಾಯ್ದೆಯನ್ನು ಜಾರಿಗೆ ತಂದಿತು.

ಬಾಲ್ಯದಲ್ಲಿ ಮದುವೆ ಮಾಡಿದರೆ ಆಗುವ ಹಾನಿಗಳು :

೧) ಮದುವೆಯಾದ ಮಕ್ಕಳಲ್ಲಿ ತಿಳುವಳಿಕೆ ಇರುವುದಿಲ್ಲ
೨) ಹುಡುಗಿಯು ಋತುಮತಿಯಾದ ನಂತರ ಕಡಿಮೆ ವಯಸ್ಸಿನಲ್ಲಿಯೇ ಗರ್ಭಿಣಿಯಾಗುತ್ತಾಳೆ. ಇದರಿಂದ ಆ ಹುಡಗಿಯ ಪ್ರಾಣವನ್ನು ಕಳೆದುಕೊಳ್ಳುವಂತಹ ಸಂದರ್ಭ ಬರುತ್ತದೆ.

೩) ಹುಡಗಿಯ (ಶಕ್ತಿಯನ್ನು) ಆರೋಗ್ಯವು ಹದಗೆಡುತ್ತದೆ.
೪) ಬಡತನವು ತಾಂಡವಾಡುತ್ತದೆ.

ಬಾಲ್ಯ ಮದುವೆಯನ್ನು ಮಾಡಿದರೆ ಈ ರೀತಿಯ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಇತ್ತೀಚಿನ ಜನರಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಾಗಿರುವುದರಿಂದ, ಅವರು ಮುಂದೆಯಾಗುವ ಅನಾಹುತಗಳನ್ನು ತಿಳಿಸು ಕೊಂಡಿದರಿಂದ ಈ ಮದುವೆಯು ಮಾಡುವ ಪದ್ಧತಿ ಕಡಿಮೆಯಾಗಿದೆ.

೨) ವಿಧವಾ ಪುನರ್ವಿವಾಹ

ವಿಧವಾಪುನರ್ವಿವಾಹ ಎಂದರೆ ಗಂಡ ಸತ್ತನಂತರ (ಹೆಂಗಸು) ಹೆಂಡತಿಯು ಬೇರೆಯವರ ಜೊತೆ ಮದುವೆಯಾಗುವುದನ್ನು ವಿಧವಾ ಪುನರ್ವಿವಾಹ ಎನ್ನುತ್ತಾರೆ.

ಪ್ರಾಚೀನ ಕಾಲದ್ಲಲಿ ಗಂಡ ಸತ್ತ ಸಮಯದಲ್ಲಿ ಅವನ ಹೆಂಡತಿಯು ಬೆಂಕಿಗೆ (ಚಿಂತೆಗೆ) ಹಾರುವ ಪದ್ಧತಿಯಿತ್ತು. ಕಾಲ ಕಳೆದಂತೆ ಆ ಪದ್ಧತಿ ರಾಜರಾಮ ಮೋಹನರಾಯರಿಂದ ಅದು ಕೊನೆಗೊಂಡಿತು. ಕಾಲಬದಲಾದಂತೆಲ್ಲಾ ಆ ಹೆಣ್ಣಿಗು ಮನಸ್ಸು ಇರುತ್ತದೆ ಆಕೆಯು ಆಸೆ - ಆಕಾಂಕ್ಷೆಗಳನ್ನು ಹೊಂದಿರುತ್ತಾಳೆ ಎಂಬ ವಿಚಾರ ಆಕೆಯು ಪುನಃ ವಿವಾಹವಾಗಬಹುದು ಎಂದು ಹೆಂಡತಿಯು ಸತ್ತಿದರೆ ಗಂಡ ಮದುವೆಯಾಗುವ ಪದ್ಧತಿ ನಮ್ಮ ಸಮಾಜದಲ್ಲಿ ಇದೆ ಆದ್ದರಿಂದ ಹೆಂಗಸರನ್ನು ಸಹ ಗಂಡಸು ಹಾಗೆ ಆಕೆಗೂ ಮದುವೆಯಾಗುವ ಹಕ್ಕಿದೆ ಎಂದು ರಾಜರಾಮ ಮೋಹನರಾಯರ ನಿಲುವಾಗಿತ್ತು.

ವಿಧವೆ ಮದುವೆಯು ಮುಂದೆ ಆಕೆಯು ಯೌವನದಲ್ಲಿ ಇದ್ದರೂ ಲೈಂಗಿಕ ಬಯಕೆಯನ್ನು ಪೂರೈಸಲು ಹೆಂಡತಿ ಸತ್ತವನನ್ನು ಮದುವೆಯಾಗಬಹುದು. ಇಲ್ಲವಾದರೆ ಬೇರೆಯ ಯುವಕನನ್ನು ಸಹ ಮದುವೆಯಾಗುವ ಪದ್ಧತಿಯನ್ನು ವಿಧವಾ ಪುನರ್ವಿವಾಹ ಎಂದು ಕರೆಯುತ್ತಾರೆ.

ಈ ಮದುವೆಯು ಸಮಾಜದಲ್ಲಿ ಒಳ್ಳೆಯ ರೀತಿಯಿಂದ ನೋಡಬಹುದ್ದಾಗಿದೆ. ಸಮಾಜದಲ್ಲಿ ಗೌರವದಿಂದ ವಿಧವೆಯು ಮದುವೆಯಾದ ನಂತರ ಜನಿಸಿದ ಮಕ್ಕಳಿಗೂ ಗೌರವದಿಂದ ಕಾಣುತ್ತಾರೆ.

೩) ವಯಸ್ಕರ ಮದುವೆ

ವಯಸ್ಸಿಗೆ ಬಂದ ಹೆಣ್ಣು ಗಂಡಿಗೆ ಸೇರಿಸಿ ಮಾಡುವ [illegible] ವಯಸ್ಕರ ಮದುವೆ ಎಂದರ್ಥ.

ಮದುವೆಯು ನಿರ್ದಿಷ್ಟವಾದ ಕಾನೂನಿನ ಪ್ರಕಾರವೂ ಹೆಣ್ಣಿಗೆ ಕನಿಷ್ಠ [illegible] ವರ್ಷ ತುಂಬಿರಬೇಕು ಗಂಡಿಗೆ ಕನಿಷ್ಠ ೨೧ ವರ್ಷ ತುಂಬಿದಾಗ ಮದುವೆ ಮಾಡಬಹುದಾಗಿದೆ. ಹಿಂದಿನ ಕಾಲದಲ್ಲಿ ವಯಸ್ಸಿಗೆ ಮಹತ್ವ ಕೊಡದೇ ಹೆಣ್ಣಿಗೆ ಋತುಮತಿಯಾಗುವುದಕ್ಕಿಂತ ಪೂರ್ವದಲ್ಲಿ ಅಥವಾ ಆದ ಕೆಲವೇ ದಿನಗಳಲ್ಲಿ ಆಕೆಯನ್ನು ಮದುವೆಯನ್ನು ಮಾಡುತ್ತಿದ್ದರು. ಆದರೆ ಕಾಲ ಬದಲಾದಂತೆಲ್ಲಾ ಆಧುನೀಕರಣದಿಂದಾಗಿ ಮತ್ತು ಮಾಧ್ಯಮಗಳ ಪ್ರಸಾರದಿಂದಾಗಿ ಜನರಲ್ಲಿ ತಿಳುವಳಿಕೆಯು ಮೂಡಿದರಿಂದ ಅವರು ವಯಸ್ಕರಾದ ಮೇಲೆಯೇ ಮದುವೆಯನ್ನು ಮಾಡುಕೊಳ್ಳುತ್ತಿದ್ದಾರೆ. ತಮ್ಮ ಮುಂದಿನ ಜೀವನದ ಬಗ್ಗೆ ಅರ್ಥಮಾಡಿಕೊಳ್ಳುತ್ತಿದ್ದಾರೆ.

ಮದುವೆಯಾಗುವಾಗ ವಯಸ್ಸನ್ನು ನಿರ್ಧರಿಸಿದ್ದರಿಂದ ಮದುವೆಯಾಗುವ ಗಂಡು-ಹೆಣ್ಣು ತನಗೆ ಯಾವರೀತಿಯ ವರ ಮತ್ತು ವಧು ನನ್ನ ಬಾಳಸಂಗಾತಿಯಾಗಲೂ ಸಾಧ್ಯ ಎಂದು ಯಾವ ರೀತಿ ಹೊಂದಿಕೆಯನ್ನು ಮಾಡಿಕೊಂಡು ಹೋಗಬೇಕೆಂದು ಮದುವೆ ತಿಳಿವಳಿಕೆಯಿಂದ ವಿಚಾರ ಮಾಡುವಂತದ್ದಾಗಿದೆ.

ಈ ರೀತಿಯ ಮದುವೆಯು ನಮ್ಮ ಸಮಾಜದಲ್ಲಿ ಒಳ್ಳೆಯ ರೀತಿಯಿಂದ ಬೆಳೆದುಕೊಂಡು ಬಂದಿವೆ. ಸಮಾಜದಲ್ಲಿ ಗೌರವವನ್ನು ಪಡೆದುಕೊಂಡಿವೆ. ಮದುವೆಯು ಶ್ರೀಮಂತಿಕೆಯನ್ನು ತೋರಿಸುವ ಮಾಧ್ಯಮವಾಗಿದೆ. ಒಬ್ಬರು ನೋಡಿ ಒಬ್ಬರು ವೈಭವದಿಂದ ತನ್ನ ಮಕ್ಕಳನ್ನು ಮದುವೆಯನ್ನು ಮಾಡುತ್ತಿದ್ದಾರೆ. ಬಡವರ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತಿದೆ ಇವರು ಮಾಡುವ ವೈಭವದ ಮದುವೆ ಬಡವರಿಗೆ ಹೊರೆಯಾಗಿದೆ.

೪) ಪ್ರೇಮ ಮದುವೆ :

ಪ್ರೇಮ ಮದುವೆಯಲ್ಲಿ ಹಿರಿಯರ ವಿಚಾರವಿರುವುದಿಲ್ಲ. ಹುಡುಗ-ಹುಡುಗಿಯ ವಿಚಾರದಿಂದಲೇ ಒಬ್ಬರಿಗೊಬ್ಬರು ಒಪ್ಪಿಕೊಂಡು ಪ್ರೀತಿಸಿದ ನಂತರ ಅವರು ಮದುವೆಯಾಗಲು ಸಿದ್ಧರಾಗುತ್ತಾರೆ. ಇದನ್ನು ಹುಡುಗ-ಹುಡಗಿಯ ಪಾಲಕರು ಒಪ್ಪದಿದ್ದರೆ ಅವರ ವಿರುದ್ಧವಾಗಿ ಮದುವೆಯನ್ನು ಮಾಡಿಕೊಳ್ಳುತ್ತಾರೆ.

ಪ್ರಾಚೀನ ಕಾಲದಲ್ಲಿಯು ಈ ಪ್ರೇಮ ಮದುವೆಯಂತೆ ಗಾಂಧರ್ವ ಮದುವೆ ಮಾಡಿಕೊಳ್ಳುತ್ತಿದ್ದರು ಹುಡುಗ-ಹುಡುಗಿಯರು ಮನೆಯವರ ಬಗ್ಗೆ ವಿಚಾರವನ್ನು ಮಾಡುವುದಿಲ್ಲ. ಪ್ರೀತಿಯೇ ತುಂಬಾ ಮುಖ್ಯ ಎನ್ನುವರೀತಿಯಿಂದ ತಂದೆ ತಾಯಿ ಮಾಡಿದ ಪ್ರೀತಿ ಅವರ ಲೆಕ್ಕಕ್ಕೆ ಬರುವುದಿಲ್ಲ ಕೆಲವೇ ದಿನಗಳಿಂದ ಗೆಳೆತನವನ್ನು ಮಾಡಿ ಪ್ರೀತಿಯೇ ಹುಡುಗ-ಹುಡುಗಿಗೆ ಅದೇ ಮುಖ್ಯ ಆದ್ದರಿಂದ ಮನೆಯನ್ನು ಬಿಟ್ಟು ಆವರು ಸಂಬಂದಿಕರಿಂದ ದೂರಹೋಗಿ ಪ್ರೇಮದ ಮದುವೆಯನ್ನು ಮಾಡಿಕೊಳ್ಳುತ್ತಾರೆ.

ಪ್ರೇಮ ಮದುವೆಯು ಮದುವೆಯಾದ ಹೊಸತರಲ್ಲಿ ಪ್ರೀತಿಯು ತುಂಬಿರುತ್ತದೆ. ಅದು ಪ್ರೀತಿಯು ಮಹತ್ವ ಕಡಿಮೆಯಾಗಿ ನಂತರ ಪ್ರೀತಿ ಒಂದೇ ಇದ್ದರೆ ಸಮಾಜದಲ್ಲಿ ಬದುಕಲು ಆಗುವುದಿಲ್ಲ. ಪ್ರೀತಿಯ ಜೊತೆಗೆ ಸಂಪಾದನೆಯು ಮುಖ್ಯವಾಗಿರುತ್ತದೆ. ಈ ಪ್ರೇಮ ಮದುವೆ ಮುಖಕ್ಕೆ ಮರುಳಾಗುತ್ತಾರೆ ಹೊರತು ಹುಡುಗನ ಗುಣಗಳಿಗೆ ಮಹತ್ವ ನೀಡುವುದಿಲ್ಲ ಎಂದು ತಿಳಿದುಬರುತ್ತದೆ.

ಪ್ರೇಮ ಮದುವೆಯಿಂದಾಗುವ ಹಾನಿಗಳು :

೧) ತಂದೆ-ತಾಯಿಯರ ಸಂಬಂದ ಕಳೆದುಕೊಳ್ಳಬಹುದು.

೨) ಕೆಲವು ವರ್ಷದ ನಂತರ ವಿಚ್ಛೇದನ ಪಡೆಯುತ್ತಾರೆ.

೫) ಕಲ್ಯಾಣ ಮದುವೆ :

ಈ ಮದುವೆಯು ಬಸವತತ್ವದ ಪ್ರಕಾರ ನಡೆಯುತ್ತದೆ. ಈ ಮದುವೆಯನ್ನು ಹೆಚ್ಚಾಗಿ ಬಸವಣ್ಣನ ಪ್ರೀತಿಯ ಭಕ್ತರು ಕಲ್ಯಾಣ ಮಹೋತ್ಸವ ಅಥವಾ ವಿವಾಹ ಮಹೋತ್ಸವ ಎನ್ನುತ್ತಾರೆ. ಈ ಸಮಯದಲ್ಲಿ ಹೆಚ್ಚಾಗಿ ಸಂಪ್ರದಾಯದ ಮದುವೆ ಆದರೆ ನಮ್ಮ ಹಿರಿಯರು ಮಾಡುವ ವಿಧಿ-ವಿಧಾನಗಳು ಕಲ್ಯಾಣದ ಮದುವೆಯ ವಿಧಿ-ವಿಧಾನಗಳು ಬೇರೆಯಾಗಿವೆ. ಈ ಎರಡರ ಉದ್ದೇಶ ಮಾತ್ರಾ ಒಂದೇಯಾಗಿವೆ. ಮದುವೆಯು ಜೀವ ಜೀವಗಳ ಭಾವ ಸಂಗಮ. ಮದುವೆಯು ಕೇವಲ ಎರಡು ಶರೀರಗಳನ್ನು ಹತ್ತಿರ ತರುವುದಲ್ಲ ಅಥವಾ ಹಣ-ಆಸ್ತಿಗಾಗಿ ಪತಿ-ಪತ್ನಿ ಮಾಡಿಕೊಳ್ಳುವ ಒಪ್ಪಂದವಲ್ಲ. ಮದುವೆಯ ಮುಖ್ಯ ಗುರಿ ದೈಹಿಕದಿಂದ ಆಧ್ಯಾತ್ಮಿಕ ಸಂಗವನ್ನು ಪಡೆಯುವುದೇ ಮಾದರಿ ಮದುವೆಯು ಮೂಲ ಗುರಿಯಾಗಿದೆ. ಮಾನವ ಪ್ರೇಮವು ದೈವೀ ಪ್ರೀತಿಗೆ ವಿಶ್ವ ಪ್ರೀತಿಗೆ ಅಡಿಗಲ್ಲಾಗಿ

ಈ ಮದುವೆಯಲ್ಲಿ ಶಿವಶರಣರು ಬರೆದಂತಹ ವಚನಗಳ ಪಠನೆಯನ್ನು ಮಾಡುತ್ತಾರೆ. ಜಾನಪದಿಯರ ಮದುವೆಯಲ್ಲಿ ಸಂಪ್ರದಾಯದ ಹಾಡುಗಳು ವೇದಗಳ ಮಂತ್ರಗಳು ಹೊಂದಿದ್ದರೆ ಕಲ್ಯಾಣ ಮದುವೆಯಲ್ಲಿ ವಚನಗಳ ಪಠನೆಯನ್ನು ಮಡುತ್ತಾರೆ.

ಮದುವೆಯು ಒಂದು ಕಡ್ಡಾಯವಾದ ಸಾಮಾಜಿಕ ಧಾರ್ಮಿಕ ಆಚರಣೆ ಆದರೆ ಇವನ್ನೊಂದು ಪ್ರಿಯವಾದ ಕ್ರಿಯೆಯನ್ನಾಗಿ ಮಾಡಿಕೊಳ್ಳಬೇಕು ಹೊರತು ಭಾರವಾಗಿ ಮಾಡಿಕೊಳ್ಳಬಾರದು ಅದಕ್ಕಾಗಿ ಸರಳವಾದ ಮದುವೆಯ ಕ್ರಮವನ್ನು ಶರಣರು ಬೋಧಿಸುತ್ತಾರೆ.

"ಲಿಂಗಭಕ್ತನ ವಿವಾಹದಲ್ಲಿ ಶಿವಗಣಂಗಳಿಗೆ
ವಿಭೂತಿ ವೀಳಿಯವ ಕೊಟ್ಟು ಆರೋಗಣೆಯ ಮಾಡಿಸಿ
ಶಿವಗಣಂಗಳು ಸಾಕ್ಷಿಯಾಗಿ ಪ್ರಸಾದವನಿಕ್ಕುವುದೇ ಸದಾಚಾರವಲ್ಲದೆ
ವಾರ ತಿಥಿ ಸುಮೂಹೂರ್ತವೆಂದು ಲೌಕಿಕದ ಕರ್ಮವ ಮಾಡಿದಡೆ
ನಿಮ್ಮ ಸದ್ಭಕ್ತರಿಗೆ ದೊರೆವಯ್ಯ ಕೂಡಲಸಂಗಮದೇವಾ"

ಈ ರೀತಿ ವಚನಗಳ ಮುಖಾಂತರ ವಧು-ವರರಿಗೆ ಪ್ರತಿಜ್ಞೆಯನ್ನು ಮಾಡಿಸುತ್ತಾರೆ ಪುಷ್ಪಗಳಿಂದ ಅಕ್ಷತೆಯನ್ನು ಹಾಕುತ್ತಾರೆ ದೀಪಗಳಿಂದ ಅವರನ್ನು ಆರತಿಯನ್ನು ಮಾಡುತ್ತಾರೆ. ಈ ಮದುವೆಯು ಕಡಿಮೆ ಖರ್ಚಿನಲ್ಲಿಯಾಗುತ್ತದೆ.

೬) ರಿಜಿಸ್ಟ್ರ ಮದುವೆ :

ಆಧುನಿಕ ಕಾಲದಲ್ಲಿ ಈ ಮದುವೆಯನ್ನು ಬಳಕೆಗೆ ಬಂದಿದೆ ಮದುವೆಗೆ ಯಾವುದೇ ಖರ್ಚುಯಿರುವುದಿಲ್ಲ ಜನಗಳಿಗೆ ಊಟ ಹಾಕುವ ಖರ್ಚು ಆಡಂಬರವನ್ನು ತೋರಿಸುವುದು ಇರುವುದಿಲ್ಲ.

ಮದುವೆಗೆ ಮುಖ್ಯವಾಗಿ ವಧು-ವರ ಇವರ ಜೊತೆಗೆ ಇಬ್ಬರು ಸಾಕ್ಷಿಗಳು ವಧುವಿನ ಕಡೆಗೆ ಇಬ್ಬರು ವರನ ಕಡೆಗೆ ಇಬ್ಬರು ಸಾಕ್ಷಿಗಳು ಜೊತೆಗೆ ಕರೆದು ಕೊಂಡು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ರಿಜಿಸ್ಟ್ರ ಮಾಡುವ ಮೂಲಕ ಮದುವೆಯನ್ನು ಮಾಡಿಕೊಳ್ಳುತ್ತಾರೆ ಅದು ಸಹ ನಿರ್ದಿಷ್ಟವಾದ ಹಣವನ್ನು ನಿರ್ಧರಿಸಲಾಗಿರುತ್ತದೆ ಈ ಮದುವೆಗೆ ಯಾವುದೇ ಸಂಪ್ರದಾಯ ಇರುವುದಿಲ್ಲ ಕಡಿಮೆ ಖರ್ಚಿನಲ್ಲಿ ಮದುವೆ ಯಾಗುತ್ತದೆ.

ಪ್ರೀತಿಯ ವಿವಾಹ ಅಥವಾ ಪ್ರೇಮ ವಿವಾಹ ಆದರೂ ಕಾನೂನಿನ ಸಮ್ಮುಖದಲ್ಲಿ ನಡೆಯುತ್ತದೆ. ಮದುವೆಯು ಎಲ್ಲಾ ದಾಖಲೆಗಳನ್ನು ಹೊಂದುತ್ತದೆ. ಹಿರಿಯರ ಒಪ್ಪಿಗೆ ಇರಬಹುದು ಅಥವಾ ಇಲ್ಲದೆ ಇರಬಹುದು. ತಂದೆ ತಾಯಿ ಇಲ್ಲದಿದ್ದರೂ ಈ ಮದುವೆ ನಡೆಯುತ್ತವೆ. ಮದುವೆಯು ಹೊಸತನದಲ್ಲಿ ಪ್ರೀತಿಯಿಂದ ಜೀವನ ನಡೆಸುತ್ತಾರೆ. ಮುಂದೆ ಮುಂದೆ ಅದರ ಕಷ್ಟಗಳು ಅಥವಾ ತೊಂದರೆಗಳು ತಿಳಿಯುತ್ತದೆ.

೭) ಇಂಟರನೇಟ ಮದುವೆ :

ಕಂಪ್ಯೂಟರ ಹುಡುಗ ಹುಡುಗಿಯರಿಗೆ ಮಧ್ಯವ್ಯತ್ತಿಯಾಗಿ ಕೆಲಸ ಮಾಡುತ್ತದೆ. ಆಧುನಿಕ ತಂತ್ರಜ್ಞಾನ ಬೆಳೆದಂತೆ ಮದುವೆಯನ್ನು ಮಾಡಿಸುವ ಮಧ್ಯವ್ಯಕ್ತಿಯಾಗಿರುತ್ತದೆ. ಹಾಗಾಗಿ ಕಂಪ್ಯೂಟರನಲ್ಲಿ ಇಂಟರನೆಟ ಕೆಲಸವನ್ನು ಮಾಡುತ್ತದೆ. ಕಂಪ್ಯೂಟರ್‌ನಲ್ಲಿ ಕುಳಿತು ಇಂಟರನೆಟ್‌ನಲ್ಲಿ ಸಂಪರ್ಕವನ್ನು ಪಡೆದುಕೊಂಡು ಯಾವ ದೇಶದವರ ಜೊತೆ ಕುರಿತು ಮಾತನಾಡುವ ಮಾಧ್ಯಮವಾಗಿದೆ. ಈ ಮಾಧ್ಯಮದಲ್ಲೇ ಹುಡುಗನ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತದೆ. ಹಾಗಾಗಿಯೇ ಹುಡುಗಿಯ ಮಾಹಿತಿಯನ್ನು ನೀಡಲಾಗುತ್ತದೆ. ಈ ರೀತಿ ನೀಡಿದ ಮಾಹಿತಿಯು ನೋಡಿದ ನಂತರ ಅವರಿಗೆ ಒಪ್ಪಿಗೆ ಎನಿಸಿದರೆ ಅವರು ಒಬ್ಬರಿಗೊಬ್ಬರು ಭೇಟಿಯಾಗುತ್ತಾರೆ. ನಂತರ ಹಿರಿಯರ ಸಮ್ಮುಖದಲ್ಲಿ ಒಪ್ಪಿಗೆ ಸಿಗಬಹುದು. ಅಥವಾ ಸಿಗದೆ ಇರಬಹುದು. ಸಿಕ್ಕರೆ ಸರಿ ಸಿಗದೆ ಇಲ್ಲದಿದ್ದರೂ ಹುಡಗ ಹುಡುಗಿ ಒಪ್ಪಿಕೊಂಡು ಮದುವೆಯಾಗುತ್ತಾರೆ. ಇದನ್ನು ಮದುವೆ ಮಾಡಿಸುವ ಮಾಧ್ಯಮ "ಶಾದಿ ಡಾಟ್ ಕಾಮ್" ಇದರಲ್ಲಿ ಎಲ್ಲಾ ಮಾಹಿತಿಗಳು ಸಿಗುತ್ತವೆ.

ಇಂಟರನೇಟ ಮದುವೆಯಿಂದಾಗುವ ಹಾನಿಗಳು :

೧) ಮದುವೆ ಬೇಗನೆ ವಿಚ್ಛೇದನ ಆಗುತ್ತದೆ.

೨) ಮಾಹಿತಿಗಳು ಸರಿಯಾಗಿ ಇರುವುದಿಲ್ಲ

೩) ಹುಡುಗ ಹುಡುಗಿಯ ಹವ್ಯಾಸಗಳು ಸರಿ ಇರಬಹುದು ಅಥವಾ ಇಲ್ಲದೆ ಇರಬಹುದು.

೪) ಈ ರೀತಿ ಮದುವೆಯ ಬಗ್ಗೆ ತಿಳಿಯಬೇಕಾದರೆ "ಶಾದಿ ಡಾಟ್ ಕಾಮ್" ಇದರಲ್ಲಿ ಮಾಹಿತಿ ಸಿಗುತ್ತದೆ.

೫) ಹೆಚ್ಚಾಗಿ "ಶಾದಿ ಡಾಟ್ ಕಾಮ್‌ಗೆ" ಹೆಚ್ಚಿನ ವಯಸ್ಸಿನವರು ಸುಪಾತ್ರ ಕನ್ಯ [illegible] ಹಾಕುತ್ತಾರೆ.

೮) ಏಕಪತ್ನಿತ್ವ :

ಒಬ್ಬ ಪುರುಷನು ಒಬ್ಬ ಸ್ತ್ರೀಯನ್ನು ಒಂದೇ ಸಮಯದಲ್ಲಿ ಮದುವೆಯಾಗುವ ಪದ್ಧತಿಯನ್ನು ಏಕಪತ್ನಿತ್ವ ಎನ್ನುತ್ತಾರೆ. ಏಕ ಪತ್ನಿತ್ವ ಇಂದು ನಿನ್ನೆಯದಲ್ಲ. ಇದು ಅನಾದಿಕಾಲದಿಂದಲೂ ಬಳಕೆಯಲ್ಲಿದೆ. ಹಿಂದಿನಿಂದಲೂ ನೋಡಿದರೆ ತ್ರೇತಾಯುಗದಲ್ಲಿ ಶ್ರೀರಾಮ ಚಂದ್ರನು ಮಹಾ ಪತಿವ್ರತೆಯಾದ ಸೀತಾದೇವಿಯೊಡನೆ ಮದುವೆಯಾಗಿ ಏಕಪತ್ನಿತ್ವನಾಗಿದ್ದನು. ಏಕಪತ್ನಿತ್ವವು ಜನಪ್ರಿಯವಾಗಿದೆ. ಈ ರೀತಿಯ ಮದುವೆ ಪದ್ಧತಿಯಿಂದ ಸಹಜವಾಗಿ ಸುಂದರವಾದ ಪ್ರೀತಿ ಪ್ರೇಮ ಶುದ್ಧ ಒಳ್ಳೆಯ ಬಾಂಧವ್ಯವನ್ನು ಅರ್ಥಮಾಡಿ ಕೊಟ್ಟಿನ ಅನ್ಯೂನತೆಯಿಂದ ಪ್ರೀತಿಯಿಂದ ಬಾಳುವ ಅನೇಕ ದಂಪತಿಗಳನ್ನು ನಾವು ನೋಡುತ್ತೇವೆ.

ಏಕಪತ್ನಿತ್ವ ಆಧುನಿಕ ಸಮಯದಲ್ಲಿ ಮಹತ್ವವನ್ನು ಪಡೆದುಕೊಂಡಿದೆ. ಸಂಸಾರವೆಂಬ ರಥವು ಎರಡು ಎತ್ತುಗಳು ಒಂದೇ ಗುರಿಯಿಂದ ನಡೆದರೆ ಅವರ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಇಲ್ಲವಾದರೆ ಒಂದು ಎತ್ತು ನೀರಿಗೆ ಮತ್ತೊಂದು ಎತ್ತಕ್ಕೆ ಹಳ್ಳಕ್ಕೆ ಎಂಬ ಉದಾಹರಣೆಯನ್ನು ನೋಡಬಹುದು. ಈ ಮದುವೆ ಪದ್ಧತಿಯು ಆದರ್ಶಪ್ರಾಯವಾಗಿದೆ.

೯) ಬಹುಪತ್ನಿತ್ವ :

ಒಂದೇ ಸಮಯದಲ್ಲಿ ಒಬ್ಬ ಗಂಡು ಒಬ್ಬಳು ಸ್ತ್ರೀಗಿಂತ ಹೆಚ್ಚು ಜನ ಸ್ತ್ರೀಯರನ್ನು ಮದುವೆಯಾಗುವ ಪದ್ಧತಿಯನ್ನು ಬಹುಪತಿತ್ವ ಎನ್ನುತ್ತಾರೆ. ಈ ಬಹುಪತ್ನಿತ್ವ ಈ ಮದುವೆಯನ್ನು ಮಾಡಿಕೊಳ್ಳಲು ಸಮಾಜದಲ್ಲಿ ಸ್ತ್ರೀಯರ ಸಂಖ್ಯೆ ಹೆಚ್ಚಿರಬಹುದು. ಆದ್ದರಿಂದ ಈ ರೀತಿಯ ಮದುವೆಯನ್ನು ಆಗುತ್ತಿದ್ದರು.

ಶ್ರೀಮಂತರು ವಿಲಾಸಿಗಳು ಸ್ತ್ರೀಯರ ಮೇಲೆ ಕಾಮುಕ್ಕಾಗಿ ಮಕ್ಕಳು ಇಲ್ಲದಿದ್ದರೆ ಎರಡನೇ ಮದುವೆಯಿಂದ ಮಕ್ಕಾಳಾಗಬಹುದು ಅಥವಾ ಗಂಡು ಮಗನ ಜನನ ಕಾರಣಕ್ಕಾಗಿ ಎರಡನೇ ಮದುವೆ ಮಾಡಿಕೊಳ್ಳುತ್ತಾರೆ.

ಇದರಿಂದಾಗುವ ಹಾನಿಗಳು

೧) ಬಡತನ ಹೆಚ್ಚಾಗುತ್ತದೆ.
೨) ಈ ಪದ್ಧತಿಯಿಂದ ಏಡ್ಸ ರೋಗ ಬರುತ್ತದೆ.

ಈ ಬಹುಪತ್ನಿತ್ವವು ಅನೇಕ ಜನ ಹೆಂಡತಿಯರಿದ್ದರೆ ಅನೇಕ ತೊಂದರೆಗಳಾಗುತ್ತವೆ. ಏಕೆಂದರೆ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ ಆರ್ಥಿಕ ತೊಂದರೆಯೂ ಸಹ ಅನುಭವಿಸಬೇಕಾಗುತ್ತದೆ. ಮನೆಯಲ್ಲಿ ಸಂತೋಷದ ವಾತಾವರಣ ಇರುವುದಿಲ್ಲ ದುಃಖದ ವಾತಾವರಣ ಇರುತ್ತದೆ.

ಈ ಪದ್ಧತಿಯು ಸಮಾಜದಲ್ಲಿ ಆದರ್ಶಪ್ರಾಯ, ಮದುವೆ ಪದ್ಧತಿಯಾಗುವುದಿಲ್ಲ. ಇವೇ ಮೊದಲಾದ ಕಾರಣಗಳಿಂದಾಗಿ ಆಧುನಿಕ ಸಮಾಜದಲ್ಲಿ ಈ ಬಹುಪತ್ನಿತ್ವವನ್ನು ಒಪ್ಪುವುದಿಲ್ಲ.

೯) ಬಹುಪತಿತ್ವ :

ಒಂದೇ ಸಮಯದಲ್ಲಿ ಒಬ್ಬ ಸ್ತ್ರೀ ಒಬ್ಬನಿಗಿಂತ ಹೆಚ್ಚು ಪುರುಷರನ್ನು ಮದುವೆಯಾಗುವ ಪದ್ಧತಿಗೆ ಬಹುಪತಿತ್ವ ಎನ್ನುತ್ತೇವೆ. ಕನ್ಯೆಯನ್ನು ಮದುವೆಯಾಗಲು ಕನ್ಯಾ ಶುಲ್ಕ ಹಾಗೂ ವಧು ದಕ್ಷಿಣೆ ಕೊಡಬೇಕಾಗಿತ್ತು. ಈ ಮದುವೆ ಪದ್ಧತಿಯು ವೇಶ್ಯಾವೃತ್ತಿಗೆ ಸಂಬಂಧಿಸಿದ ಹಾಗೆ ಇರುತ್ತದೆ. ನಮ್ಮ ಸಮಾಜದಲ್ಲಿ ಮಹತ್ವವನ್ನು ಪಡೆಯುವುದಿಲ್ಲ. ಈ ರೀತಿಯಾದ ಮದುವೆ ಪದ್ಧತಿಯಿಂದ ನಂತರ ಜನಿಸಿದ ಮಕ್ಕಳಿಗೆ ತಾಯಿಯ ಬಗ್ಗೆ ಖಚಿತವಾಗಿ ತಿಳಿಸುತ್ತಾರೆ. ತಂದೆಯ ಬಗ್ಗೆ ನಿಖರವಾಗಿ ತಿಳಿಸಲಾಗುವುದಿಲ್ಲ. ಆದ್ದರಿಂದ ಈ ಪದ್ಧತಿಯು ಒಳ್ಳೆಯದಲ್ಲ.

ಈ ಮದುವೆಯಾಗಲು ಕಾರಣಗಳು

೧) ಸ್ತ್ರೀಯರ ಸಂಖ್ಯೆ ಕಡಿಮೆ ಇರಬಹುದು

೨) ಪುರುಷರ ಸಂಖ್ಯೆ ಹೆಚ್ಚಾಗಿರಬಹುದು

ಉದಾ : ಮಹಾಭಾರತದಲ್ಲಿ ದ್ರೌಪದಿಯು ಪಂಚ ಪಾಂಡವರನ್ನು ಮದುವೆಯಾಗಿದ್ದಳು.

೩) ಈ ಪದ್ಧತಿಯಿಂದ ಸ್ತ್ರೀಯರ ಆರೋಗ್ಯ ಕೆಡುತ್ತದೆ.

೪) ಈ ಪದ್ಧತಿಯಿಂದ ಏಡ್ಸ್ ರೋಗ ಬರುತ್ತದೆ.

೫) ಈ ಪದ್ಧತಿಯಿಂದ ಮನ್ನಣೆ ದೊರೆಯುವುದಿಲ್ಲ

ಪ್ರಾಚೀನಕಾಲದಿಂದಲೂ ಆಧುನಿಕ ಕಾಲದವರೆಗಿನ ಮದುವೆಯ ಪದ್ಧತಿಯನ್ನು ನೋಡುಕೊಂಡು ಬಂದಿದ್ದೇವೆ. ಮದುವೆ ನಡೆದುಬಂದ ದಾರಿಯನ್ನು ನೋಡಿದರೆ ಆಗಿನ ಕೆಲವು ಪದ್ಧತಿಗಳಿಗೆ ಆಧುನಿಕವಾಗಿ ಹೊಸ ಹೆಸರುಗಳು ಬದಲಾವಣೆಯನ್ನು ನೋಡಲಾಗುತ್ತಿದೆ. ಮೊದಲು ಗಾಂಧರ್ವ ವಿವಾಹ ಇವಾಗ ಅದು ಪ್ರೇಮ ವಿವಾಹವಾಗಿ ಬಂದಿದೆ. ಹಿಂದಿನ ವಿಚಾರಗಳು ಬದಲಾವಣೆಯಾಗಿವೆ. ಮುಂದೆಯೂ ಆಧುನಿಕರಣಗಳ ಬಳಕೆಯಿಂದಲೂ ಮದುವೆಯನ್ನು ಮಾಡುವುದು ಸಂತಾನೋತ್ಪತ್ತಿ ಕಾಮ ತೃಪ್ತಿಗೆ ಮೊದಲಾದ ಕಾರಣಗಳಿಂದಾಗಿ ಮನುಷ್ಯನ ಕೊನೆಯವರೆಗೂ ಕಾಮ ಪೂರೈಕೆ ಸಂತಾನೋತ್ಪತ್ತಿ ಎಂದು ತಿಳಿಯಬಹುದಾಗಿದೆ.

ಈ ರೀತಿಯಾಗಿ ಪ್ರಾಚೀನ ಕಾಲದಿಂದಲೂ ಆಧುನಿಕ ಕಾಲದವರೆಗೆ ಮದುವೆಯ ಪ್ರಕಾರಗಳನ್ನು ನೋಡಿಕೊಂಡು ಬಂದಿದ್ದೇವೆ.

ಅಧ್ಯಾಯ – ೪

ಮದುವೆಯ ಆಚರಣೆಗಳು

ಕನ್ಯಾ ನೋಡುವ ಶಾಸ್ತ್ರ

ಹುಡುಗನ ಮನೆತನ ನೋಡುವುದು

ಜಾತಕ ನಿಶ್ಚಿತಾರ್ಥ

ಕುಂಕುಮ ಹಚ್ಚುವ ಶಾಸ್ತ್ರ

ಒಳ್ಳುಕಲ್ಲು ಪೂಜೆ

ಮದುವೆಯ ಪೂರ್ವಸಿದ್ಧತೆ

ಭಾಷುಣಾಕಿ ಕಾರ್ಯಕ್ರಮ

ಮದುವೆ ದಿನ

ಅಧ್ಯಾಯ-೪

ಮದುವೆಯ ಆಚರಣೆಗಳು

೧) ಕನ್ಯೆಯನ್ನು ನೋಡುವ ಶಾಸ್ತ್ರ

ಮದುವೆಯ ಕಾರ್ಯಕ್ರಮದಲ್ಲಿ ಗಂಡು-ಹೆಣ್ಣು ಮುಖ್ಯ ಇದ್ದಾಗ ಸುಪಾತ್ರ ಮದುವೆಯಾಗತ್ತದೆ. ಸಂಪ್ರದಾಯದಂತೆ ಮೊದಲು ಕನ್ಯೆಯನ್ನು ನೋಡುವ ಶಾಸ್ತ್ರ ಮುಖ್ಯವಾಗಿದೆ.

ಮದುವೆಯ ಮುನ್ನ ಕನ್ಯೆಯನ್ನು ನೋಡುವ ಶಾಸ್ತ್ರದಲ್ಲಿ ಎಲ್ಲಾ ಕಡೆ ಬೇರೆ ಬೇರೆ ರೀತಿಯಿಂದ ನೋಡುವ ಪದ್ಧತಿಯಿದೆ. ಹಾಗೆಯೇ ಪಾಶ್ಚಾತ್ಯರ ಪ್ರಭಾವದಿಂದ ಈಗಿನ ಮದುವೆ ಪದ್ಧತಿಯಲ್ಲಿ ಸಾಮಾನ್ಯವಾಗಿ ಕೆಲವು ಕಾಣಬಹುದು ಅವು ಈ ಕೆಳಗಿನಂತಿವೆ

- ಪ್ರೇಮ ವಿವಾಹಗಳು
- ಇಂಟರನೇಟ ಮುಖಾಂತರ ಶಾಧಿ ಡಾಟ್ ಕಾಂ
- ರಿಜಿಸ್ಟ್ರ ಮದುವೆ

ಮುಂತಾದವು ಆಧುನಿಕ ಪದ್ಧತಿಗಳಲ್ಲಿ ಮದುವೆ ಸಂಪ್ರದಾಯ ಬದಲಾವಣೆಯನ್ನು ಕಾಣುತ್ತೇವೆ. ಜನಪದರಲ್ಲಿ ಮದುವೆಯ ಸಂಪ್ರದಾಯಗಳು ವಿಧಿ ವಿಧಾನಗಳು ಮತ್ತು ಆಚರಣೆ ಪದ್ಧತಿಗಳು ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ.

ಕನ್ಯೆಯನ್ನು ನೋಡುವ ಶಾಸ್ತ್ರದಲ್ಲಿ ಮುಖ್ಯವಾಗಿ ನಮ್ಮ ಹಿರಿಯರು ಹೇಳಿದ ಹಾಗೆ ನಡೆದುಕೊಳ್ಳುತ್ತಿದ್ದರು. ಈಗಿನ ಸಮಯದಲ್ಲಿಯು ನಮ್ಮ ಹಿರಿಯರು ಹೇಳಿದ ಪದ್ಧತಿಯಲ್ಲಿ ನಡೆಯುವ ಕನ್ಯೆಯರು ಇರುತ್ತಾರೆ. ಪಾಶ್ಚಾತ್ಯರಲ್ಲಿ ಈ ಪದ್ಧತಿಯೂ ಇರುವುದಿಲ್ಲ. ಏಕೆಂದರೆ ಹುಡುಗ-ಹುಡುಗಿ ಒಪ್ಪಿದ ನಂತರ ತಂದೆ-ತಾಯಿಗಯರಿಗೆ ತಿಳಿಸದೇ ಮದುವೆಯಾಗುತ್ತಾರೆ. ಅವರು ಕೊನೆಯವರೆಗೆ ತಮ್ಮ ಸ್ವಾವಲಂಬನೆಯಿಂದ ಬದುಕುತ್ತೇವೆ ಎಂದು ತಿಳಿದುಕೊಂಡಿರುತ್ತಾರೆ.

ಜನಪದರ ಮುಖ್ಯ ಉದ್ದೇಶ ಕನ್ಯೆಯನ್ನು ನೋಡುವುದರಿಂದ ಅವರ ಸಂಬಂಧಿಕರು ಯಾವ ರೀತಿಯ ಉಪಚಾರವನ್ನು ಮಾಡುತ್ತಾರ ಮತ್ತು ಅವರ ಸಂಬಂಧ ಮಾಡಿದರೆ ತಮ್ಮ ಮಗನಿಗೆ (ಅಳಿಯನಾದ) ನಂತರ ಅವನಿಗೆ ಯಾವ ರೀತಿಯಿಂದ ಉಪಚರಿಸುತ್ತಾರೆ ಎಂಬ ತಿಳುವಳಿಕೆಯಿದ್ದಿರಬಹುದು.

ಕನ್ಯೆಯನ್ನು ನೋಡಲು ಹೋದಾಗ ಹಿರಿಯರು ಕನ್ಯೆಯನ್ನು ಕರೆಯಿಸುತ್ತಾರೆ ಬಂದ ನಂತರ ಆಕೆಯನ್ನು ಕೂಡಿಸಿದ ಆಕೆಗೆ ಪ್ರಶ್ನಿಸಲು ಪ್ರಾರಂಭಿಸುತ್ತಾರೆ. ಹುಡುಗನ ಸಂಬಂಧಿಕರು ಸಕ್ಕರೆ ಹೂ, ಕುಂಕುಮ. ಕೊಬ್ಬರಿ ಬಟ್ಟಲು. ಹಣ್ಣು ಈ ರೀತಿಯ ಮಂಗಳಕರವಾದ ವಸ್ತುಗಳನ್ನು ಕನ್ಯೆಯನ್ನು ನೋಡುವ ಶಾಸ್ತ್ರದ ಸಮಯದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಆಕೆಯು ಬಂದು ಕುಳಿತ ನಂತರ ಹೆಣ್ಣುಮಕ್ಕಳ ಕೈಯಿಂದ ಕನ್ಯೆಯ ಉಡಿಯಲ್ಲಿ ಇಡುತ್ತಾರೆ. ನಂತರವೇ ಹೆಸರು ಕೆಳಿ ಆಕೆಯ ಜೊತೆ ಮಾತನಾಡುತ್ತಾರೆ. ಹುಡುಗನ ಸಂಬಂಧಿಕರು ಮಾತಾಡುತ್ತಾರೆ ಏಕೆಂದರೆ ಕನ್ಯೆಗೆ ಮಾತುಬರುತ್ತವೆಯೋ ಅಥವಾ ಇಲ್ಲ, ಕಿವಿ ಸರಿಯಾಗಿ ಕೇಳುತ್ತವೆಯಿಲ್ಲ, ಆಕೆಯ ನಡಿಗೆಯನ್ನು ಸಹ ನೋಡುತ್ತಾರೆ.

ಈ ರೀತಿಯಾಗಿ ಆಕೆಯ ಪರೀಕ್ಷೆಯನ್ನು ಮಾಡುತ್ತಾರೆ. ನಂತರ ಹುಡುಗನಿಗೆ ಹುಡುಗಿ ಒಪ್ಪಿಗೆ ಅಥವಾ ಇಲ್ಲ ಎಂದು ತಿಳಿಸುತ್ತಾರೆ.

ಕನ್ಯೆಯನ್ನು ನೋಡಲು ಬಂದಾಗ ಹುಡುಗನ ಸಂಬಂಧಿಕರು ಹುಡುಗನ ಪ್ರಶ್ನೆಗಳು ಕೇಳುತ್ತಾರೆ. ಆತನಗೆ ಕೇಳುವ ಪ್ರಶ್ನೆಗಳು ಹೆಸರು, ಕೆಲಸ ವಿದ್ಯಾಭ್ಯಾಸವನ್ನು ಈ ರೀತಿಯಾಗಿ ಹೆಣ್ಣಿನ ಕಡೆಯವರು ಗಂಡಿಗೆ ಪ್ರಶ್ನೆಗಳನ್ನು ಕೇಳುತ್ತಾರೆ.

ಹೆಣ್ಣನ್ನು ಕರೆಸಿದ್ದಾಗ ಗಂಡಿನ ಕಡೆಯವರು ಪ್ರಶ್ನೆಗಳನ್ನು ಕೇಳುತ್ತಾರೆ ಗಂಡಿಗೆ ಮತ್ತು ಆತನ ಕಡೆಯವರಿಗೆ ಹುಡುಗಿಯು ಒಪ್ಪಿಗೆ ಎಂದು ತಿಳಿಸುತ್ತಾರೆ ಮತ್ತೆ ಹುಡುಗ ನೋಡಿದ ನಂತರ ಹುಡುಗನ ಅಕ್ಕ-ತಂಗಿಯರು. ತಾಯಿ ಮುಂತಾದ ವರನು ಎರಡನೇಯ ಹಂತದಲ್ಲಿ ನೋಡಲು ಹೋಗುತ್ತಾರೆ.

ಈ ರೀತಿಯಾಗಿದ ನಂತರ ಎಲ್ಲರ ಒಪ್ಪಿಗೆ ಹುಡುಗನ ಕಡೆಯವರು ಒಪ್ಪಿದ ನಂತರ ಮುಂದಿನ ಕಾರ್ಯಕ್ರಮ ಹುಡುಗಿಯವರ ಕಡೆಯಿಂದ ಉತ್ತರದ ನೀರೀಕ್ಷೆಯನ್ನು ಹುಡುಗನ ಕಡೆಯಿಂದ ಪ್ರತಿ ಉತ್ತರಕ್ಕೆ ಕಾಯುತ್ತಾರೆ.

೨) ಹುಡುಗಿಯ ಕಡೆಯವರು ಹುಡುಗನ ಮನೆತನ ನೋಡುವುದು

ಮದುವೆಯ ಸಂಪ್ರದಾಯದಲ್ಲಿ ಎರಡನೇ ಹಂತವಾಗಿದೆ. ಮೊದಲನೆಯದು ಕನ್ಯೆಯನ್ನು (ಹುಡುಗಿಯನ್ನು) ನೋಡುವ ಶಾಸ್ತ್ರ ಈ ಶಾಸ್ತ್ರದ ನಂತರ ಬಂದದು. ಈ ಶಾಸ್ತ್ರವು ಮುಖ್ಯವಾಗಿ ಹುಡುಗಿಯ ಕಡೆಯವರು ಹುಡುಗನ ಮನೆತನವನ್ನು ನೋಡುವುದು.

ಹುಡುಗಿಯ ತಂದೆ-ತಾಯಿಗೆ ಹುಡುಗನು ಒಪ್ಪಿಗೆ ಆದನಂತರವೇ ಹುಡುಗನ ಮನೆತನ ನೋಡಲು ಹೋಗುತ್ತಾರೆ. ಅಲ್ಲಿ ಹೋಗಿ ಅವರ ಮನೆತನ ವ್ಯಾಪಾರ, ವ್ಯವಹಾರವನ್ನು ನೋಡುತ್ತಾರೆ. ಹುಡುಗನ ಕೆಲಸವು ಯಾವ ರೀತಿಯಿದೆ. ಅವರು ಇರುವ ಊರಿನಲ್ಲಿ ಅವರ ಗೌರವ ಮತ್ತು ಅವರ ಹಿರಿಯರುಯಾವ ರೀತಿಯಿಂದ ಇದ್ದರು ಎಂಬುವುದನ್ನು ತಿಳಿದು ಕೊಳ್ಳಲಾಗುತ್ತದೆ ಮತ್ತು ಹುಡುಗನ ನಡವಳಿಕೆ ಯಾವ ರೀತಿಯಾಗಿದೆ ಹುಡುಗನ ಸ್ವಭಾವ ಮನೆತನ ಆಸ್ತಿ ಸಂಪತ್ತು ಸಹ ನೋಡಿಯೆ ಅವರು ತನ್ನ ಮಗಳನ್ನು ಕೊಡಲು ಸಿದ್ಧರಾಗುತ್ತಾರೆ.

ಮನೆತನದ ಜೊತೆಗೆ ಮುಖ್ಯವಾಗಿ ಹುಡುಗನ ಸ್ವಭಾವನ್ನು ಸಹ ಪರೀಕ್ಷಿಸುತ್ತಾರೆ. ಅವನು ಯಾವ ರೀತಿ ಆ ಹುಡುಗನ ಗುಣಗಳನ್ನು ತಿಳಿದುಕೊಂಡ ನಂತರವೇ ಹುಡುಗನ ನಡತೆಯು ಸರಿಯಾಗಿಯಿದೆ ಎಂದು ತಿಳಿದುಕೊಂಡಾಲೇ ಅವರು ಹುಡುಗನ ಮನೆತನವನ್ನು ನೋಡುತ್ತಾರೆ.

ಹುಡುಗನ ಮನೆತನ ನೋಡುವ ಉದ್ದೇಶ ಎಂದರೆ ಹುಡುಗಿಯು ಹೋದ ಮನೆಯಲ್ಲಿ ಎಲ್ಲಾ ರೀತಿಯ ಸೌಕರ್ಯವನ್ನು ಪಡೆದಿರಲಿ ಎಂದು ತಂದೆತಾಯಿಯರ ಆಸೆಯಾಗಿರುತ್ತದೆ. ಮತ್ತು ಮದುವೆಯಾಗಿದ (ಹುಡುಗನು)ವರನು ತನ್ನ ಮಗಳಿಗೆ ಸುಖ ಸಂತೋಷದಿಂದ ನೋಡಿಕೊಳ್ಳಬೇಕು ಎನ್ನುವುದೇ ಇವರ ಆಸೆಯಾಗಿದೆ.

ಹುಡಗನನ್ನು ಮನೆತನ ಮತ್ತು ಸ್ವಭಾವ ಒಪ್ಪಿಗೆ ಆದನಂತರ ನಿಶ್ಚಯ ಕಾರ್ಯ ಕ್ರಮವನ್ನು ಮಾಡುತ್ತಾರೆ.

೩) ಜಾತಕದ ಮಹತ್ವ :

ಮದುವೆಯನ್ನು ಮಾಡಬೇಕು ಎಂದಾಗ ವಧು ವರರೂ ನೋಡಿ ಹುಡಗಿಯನ್ನು ಒಪ್ಪಿದ ನಂತರ ಹುಡಗಿಯ ಕಡೆಯವರು ಹುಡುಗನ ಸಂಬಂಧಿಕರು ಎಲ್ಲಾ ಪೋಷಕರಿಗೆ ಒಪ್ಪಿಗೆಯಾದ ನಂತರ ಜಾತಕವನ್ನು ನೋಡುತ್ತಾರೆ.

ಜಾತಕವನ್ನು ನೋಡುವ ಉದ್ದೇಶ ಮದುವೆಯಾದ ನಂತರವೂ ಕೌಟುಂಬಿಕವಾಗಿ ಸಾಮರಸ್ಯ, ಪ್ರೀತಿ, ಸುಖ, ಸಂತೋಷ, ಮಕ್ಕಳ ಸಂತತಿ ಪರಸ್ಪರ ಸಾಮರಸ್ಯ. ಜಾತಕದ ಲೆಕ್ಕಾಚಾರವನ್ನು ಮಾಡಿ ಹುಡುಗ-ಹುಡುಗಿ ಯಾವ ರೀತಿಯಿಂದ ಮುಂದಿನ ಜೀವನವನ್ನು ಸಾಗಿಸುತ್ತಾರೆ. ಎಂಬುವುದು ಜಾತಕದ ಮುಖಾಂತರ ತಿಳಿಯಲಾಗುತ್ತದೆ.

ಜಾತಕಗಳಲ್ಲಿ ಸಾಮ್ಯತೆಯನ್ನು ಗುರುತಿಸಲು ವಧು-ವರರ ಹುಟ್ಟು ಸಮಯ, ನಕ್ಷತ್ರ ಇತ್ಯಾದಿಗಳ ಹಿನ್ನೆಲೆಯಲ್ಲಿ ಗಂಡು-ಹೆಣ್ಣಿನ ಸಂಬಂಧದ ತಾಳಿಕೆ-ಬಾಳಿಕೆಗಳನ್ನು ಗ್ರಹಿಸಲಾಗುತ್ತದೆ. ಹನ್ನೆರಡು ಸಾಂಕೇತಿಕ ಗುಣಗಳ ಕೂಟವನ್ನು ತಾಳೆ (ಲೆಕ್ಕ) ಹಾಕುವುದರ ಮೂಲಕ ಪರಿಣಿತರು ಗಂಡು-ಹೆಣ್ಣಿನ ನಿರ್ದಿಷ್ಟ ಸಂಬಂಧವೂ ಬೇಕೋ ಬೇಡವೋ ಎಂದು ನಿರ್ಧರಿಸುತ್ತಾರೆ. ಮತ್ತು ಗಂಡು-ಹೆಣ್ಣಿನ ಸಂಬಂಧದ ಯಾವ ರೀತಿಯಿಂದ ಕೌಟುಂಬಿಕ ಸಾಮರಸ್ಯ, ಸುಖ ಸಂತೋಷ, ಮಕ್ಕಳ ಸಂತತಿ ಪ್ರೀತಿ ಹಾಗೂ ಅನುಸರಣೆ ಮತ್ತು ಲೈಂಗಿಕ ಸಾಮರಸ್ಯೆಗಳನ್ನು ಕುರಿತು ಜಾತಕದ ಲೆಕ್ಕಾಚಾರವು ಖಚಿತ ಮಾಹಿತಿಯನ್ನು ನೀಡುತ್ತದೆಂದು ಭಾವಿಸಲಾಗಿದೆ. ಜಾತಕವು ಕೂಡಿಬಂದಲ್ಲಿ ಹುಡುಗ-ಹುಡಗಿಯ ಹಿರಿಯರು ಪರಸ್ಪರ ಆರ್ಥಿಕ, ಸಾಮಾಜಿಕ, ಧಾರ್ಮಿಕ ಎಲ್ಲವೂ ಒಪ್ಪಿಗೆ ಆದ ನಂತರವೇ ನಿಶ್ಚಿತಾರ್ಥವನ್ನು ಮಾಡುತ್ತಾರೆ.

೪) ನಿಶ್ಚಯ ಮಾಡುವುದು (ಗಟ್ಟಿ ಮಾಡುವುದು)

ಈ ಕಾರ್ಯಕ್ರಮ ಹುಡುಗನ ಮನೆಯಲ್ಲಿ ನಡೆಯುತ್ತದೆ. ವರನ ಮತ್ತು ವಧುವಿನ ಮನೆಯವರು ಒಪ್ಪಿದನಂತರವೇ ಈ ಕಾರ್ಯಕ್ರಮಕ್ಕೆ ಮುಂದಾಗುತ್ತಾರೆ. ಮದುವೆಯ ಆಚರಣೆಯನ್ನು ಮಾಡುವಾಗ ವರನು ವಧುವಿಗೆ ಒಪ್ಪಿಗೆ ಆದ ನಂತರವೇ ವಧುವಿನ ಕಡೆಯವರು ಆತನ ಮನೆತನವನ್ನು ನೋಡಲು ಮುಂದಾಗುತ್ತಾರೆ ಈ ಎಲ್ಲಾ ಸಂಪ್ರದಾಯ ಆದ ನಂತರ ಅತೀ ಮುಖ್ಯವಾದದ್ದು ವರದಕ್ಷಿಣೆ ಈ ವರದಕ್ಷಿಣೆಯಿಲ್ಲದೇ ಮದುವೇಯೇ ಇಲ್ಲ ಏಕೆಂದರೆ ಮೊದಲಿನಿಂದಲೂ ಈ ಪದ್ಧತಿಯಿದೆ.

ಹಿಂದಿನ ಕಾಲದಲ್ಲಿ ವರನೇ ವಧುವಿಗೆ ವಧುದಕ್ಷಿಣೆಯನ್ನು ಕೊಟ್ಟು ಆಕೆಯನ್ನು ತನ್ನ ಮನೆಗೆ ಕರೆದು ತರುವ ಪದ್ಧತಿಯಿತ್ತು. ಆದರೆ ಈ ಸಮಯದಲ್ಲಿ ವರನಿಗೆ, ಕೇಳಿದಷ್ಟು ಹಣ, ಬಂಗಾರ, ಪಾತ್ರೆ, ಪಡಗ ಮುಂತಾದವುಗಳನ್ನು ಕೊಡಬೇಕಾಗುತ್ತದೆ.

ವರನ ಕಡೆಯುವರು ಕೇಳುವ ವರದಕ್ಷಿಣೆ ಅವರು ಹೇಳುವ ಕರಾರುಗಳು ಒಪ್ಪಿಕೊಂಡ ನಂತರವೇ ನಿಶ್ಚಯ ಕಾರ್ಯಕ್ರಮ ನಡೆಯುತ್ತದೆ.

ವರನ ಅರ್ಹತೆಯ ಮೇರೆಗೆ ವರದಕ್ಷಿಣೆಯನ್ನು ನಿಶ್ಚಿಯಿಸುತ್ತಾರೆ. ಈ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಕಾನೂನಿನ ಪ್ರಕಾರ ಅಪರಾಧ ಆದರು ಸಹ ವರದಕ್ಷಿಣೆ ಕೊಡದೇಯಿದ್ದರೇ ತನ್ನ ಮಗಳಿಗೆ ಮದುವೆಯಾಗುವುದಿಲ್ಲ ಎಂದು ತಿಳಿದು ವಧುವಿನ ಕಡೆಯವರು ತನ್ನ ಕೊಡುವ ಅರ್ಹತೆಯು ನಿರ್ಧರಿಸಿಯೇ ಬರುತ್ತಾರೆ. ಈ ಎರಡು ಸಂಬಂಧಿಕರ ಕಡೆ ವರದಕ್ಷಿಣೆ ನಿಶ್ಚಯವಾದ ನಂತರ ವಧುವಿನ ವರನ ಕಡೆಯ ಸಂಬಂಧಿಕರು ಸಕ್ಕರೆಯನ್ನು ತಿನ್ನುತ್ತಾರೆ.

೫) ಸಕ್ಕರೆ ಹಾಕುವುದು (ಕುಂಕುಮ ಹಚ್ಚುವುದು)

ಈ ಕಾರ್ಯಕ್ರಮವು ಹುಡುಗಿಯ ಮನೆಯಲ್ಲಿ ನಡೆಯುತ್ತದೆ. ಕುಂಕುಮ ಹಚ್ಚುವುದು ಈ ಹುಡುಗಿಯು ಈ ವರನ ಮನೆಯ ಸೊಸೆ, ವರನ ಹೆಂಡತಿ, ಎಂಬುದರ ಸೂಚನೆಯ ಉದ್ದೇಶವಾಗಿದೆ ಈ ಕಾರ್ಯಕ್ರಮದ ದಿನವೇ ಮದುವೆ ದಿನ ನಿಶ್ಚಿಯಿಸುತ್ತಾರೆ.

ಈ ಕಾರ್ಯಕ್ರಮದಲ್ಲಿ ಹುಡುಗನ ಮನೆಯವರು ಸಂಬಂಧಿಕರು ಹುಡಗಿಯ ಮನೆಗೆ ಬರುತ್ತಾರೆ. ಈ ಕಾರ್ಯಕ್ರಮ ಹುಡಗನನ್ನು ಕರೆಸಬಹುದು ಇಲ್ಲವಾದರೆ ಹುಡುಗಿಯನ್ನು ಮಾತ್ರ ಮಾಡುತ್ತಾರೆ. ಮೊದಲು ಈ ಕಾರ್ಯಕ್ರಮ ಮದುವೆಯ ಹಿಂದಿನ ದಿನವೇ ಮಾಡುತ್ತಿದ್ದರು. ಆದರೆ ಇವಾಗ ಮೊದಲು ಈ ಕಾರ್ಯಕ್ರಮ ಮಾಡುತ್ತಿದ್ದಾರೆ.

ಈ ಶಾಸ್ತ್ರದಲ್ಲಿ ಹುಡುಗಿಯನ್ನು ಹುಡುಗನ ಸಂಬಂಧಿಕರು ರೇಷ್ಮೆಯ ಸೀರೆಯನ್ನು ಮತ್ತು ಆಭರಣವನ್ನು ಹುಡಗಿಗೆ ತರುತ್ತಾರೆ. ತಮ್ಮ ಹುಡಗಿಯ ಕಡೆಯುವರು ಹುಡುಗನನ್ನು ಕರೆಸಿದರೆ ಹುಡುಗನಿಗೆ ಬಟ್ಟೆ ಮತ್ತು ಉಂಗುರವನ್ನು ಹುಡುಗನಿಗೆ ತರುತ್ತಾರೆ. ಪಾಶ್ಚಾತ್ಯರ ಪ್ರಭಾವ ಎಂದಾಗ ಹುಡಗನಿಗೆ ಕರೆಸುತ್ತಿದ್ದಾರೆ. ಹುಡುಗ ಮತ್ತು ಹುಡಗಿಯನ್ನು ಕೂಡಿಸಿ ಸ್ವಾಮಿಯು ಗಣೇಶನ ಪೂಜೆಯನ್ನು ಮೊದಲು ಮಾಡಿಸುತ್ತಾರೆ. ಪೂಜೆಯನ್ನು ಮಾಡಲು ಮೊದಲು ೫ ತಂಬಿಗೆಗಳು ಮತ್ತು ೫ ಎಲೆ ಮತ್ತು ಸೇರಪಾವು [illegible]. [illegible]-೫. ಬಾದಾಮು-೫, ಅರಶಿನ ಬೋಟು ಮುಂತಾದ ಅವುಗಳ ಜೊತೆಗೆ ೨ ಕೆ[illegible] ಬಟ್ಟಲು, ಒಂದು ಪೋಲಕದ ಪೀಸು, ಧಾರದ ಉಂಡೆ ಈ ರೀತಿಯಾಗಿ ಪೂಜೆಯನ್ನು ಮಾಡಲು ಬೇಕಾಗಿರುವ ಸಾಮಾನುಗಳು.

ಹುಡುಗ-ಹುಡುಗಿಯನ್ನು ಕೂರಿಸಲು ಸೇರ ಪಾವು ಅಕ್ಕಿ ಸಸಿಯನ್ನು ಬರೆಯಲು ತರಿಸುತ್ತಾರೆ ಇವು ಎಲ್ಲಾ ಸಾಮಾನುಗಳು ಹುಡುಗನ ಕಡೆಯವರು ತರಬೇಕು.

ಮೊದಲು ಸ್ವಾಮಿಯು ಪುರೋಹಿತರು ಒಂದು ಜಮಕಾನಿಯ ಮೇಲೆ ಅಕ್ಕಿಯಿಂದ ಸಸಿಯನ್ನು ಬರೆಯುತ್ತಾರೆ. ನಂತರ ಹುಡುಗ-ಹುಡಗಿಯನ್ನು ಕರೆಯಿಸಿ ಆ ಸಸಿಯ ಮೇಲೆ ಕುಳಿಸಿರುತ್ತಾರೆ. ದಿಕ್ಕನ್ನು ನೋಡಿ ಈ ಸಸಿಯನ್ನು ಬರೆಯುತ್ತಾರೆ.

ಅತ್ತ ನೂರಂಗಡಿ ಇತ್ತ ನೂರಂಗಡಿ
ಚಿತ್ರದ ಅಂಗಡಿ ಹುಮನಾಬಾದಿ ಬಾಜರದಾಗ
ದಂಡಿ ಬಂದಾವೆ ಮಗಳಿಗೆ
ದಂಡಿನೇ ಬಂದಾವ ಮಗಳ ಮಲ್ಲಮಗ
ಕಟ್ಟಿನೋಡ್ಯಾರೆ ಶುಭದಿಂದೆ

ಹಾಡಿದವರು – ಶ್ರೀಮತಿ ಚಂದ್ರಮ್ಮ ಸಂಗಪ್ಪಾ ಹುಲಸೂರ

ಒಳ್ಳುಕಲ್ಲು ಪೂಜೆ

ನಿಶ್ಚಯದ ನಂತರ ಸಕ್ಕರೆ ಹಚ್ಚುವ ಕಾರ್ಯಕ್ರಮ ಆದ ಮೇಲೆ ಮದುವೆಯ ದಿವಸದ ಮೊದಲು ಈ ಕಾರ್ಯಕ್ರಮವನ್ನು ಮಾಡುತ್ತಾರೆ. ಈ ಒಳ್ಳುಕಲ್ಲು ಪೂಜೆಯನ್ನು ವಧು ಮತ್ತು ವರನ ಮನೆಯ ಕಡೆಗೆ ಒಳ್ಳುಕಲ್ಲು ಪೂಜೆಯನ್ನು ಮಾಡುತ್ತಾರೆ. ಮೊದಲು ಮದುವೆಯ ದಿವಸಕ್ಕಿಂತ ಹಿಂದಿನ ದಿನ ಒಳ್ಳುಕಲ್ಲು ಪೂಜೆ ಮಾಡುತ್ತಾರೆ.

ನಿಶ್ಚಯದ ಕೆಲಸ ಮುಗಿಯುತ್ತಲೇ ಲಗ್ನ ಮೂಹೂರ್ತ ತೆಗೆಸಿ ಕುಟ್ಟು, ಅಕ್ಕಿ ಸಿದ್ದಗೊಳಿಸುವುದಕ್ಕೆ ಪ್ರಾರಂಭಿಸುತ್ತಾರೆ. ಮೊದಲಿಗೆ ಒಳ್ಳಕಲ್ಲು ಪೂಜೆಯನ್ನು ಐದು ಜನ ಮುತ್ತೈದೆಯರು ಪೂಜಿಸುತ್ತಾರೆ. ಆ ಕೆಲಸಕ್ಕೆ ಬಂದುಬಳಗದವರನ್ನು ಮತ್ತು ನೆರೆಹೊರೆಯುವರನ್ನು ಸಹ ಕರೆಯುತ್ತಾರೆ.

ಒಳ್ಳುಕಲ್ಲು ಪೂಜೆಗೊಳ್ಳುತ್ತವೆ. ಒಣಕೆ ಸಿಂಗಾರ [illegible] ತಮ್ಮಂದಿರು ಹಾಲು ಬೋನವನ್ನು ಉಂಡು ಹೊನ್ನಿನುಳಿ ಬಾಚಿಯನ್ನು [illegible] ಮೇಲೆ ಎತ್ತಿಕೊಂಡು ಗುಡ್ಡಕ್ಕೆ ಹೋಗಿ ಹಿಪ್ಪೆಯ ಮರ ಕಡೆದು ಒಣಕೆ [illegible] [illegible].

ಯಾವುದೇ ಶುಭ ಕಾರ್ಯವನ್ನು ಮಾಡುವಾಗ ಒಳ್ಳುಕಲ್ಲು ಪೂಜೆಯನ್ನು ಮಾಡುತ್ತಾರೆ. ಬೀಸುವ ಕಲ್ಲು, ಒಳ್ಳು ಒಣಕೆ ಪೂಜೆ ಐದು ಜನ ಮುತ್ತೈದೆಯರು ಪೂಜೆಗೆ ಬರುತ್ತಾರೆ.

ಬೀಸುವ ಕಲ್ಲಿನ ಪೂಜೆ :

ಐದು ಜನ ಮುತ್ತೈದೆಯರು ಬೀಸುವ ಕಲ್ಲಿಗೂ ಪೂಜೆಯನ್ನು ಮಾಡುತ್ತಾರೆ. ಅದರಲ್ಲಿ ಅಕ್ಕಿಯನ್ನು ಬೀಸುತ್ತಾರೆ. ಅಕ್ಕಿ ಗೋಧಿ, ಚಣಗಿ, ಕಡ್ಲಿ ಬೇಳೆ, ತೊಗರಿ ಬೇಳೆ, ಧಾನ್ಯ, ಉಲುಲಿ, ನೆಂಕಿ, ಶಾವಿ ಅಕ್ಕಿ, ಬರಗಿನ ಅಕ್ಕಿ ಒಟ್ಟು ಹನ್ನೊಂದು ಧಾನ್ಯಗಳನ್ನು ಹಾಕಿ ಮಿಶ್ರ ಮಾಡಿ ಐದು ಜನ ಮುತ್ತೈದೆಯರು ಜೀರಗಿ ಮೆಂತಿಟ್ಟು ಮಾಡುವ ಕೆಲಸವನ್ನು ಮಾಡುತ್ತಾರೆ.

ಬೀಸುವಾಗ ಮುತ್ತೈದೆಯರು ಹಾಡನ್ನು ಹಾಡುತ್ತಾರೆ. ಬೀಸುವ ಕಲ್ಲಿನ ಮೇಲೆ ಐದು ಎಲೆ ಅಡಕೆಗಳನ್ನು ಇಟ್ಟು ಪೂಜೆಯನ್ನು ಮಾಡಿ ಐದು ಜನ ಮುತ್ತೈದೆಯರು "ಒಬ್ಬರಿಗೊಬ್ಬರು ಶೆರಗಿನಲ್ಲಿ ಕೊಟ್ಟು ಅವರ ಗಂಡನ ಹೆಸರನ್ನು ಹೇಳುತ್ತಾರೆ."

ಒಳಕಲ್ ಪೂಜೆ ಹಾಡು

ಕಲ್ ಪೂಜಿ ಮಾಡಲಿಕ ನನ್ಯಾರು ಕರಸ್ಯರ
ಸಾಲಮೊಳಗಿ ಮನಿಯವಳ । ಸುವ್ವಿ ಸುವ್ವಿ ಸುವ್ವಾಲೆ

ಸಾಲು ಮೊಳಗಿ ಮನಿಯವಳ ತಂಗ್ಯವ್ವ ಕಲ್ ಪೂಜಿಗಿ
ಕರಶ್ಯಾಳ । ಸುವ್ವಿ ಸುವ್ವಿ ಸುವ್ವಾಲೆ

ಸಾಲಮಾಳಗೀ ಮನಿಯವಳ ತಂಗೆವ್ವ
ಒಳಪೂಜಿಗಿ ಕರಿಶ್ಯಾಳ
ಪಿಲ್ಯಾದಗಾಲ ಮಗಳ ಸಂಗಮ್ಮಗ ಪಲ್ಲಕ್ಕಿ ಕೊಟ್ಟು ಕರಶ್ಯಾರ
ಮಂಟಗಿಗಾಲ ಮಗಳ ಸಂಗಮ್ಮಗ ಒಚಿಟಿ
ಶೃಂಗರಿಸಿ ಖಳವ್ಯಾರ, ಸುವ್ವಿ ಸುವ್ವಿ ಸುವ್ವಾಲೆ

ಹಂದರ ಮ್ಯಾಲಿನ ಕಣಕಿ ನಂದಿ ಮೆಯ್ದುವರೇ
ಬಿಚ್ಚಿ ಬಿಳಿಯ ಹರಿವ್ಯಾರ ಸುವ್ವಿ ಸುವ್ವಿ ಸುವ್ವಾಲೆ

ಬಿಚ್ಚಿ ಬಿಳಿಯಲಿ ಹರವ್ಯಾರ, ತಮ್ಮಗ ಅಣ್ಣ ಮಾಡ್ಯಾನ
ಮದವೀಯ, ಸುವ್ವಿ ಸುವ್ವಿ ಸುವ್ವಾಲೆ ॥

ಹಾಡಿದವರು : ಬಿ.ಎಮ್. ಚಾಕುಟ್ಟಿ

ಮದುವೆಯ ಪೂರ್ವಸಿದ್ಧತೆ :

ಮದುವೆಯ ದಿನವನ್ನು ನಿಶ್ಚಿಯಿಸಿದ ನಂತರವೇ ಮನೆಯ ಅಲಂಕಾರವನ್ನು ಮಾಡಿಕೊಳ್ಳಬೇಕಾಗುತ್ತದೆ. ಮನೆಗೆ ಹೊಸ ಬೀಗರು ಮತ್ತು ಸಂಬಂಧಿಕರು ಬರುತ್ತಾರೆ. ಆ ಸಮಯದಲ್ಲಿ ಮನೆ ಒಳ್ಳೆಯ ರೀತಿಯಿಂದ ಅಲಂಕರಿಸಿದರೆ ಮನೆಯು ಸರಿಯಾಗಿ ಕಾಣುತ್ತದೆ. ಆದ್ದರಿಂದ ಮನೆಗೆ ಸುಣ್ಣ ಜಾಜವನ್ನು ಹಾಡಿ ಮದುವೆಯ ಸಮಯದಲ್ಲಿ ದೇವರಿಗೆ ಹೋಗುತ್ತಾರೆ. ಆದ್ದರಿಂದ ಸ್ವಚ್ಛತೆಗೆ ಆದ್ಯತೆಯನ್ನು ನೀಡಲಾಗುತ್ತದೆ.

ಈ ಕೆಲಸ ಆದ ನಂತರ ಮನೆಯಲ್ಲಿರುವ ಎಲ್ಲಾ ಬಟ್ಟೆ ಬರೆಗಳನ್ನು ಒಗೆಯುತ್ತಾರೆ. ಮನೆಯನ್ನು ಎಲ್ಲಾ ಕಡೆಯಿಂದ ಸ್ವಚ್ಛ ಮಾಡಬೇಕೆಂಬ ಉದ್ದೇಶದಿಂದ ಮನೆಯನ್ನು ಸ್ವಚ್ಛತೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ.

ಮನೆಗೆ ಬಂದ ಹೊಸ ಸೊಸೆ ಸಂಬಂಧಿಕರು ಮನೆಗೆ ಬರಬೇಕಾಗುತ್ತದೆ ಎಂಬುದು ಸಹ ಇರಬಹುದು. ಮನೆಯ ಸ್ವಚ್ಛತೆಯ ಕನ್ಯೆ ಹುಡುಗ ಇಬ್ಬರು ಮನೆಯಲ್ಲಿಯೂ ನಡೆಯುತ್ತೆ. ಸ್ವಚ್ಛತೆಯ ನಂತರ ಆಹಾರ ಧಾನ್ಯಗಳನ್ನು ಸ್ವಚ್ಛಗೊಳಿಸುತ್ತಾರೆ.

ಮೊದಲು ಊರಿಗೆ ಊಟ ಎಂಬಂತೆ ಆಹಾರ ಧಾನ್ಯಗಳ ಸ್ವಚ್ಛತೆಗೆ ಮತ್ತು ಮೊದಲು ಅದರಲ್ಲಿ ಕಸ ಕಡ್ಡಿಗಳು ಹೆಚ್ಚು ಬರುತ್ತಿದ್ದವು. ಈ ಸಮಯದಲ್ಲಿ ಮದುವೆಯ ದಿನದಂದೇ ಧಾನ್ಯವನ್ನು ತಂದು ಅಡಿಗೆಯನ್ನು ಮಾಡಿಸುತ್ತಾರೆ.

- ಮನೆ ಸ್ವಚ್ಛವಾಗಿ ಮತ್ತು ಸುಂದರವಾಗಿ ಕಾಣುತ್ತದೆ.
- ಮದುವೆಯ ಸಮಯದ ಪೂಜೆ ವಿಧಿ-ವಿಧಾನಗಳನ್ನು ಮಾಡಲು ಯೋಗ್ಯವಾದ ಸ್ಥಳವಾಗಿರುತ್ತದೆ ಎಂಬುದು ಸಹ ಆಗಿದೆ.

ವಧು-ವರರ ಬಟ್ಟೆ ತರುವುದು :

ಮದುವೆಯ ದಿನ ನಿಶ್ಚಯಿಸಿದ ನಂತರ ವಧು ವರರ ಬಟ್ಟೆಯನ್ನು ತರುವ ಕೆಲಸವು ಪ್ರಾರಂಭವಾಗುತ್ತದೆ.

ಮೊದಲು ವಧು ವರರ ಬಟ್ಟೆಯನ್ನು ಯಾರದರು ಅಂದರೆ ವರನ ಬಟ್ಟೆ ವರನ ಕಡೆಯವರು ವಧುವಿನ ಬಟ್ಟೆಯನ್ನು ವಧುವಿನ ಕಡೆಯವರು ತರುತ್ತಿದ್ದರು. ವಧುವಿನ ಬಟ್ಟೆಯನ್ನು ವರನ ಕಡೆಯವರು ಆದ ಅಕ್ಕ ತಂಗಿ ತಾಯಿ ಅವರ ಇಷ್ಟ ಇಲ್ಲವೆ ಮನೆಯ ಹಿರಿಯರು ಗಂಡಸರೇ ವಧುವಿನ ಬಟ್ಟೆಯನ್ನು ತರುತ್ತಿದ್ದರು. ಅವರು ತಂದದ್ದನ್ನು ವಧು ಉಡುತ್ತಿದ್ದಳು. ವರನ ಬಟ್ಟೆಗಳಿಗೆ ಮಾತ್ರ ವರನನ್ನು ಕರೆದು ಆತನ ಇಷ್ಟದ ಮೇರೆಗೆ ಬಟ್ಟೆಯನ್ನು ಖರೀದಿಸುತ್ತಿದ್ದರು. ಈಗ ಹಾಗಲ್ಲ ಇತ್ತೀಚಿನ ದಿನಗಳಲ್ಲಿ ವಧುವಿನ ಬಟ್ಟೆಯು ಆಕೆಯ ಇಷ್ಟದ ಮೇರೆಗೆ ಬಟ್ಟೆಯನ್ನು ತರಲು ವಧುವನ್ನು ಕರೆದು ಒಯ್ಯುತ್ತಿದ್ದರು. ಆಕೆಯ ಇಚ್ಚೆಯ ಮೇರೆಗೆ ಬಟ್ಟೆ ಆಭರಣಗಳನ್ನು ಸಹ ಮಾಡುವ ಪದ್ಧತಿ ಈ ಸಮಯದಲ್ಲಿ ಇದೆ.

ಈ ಸಮಯದಲ್ಲಿ ಆಡಂಬರದ ಜೀವನದಿಂದ ಕೂಡಿದೆ. ಇದರಿಂದ ಮಧ್ಯಮ ವರ್ಗದವರು ಬಳಲುವ ಪರಿಸ್ಥಿತಿ ಉಂಟಾಗಿದೆ.

ಲಗ್ನ ಪತ್ರಿಕೆ ಮುದ್ರಿಸುವುದು :

ಮದುವೆಯ ಸಮಯದಲ್ಲಿ ನೆಂಟರಿಗೆ ಬಂಧುಬಾಂಧವರಿಗೆ ಆಮಂತ್ರಣ ಕೋರಲು "ಮಮತೆಯ ಕರೆಯೋಲೆ" ಎಂದು ಸಹ ಹೇಳಬಹುದು. ವಧುವರರ ಒಪ್ಪಿಗೆ ಆದ ನಂತರ ಹಿರಿಯರು ನಿಶ್ಚಿತಾರ್ಥ ಕಾರ್ಯಕ್ರಮ ಮುಗಿದ ನಂತರ ವಧುವರರನ್ನು ಮದುವೆಯ ಬಂಧನದಲ್ಲಿ ಬೆಸೆಯುವ ಈ ಲಗ್ನಪತ್ರವು ಸಮಾಜದಲ್ಲಿಯ ಸಂಪ್ರದಾಯ ಕಟ್ಟು ಪಾಡುಗಳನ್ನು ಎಲ್ಲರ ಎದುರಿಗೆ ಸಾಕ್ಷಿಯ ಸಲುವಾಗಿ ಈ ಲಗ್ನಪತ್ರವನ್ನು ಮುದ್ರಿಸುತ್ತಾರೆ.

ಲಗ್ನಪತ್ರಿಕೆಯಲ್ಲಿ ವಧುವರನ ಹೆಸರು ತಂದೆ ತಾಯಿಯ ಹೆಸರು ಲಗ್ನದ ಶುಭ ಮೂಹೂರ್ತ ಮತ್ತು ಅದರ ಪೂರ್ಣ ವಿಳಾಸ ಮುಂತಾದ ವಿವರವನ್ನು ಲಗ್ನಪತ್ರಿಕೆಯಲ್ಲಿ ಮುದ್ರಿಸುತ್ತಾರೆ. ಈ ಲಗ್ನಪತ್ರಿಕೆಯಲ್ಲಿ ಮುದ್ರಿಸುವ ಸಮಯದಲ್ಲಿ ಮೊದಲು ಗಣೇಶನ ಫೋಟೋ ನಂತರ ಮನೆಯ ದೇವರು(ಕುಲದೇವರು) ಹೆಸರನ್ನು ಬರೆಯುತ್ತಾರೆ. ನಂತರ ಹುಡುಗನ ಕಡೆಯ ಲಗ್ನಪತ್ರಕ್ಕೆ ಹುಡುಗನ ಹೆಸರು ಮೊದಲು ಬರೆಯುತ್ತಾರೆ. ಹುಡುಗಿಯ ಲಗ್ನಪತ್ರಿಕೆಯಲ್ಲಿ ಹುಡುಗಿಯ ಹೆಸರು ಮೊದಲು ಬರೆಯುತ್ತಾರೆ. ನಂತರ ವರನ ಹೆಸರು ಬರೆಯುತ್ತಾರೆ. ನಂತರ ಮದುವೆಯ ಮೂಹೂರ್ತವನ್ನು ಮುದ್ರಿಸಲಾಗುತ್ತದೆ.

ಮದುವೆಯ ಲಗ್ನಪತ್ರಿಕೆಯಲ್ಲಿ ಈ ರೀತಿಯಲ್ಲಿ ತಿಳಿಸುತ್ತಾರೆ. 'ಸ್ವಸ್ತಿಶ್ರೀ ಮಾನ್ಯಪ ಶಾಲಿವಾಹಕ ಶಕೆ ೧೯೨೬ನೇ ತಾರುಣ ನಾಮ ಸಂವತ್ಸರ ಮಿತಿ ವೈಶಾಖ ದಿನಾಂಕ ಮತ್ತು ವಾರದಂದು ಮಧ್ಯಾಹ್ನ ಇಷ್ಟು ಗಂಟೆ ಇಷ್ಟು ನಿಮಿಷಕ್ಕೆ ಸಲ್ಲುವ ಅಭಿಜಿತ ಲಗ್ನದ ಶುಭ ಮೂಹೂರ್ತದಲ್ಲಿ ಅಕ್ಷತಾರೋಹಣ ನಿಶ್ಚಯಿಸುತ್ತಾರೆ.' ಎಂದು ಮನವರಿಕೆಯನ್ನು ತಿಳಿಸುತ್ತಾರೆ ನಂತರ ಆಗಮನಕ್ಕೆ ಹಿರಿಯರ ಹೆಸರನ್ನು ಬರೆಯಲಾಗುತ್ತದೆ.

ಈ ರೀತಿಯಿಂದ ಬಂಧು ಬಾಂಧವರ ಮನೆಯ ಅಣ್ಣ-ತಮ್ಮಂದಿರ ಹೆಸರನ್ನು ಮುದ್ರಿಸಲಾಗುತ್ತದೆ. ಭೋಜನ ಸಮಯವನ್ನು ನಿರ್ಧರಿಸಲಾಗಿದೆ. ಇದು ಮದುವೆ ನಡೆಯುವ ಸಾಕ್ಷಿಗಳಲ್ಲಿ ಒಂದಾಗಿದೆ ಲಿಖಿತ ದಾಖಲೆಯಾಗಿದೆ.

ಲಗ್ನ ಪತ್ರವನ್ನು ಬಂಧು ಬಾಂಧವರಿಗೆ ಸಂಬಂದಿಕರಿಗೆ ಹಂಚುತ್ತಾರೆ. ಅದಕ್ಕಿಂತ ಮುಂಚೆ ಮನೆಯ ದೇವರಿಗೆ ಮೊದಲು ಲಗ್ನ ಪತ್ರವನ್ನು ಇಟ್ಟು ಪೂಜಿಸಿದ ನಂತರವೇ ಬಂಧು-ಬಾಂಧವರಿಗೆ ಹಂಚುತ್ತಾರೆ.

ಭಾಷಣಕಿ ಕಾರ್ಯಕ್ರಮ

ಮದುವೆಯ ಹಿಂದಿನ ದಿನ ಮದುವೆಯ ಹಿಂದಿನ ದಿನವನ್ನು ಬೀದರ ಜಿಲ್ಲೆಯ ಕಡೆಗೆ ಭಾಷಣಕಿ ಕಾರ್ಯಕ್ರಮ ಎಂದು ಕರೆಯುತ್ತಾರೆ. ಈ ಕಾರ್ಯಕ್ರಮವೂ ಮದುವೆ ಅಷ್ಟೇ ಆಡಂಬರವಾಗಿರುತ್ತದೆ. ಆದರೂ ಅಷ್ಟು ತೆಗೆದು ಹಾಕುವಂತಿಲ್ಲ ಈ ಪದ್ಧತಿಯು ವಧುವಿನ ಮನೆಯಲ್ಲಿ ನಡೆಯುತ್ತದೆ.

ವರನ ಮನೆಯಲ್ಲಿ

ವರನ ಮನೆಯಲ್ಲಿ ಆ ದಿನವನ್ನು ಅಳಿಯ ಅತ್ತೆಯ ಮನೆಗೆ ಹೋಗುವ ದಿನ ಎಂದು ಕರೆಯುತ್ತಾರೆ. ವರನ ಮನೆಯಲ್ಲಿ ಮೊದಲು "ಲಗ್ನ ಪತ್ರಿಕೆಯನ್ನು ತೆಗೆಸುತ್ತಾರೆ. ಪೂಜೆಯನ್ನು ಮಾಡುತ್ತಾರೆ. ನಂತರ ಆರತಿಯನ್ನು ಹಿಡಿಯಲು ಯಾರ ಹೆಸರಿನಲ್ಲಿ ಬರುತ್ತದೆ. ಅವರ ಹೆಸರನ್ನು ಪಂಚಾಂಗದಿಂದ ತೆಗೆಸುತ್ತಾರೆ. ಅವರೇ ಆರತಿಯನ್ನು ಹಿಡಿದುಕೊಳ್ಳಬೇಕು ಮತ್ತು ಅವರಿಗೆ ಕಂಕಣವನ್ನು ಕಟ್ಟುತ್ತಾರೆ.

ವರನ ಜೊತೆ ಲಗ್ನ ಪತ್ರಿಕೆಯೂ ಪೂಜೆಯ ನಂತರ ವರನಿಗೂ ಕಂಕಣವನ್ನು ಕಟ್ಟುತ್ತಾರೆ. ಆರತಿ ಹಿಡಿಯುವವರಿಗೂ ಕಂಕಣವನ್ನು ಕಟ್ಟಿದ ನಂತರ ಸುರಗಿಯಲ್ಲಿ ವರನಿಗೆ ನೀರನ್ನು ಹಾಕುವ ಸಮಯದಲ್ಲಿ ವರನ ಅಕ್ಕ ತಂಗಿ ಸಂಬಂಧಿಕರ ಹೆಸರನ್ನು ತೆಗೆಯುತ್ತಾರೆ. ಅವರೇ ವರನಿಗೆ ನೀರು ಹಾಕುವ ಸಮಯದಲ್ಲಿ ವರನ ಹಿಂದೆ ನಿಲ್ಲಬೇಕು. ಇದು ಎಲ್ಲಾ ಲಗ್ನ ಪತ್ರಿಕೆಯ ಪೂಜೆ ನಂತರ ನಡೆಯುತ್ತದೆ. ನಂತರ ಮುಂದಿನ ಕೆಲಸ ವರನ ಮನೆಯಲ್ಲಿ ಮುತ್ತೈದಿಯರನ್ನು ಊಟ ಮಾಡಿಸುತ್ತಾರೆ.

ಲಗ್ನ ಪತ್ರಿಕೆಯನ್ನು ಪೂಜೆ ಮಾಡುವ ಸಮಯದಲ್ಲಿ ಹೊಸ [illegible] [illegible]ತ್ತಾರೆ. [illegible]

ಜೋಳ, ಐದು ತಂಬಿಗೆ, ಮತ್ತು ಒಂದು ಕುಪ್ಪಸದ ಕಣ ಒಂದು ದಾರದ ಉಂಡೆ ಎಲೆ ಅಡಿಕೆ ಅರಶಿಣ ಬೊಟ್ಟು ಮುಂತಾದವು ತರಲಾಗುತ್ತದೆ. ಮೊದಲು ಜೋಳವನ್ನು ಜಮಖಾನೆಯ ಮೇಲೆ ಹಾಕಿದ ನಂತರ ಐದು ತಂಬಿಗೆಗಳನ್ನು ಇಟ್ಟು ಅವುಗಳ ಮೇಲೆ ಕುಪ್ಪಸದ ಕಣ ಹಾಸುತ್ತಾರೆ. ಪೂಜೆಯನ್ನು ವರನ ಕೈಯಿಂದ ಮಾಡಿಸುತ್ತಾರೆ. ಈ ಪೂಜೆಯ ನಂತರ ವರನಿಗೆ ಕಂಕಣವನ್ನು ಕಟ್ಟುತ್ತಾರೆ.

ವರನ ಕಡೆ ಮದುವೆಯಲ್ಲಿ ಎಣ್ಣೆ ಹಚ್ಚುವ ಮತ್ತು ಸುರಗಿ ದಾರವನ್ನು ಸುತ್ತುವರನ ಹೆಸರನ್ನು ತೆಗೆಸುತ್ತಾರೆ. ಅವರು ಆ ಕೆಲಸದಲ್ಲಿ ಮುಂದಾಗುತ್ತಾರೆ. ನಂತರ ಒಳ್ಳುಕಲ್ಲು ಪೂಜೆಯನ್ನು ಮಾಡುತ್ತಾರೆ.

ವರನನ್ನು ಕರೆದೊಯ್ಯಲು ವಧುವಿನ ಸಂಬಂಧಿಕರು ಬರುತ್ತಾರೆ. ಅವರ ಸಂಬಂಧಿಕರಲ್ಲಿ ಇಬ್ಬರು ಅಥವಾ ಐದು ಜನ ಅಥವಾ ಹನ್ನೊಂದು ಜನ ಸಂಬಂಧಿಕರು ಬರುತ್ತಾರೆ. ಅವರಲ್ಲಿ ಹೆಂಗಸರು ಮತ್ತು ಗಂಡಸರು ಸೇರಿ ವರನನ್ನು ಕರೆದೊಯ್ಯಲು ಬರುತ್ತಾರೆ. ಬಂದ ಸಮಯದಲ್ಲಿ ಊಟ ಬಡಿಸಿದ ನಂತರ ಸೀರೆಯನ್ನು ಉಡಿಸುತ್ತಾರೆ ಹಾಗೆಯೇ ಬಳೆಗಳನ್ನು ಸಹ ಹಾಕಿಸುತ್ತಾರೆ. ಗಂಡಸರಿಗೆ ಟೆಲ ಟೋಪಿಯನ್ನು ವಧುವಿನ ಕಡೆಯವರಿಗೆ ಮಾಡುತ್ತಾರೆ. ಇದು ಎಲ್ಲಾ ಆದ ನಂತರ ವರನಿಗೆ ಕರೆದುಕೊಂಡು ವಧುವಿನ ಊರಿಗೆ ಹೋಗುತ್ತಾರೆ.

ವಧುವರರ ಬಟ್ಟೆಯನ್ನು ಪೂಜಿಸುವುದು

ವರನ ಮನೆಯಲ್ಲಿ ಮದುಮಕ್ಕಳ ಬಟ್ಟೆಯನ್ನು ಮಾಂಗಲ್ಯ ಮತ್ತು ಕಾಲುಂಗರ ಎರಡನ್ನು ಕೊಬ್ಬರಿ ಬಟ್ಟಲಿನಲ್ಲಿ ಇಟ್ಟು ಪೂಜೆಯನ್ನು ಮಾಡುತ್ತಾರೆ.

ಮದುವೆಯ ಹಿಂದಿನ ದಿನ ಈ ಪೂಜೆಯನ್ನು ಮಾಡುತ್ತಾರೆ. ಮೊದಲು ದೇವರಿಗೆ ಒಪ್ಪಿಸಿದ ನಂತರವೇ ಮದುಮಕ್ಕಳು ತೊಡಬೇಕು ಎಂಬ ಸಂಪ್ರದಾಯವಾಗಿದೆ. ಈ ಸಂಪ್ರದಾಯದಿಂದ ಮದುಮಕ್ಕಳ ಮುಂದಿನ ಜೀವನವು ಒಳ್ಳೆಯದಾಗಲಿ ಎಂಬ ನಂಬಿಕೆ

ಬಳೆ ತೊಡಿಸುವಾಗ

ಮದುವೆಯ ಹಿಂದಿನ ದಿನ ವರನ ವಧುವಿನ ಮನೆಯಲ್ಲಿ ಹೆಣ್ಣುಮಕ್ಕಳಿಗೆ ಬಳೆಗಳನ್ನು ಮದವೆಯ ಬಳೆಗಳು ಎಂದರೆ ಕೆಂಪು ಹಸಿರು ಬಳೆಗಳನ್ನು

ಮುತ್ತೈದೆಯರಿಗೆ ಹಾಕಿಸಿದರೆ ಒಳ್ಳೆಯದು ಎಂಬ ರೀತಿಯಿಂದ ಮದುವೆಯ ಮನೆಯಲ್ಲಿ ಬಳೆ ತೊಡಿಸುತ್ತಾರೆ ಆವಾಗ ಮುತ್ತೈದೆಯರು ಹಾಡನ್ನು ಹಾಡುತ್ತಾರೆ.

ಬಳೆಯ ನೀಡಲಿಕೆ ಬಂದ ಭಾಮೆಯರನ್ನೆ ಕಂದ
ಬಳೆಯ ನೀಡಲಿಕೆ ಬಂದ ಬೆಡಗುಗಾರ ಬಾಯಿಂದ

ಕೈತಾರೆ ಬಾರೆಂದ ಬಳೆಯ ನೀಡಲಿಕೆ ಬಂದ
ಹಸಿರು ನೀಲಿಯ ಬಳಿ ಹಸುಮುಖಿಯ ಬಾರಮ್ಮ
ಹೊಸ ಪರಿಯ ಬಳೆಯ ನೀಡುವೆ ಶಶಿಮುಖವೇ ಬಾರಮ್ಮ
ಊಧಕಾಯವಾದ ಚ್ಚುಲಿಯ ಕಾಜುಮಾಟದ ಬಳೆಯ
ಹೊಸ ಪರಿಯ ಬಳೆಯ ನೀಡುವೆ ಶಶಿಮುಖಿಯೇ ಬಾರಮ್ಮ
ಇಂದ್ರ ನೀಲವಾದ ಬಳೆ ರಂಗುರಂಗಿನ ಮಾದರಿ ಬೆಳೆ
ಚಂದ್ರ ಮುಖಿಯಬಾರೆ ನೀನು ಬಳಿಯ ತೊಡಿಸುವೆ ನಾನು

ಹಾಡಿದವರು – ಶ್ರೀಮತಿ ಸೇತುಬಾಯಿ

ವಧುವಿನ ಮನೆಯಲ್ಲಿ :

ವಧುವಿನ ಮನೆಯಲ್ಲಿಯೂ ಸಹ ಲಗ್ನ ಪತ್ರಿಕೆಯ ಪೂಜೆ ನಡೆಯುತ್ತದೆ. ಅಂದರೆ ವಧುವಿನ ತಂದೆ ತಾಯಿಯರ ಕಡೆ ಮದುವೆ ಇದ್ದರೆ ಲಗ್ನ ಪತ್ರಿಕೆ ಪೂಜೆ ಮಾಡಿಸುತ್ತಾರೆ. ಇಲ್ಲದಿದ್ದರೆ ಲಗ್ನ ಪತ್ರಿಕೆ ಪೂಜೆ ಮಾಡುವುದಿಲ್ಲ.

ವಧು ಪೂಜೆ ಮಾಡಬೇಕು ಸ್ವಾಮಿ ಸೇರುಪಾವು ಜೋಳ, ಐದು ತಂಬಿಗೆ, ಅರಶಿಣ, ದಾರ, ಒಂದು ಕುಪ್ಪಸದ ಕಣ ಮತ್ತು ಕೊಬ್ಬರಿ ಬಟ್ಟಲು ಮೊದಲಾದ ಪೂಜಾ ಸಾಮಾಗ್ರಿಗಳು ಮೊದಲು ಸೇರು ಪಾವು ಜೋಳ ಹಾಕಿದ ಸೇರು ಪಾವು ಜೋಳ, ಐದು ತಂಬಿಗೆ, ಮತ್ತು ಒಂದು ಕುಪ್ಪಸದ ಕಣ ಒಂದು ದಾರದ ಉಂಡೆ ಎಲೆ ಅಡಿಕೆ ಅರಶಿಣ ಬೊಟ್ಟು ಮುಂತಾದವು ತರಲಾಗುತ್ತದೆ. ಮೊದಲು ಜೋಳವನ್ನು ಜಮಖಾನೆಯ ಮೇಲೆ ಹಾಕಿದ ನಂತರ ಐದು ತಂಬಿಗೆಗಳನ್ನು ಇಟ್ಟು ಅವುಗಳ ಮೇಲೆ ಕುಪ್ಪಸದ ಕಣ ಹಾಸುತ್ತಾರೆ. ಪೂಜೆಯನ್ನು ವರನ ಕೈಯಿಂದ ಮಾಡಿಸುತ್ತಾರೆ. ಈ ಪೂಜೆಯ ನಂತರ ವರನಿಗೆ ಕಂಕಣವನ್ನು ಕಟ್ಟುತ್ತಾರೆ.

ವಧುವಿನ ಕಡೆ ಮದುವೆಯಲ್ಲಿ ಎಣ್ಣೆ ಹಚ್ಚುವ ಮತ್ತು ಸುರಗಿ ದಾರವನ್ನು ಮುತ್ತೈದೆ ಹೆಸರನ್ನು ತೆಗೆಸುತ್ತಾರೆ. ಅವರು ಆ ಕೆಲಸದಲ್ಲಿ ಮುಂದಾಗುತ್ತಾರೆ. ನಂತರ ಒಳ್ಳಕಲ್ಲು ಪೂಜೆಯನ್ನು ಮಾಡುತ್ತಾರೆ.

ವಧುವಿನ ಸಂಬಂಧಿಕರಲ್ಲಿ ಇಬ್ಬರು ಅಥವಾ ಐದು ಜನ ಅಥವಾ ಹನ್ನೊಂದು ಜನ ಸಂಬಂಧಿಕರು ಬರುತ್ತಾರೆ. ಅವರಲ್ಲಿ ಹೆಂಗಸರು ಮತ್ತು ಗಂಡಸರು ಸೇರಿ ಕರೆದೊಯ್ಯಲು ಬರುತ್ತಾರೆ. ಬಂದ ಸಮಯದಲ್ಲಿ ಊಟ ಬಡಿಸಿದ ನಂತರ ಸೀರೆಯನ್ನು ಉಡಿಸುತ್ತಾರೆ ಹಾಗೆಯೇ ಬಳೆಗಳನ್ನು ಸಹ ಹಾಕಿಸುತ್ತಾರೆ. ಗಂಡಸರಿಗೆ ಶಲ್ಯ ಟೋಪಿಯನ್ನು ವಧುವಿನ ಕಡೆಯವರಿಗೆ ಮಾಡುತ್ತಾರೆ. ಇದು ಎಲ್ಲಾ ಆದ ನಂತರ ವರನಿಗೆ ಕರೆದುಕೊಂಡು ವಧುವಿನ ಊರಿಗೆ ಹೋಗುತ್ತಾರೆ.

ವರನಿಗೆ ಗುಡಿಯಿಂದ ಮನೆಗೆ ಕರೆದೊಯ್ಯುವುದು :

ವರನನ್ನು ವಧುವಿನ ಊರಿಗೆ ಕರೆದುಕೊಂಡು ಬಂದ ನಂತರ ಹನುಮಾನ ಅಥವಾ ಗುಡಿಯಲ್ಲಿ ವರನನ್ನು ಮತ್ತು ವರನ ಸಂಬಂಧಿಕರನ್ನು ಕುಳ್ಳಿಸಿರುತ್ತಾರೆ. ಅಲ್ಲಿಯೇ ಪಾನವನ್ನು ಕೂಡುವ ವ್ಯವಸ್ಥೆಯನ್ನು ವಧುವಿನ ಕಡೆಯವರು ಮಾಡಿರುತ್ತಾರೆ. ನಂತರ ವರನನ್ನು ಕುದುರೆ ಅಥವಾ ಕಾರುಗಳಲ್ಲಿ ಮೆರವಣಿಗೆಯಿಂದ ವಧುವಿನ ಮನೆಗೆ ಕರೆದೊಯ್ಯುತ್ತಾರೆ.

ವಧುವಿನ ಸಂಬಂಧಿಕರು ವರನ ಸಂಬಂಧಿಕರನ್ನು ಗುಡಿಯಲ್ಲಿಯೇ ಮೊದಲು ಎದುರು ಭೇಟಿ ಎಂದು ಅವರನ್ನು ವಧುವಿನ ಕಡೆ ಇದ್ದವರು ವರನ ಕಡೆ ಎಳೆಯುತ್ತಾರೆ. ಅಲ್ಲಿಯೇ ಬಾಯಿಯನ್ನು ಸಿಹಿ ಮಾಡುತ್ತಾರೆ. ನಂತರ ವರನನ್ನು ಕುದುರೆ ಅಥವಾ ಕಾರುಗಳಲ್ಲಿ ಮೆರವಣಿಗೆಯಿಂದ ವಧುವಿನ ಮನೆಗೆ ಕರೆದೊಯ್ಯುತ್ತಾರೆ.

ವರನಿಗೆ ಬಾಗಿಲು ಹಿಡಿಯುವುದು :

ವಧುವಿನ ಮನೆಗೆ ಬಂದಾಗ ವರನಿಗೆ ಬಾಗಿಲನ್ನು ಹಿಡಿಯುತ್ತಾರೆ. ಅಂದರೆ ವಧುವಿನ ತಂಗಿಯರು ಅವರನ್ನು ಕಾಣಿಕೆ ಕೊಟ್ಟ ನಂತರವೇ ಮುಂದಿನ ಕೆಲಸವನ್ನು ಮಾಡಲು ಬಿಡುತ್ತಾರೆ. ವರನನ್ನು ವಧುವಿನ ಸಂಬಂದಿಕರು ಸೋದರ ಅತ್ತೆಯ ವರನ ಕಾಲನ್ನು ತೊಳೆಸು ಪೂಜೆಯನ್ನು ಮಾಡುತ್ತಾರೆ. ನಂತರ ನಿವಾಳಿಯನ್ನು ತೆಗೆಯುತ್ತಾರೆ. ಈ ಪೂಜೆಯು ಪು ಅಥವಾ ವರನ ಪೂಜೆಯು ವರ ಎಂದರೆ ದೇವರು ಎಂಬ ನಂಬಿಕೆ ಇದೆ. ಶಿವನೇ ತನ್ನ ಮನೆಗೆ ಬಂದಿದ್ದಾನೆ ಎಂಬುದಾಗಿದೆ. ವರನು ಬಾಗಿಲಿಗೆ ಬಂದಾಗ ಪೂಜೆಯನ್ನು ಮಾಡಿ ಕರೆದುಕೊಂಡು ಹೋಗುತ್ತಾರೆ.

ನಿವಾಳಿ ಎಂದರೆ ಧಿಟ್ಟಿಯನ್ನು ತೆಗೆಯುವುದು ಇದನ್ನು ಅನ್ನವನ್ನು ತೆಗೆದುಕೊಂಡು ಅದರಲ್ಲಿ ಅರಿಶಿಣ ಪುಡಿಯನ್ನು ಹಾಕಿ ಕಲಿಸಿ ಎರಡು ಮುಟ್ಟಿಗೆಯನ್ನು ಮತ್ತು ಎರಡು ಬಟ್ಟಲುಗಳನ್ನು ಅನ್ನದಲ್ಲಿ ಮಾಡುತ್ತಾರೆ. ಮಾಡಿದ ನಂತರ ಅದರಲ್ಲಿ ಬತ್ತಿಗಳಿಂದ ದೀಪವನ್ನು ಹಚ್ಚುತ್ತಾರೆ. ಬಾಗಿಲಿಗೆ ಆ ದೀಪ ಮತ್ತು ಮುಟ್ಟುಗೆಯನ್ನು ಬಾಗಿಲ ಎರಡು ಕಡೆಯಲ್ಲಿ ಇಡುತ್ತಾರೆ. ಅದು ಬಲಗೈಯಿಂದ ತೆಗೆದು ಇಡುತ್ತಾರೆ. ನಂತರ ವರ ವಧುವಿನ ಮನೆಯೊಳಗೆ ಹೋಗುತ್ತಾನೆ.

ವರನು ವಧುವಿನ ಮನೆಯಲ್ಲಿ ಬಂದ ನಂತರ ಮೊದಲು ದೇವರ ಹತ್ತಿರ ಕರೆದುಕೊಂಡು ಹೋಗುತ್ತಾರೆ. ದೇವರಿಗೆ ನಮಸ್ಕರಿಸಿದ ನಂತರ ದೇವರಿಗೆ ಹಣ ಇಟ್ಟು ಬಸವಣ್ಣನ ಮೂರ್ತಿಯನ್ನು ಕಳ್ಳತನ ಮಾಡುತ್ತಾರೆ. ಏಕೆಂದರೆ ಅವರಿಗೆ ಇಟ್ಟ ಹಣವನ್ನು ಏನಾದರೂ ತೆಗೆದುಕೊಳ್ಳಬೇಕು ಅವರಿಗೆ ಒಳ್ಳೆಯದಾಗುತ್ತದೆ. ಅಥವಾ ವಧುವಿನ ಮನೆಯಿಂದ ಏನಾದರೂ ಕಳ್ಳತನವನ್ನು ಮಾಡಿದರೆ ಲಕ್ಷ್ಮಿಯು ವರನ ಮನೆಗೆ ಬರುತ್ತಾಳೆ ಎಂಬ ನಂಬಿಕೆ ಇದೆ. ಅದರಲ್ಲಿ ರೇವಗಿಯು ತೆಗೆದುಕೊಂಡು ವರನ ಕಡೆಯುವರು ಅಂದರೆ ಎಷ್ಟು ಸಾಮಾನುಗಳನ್ನು ತೆಗೆದುಕೊಳ್ಳುತ್ತಾರೆ ಅಷ್ಟು ಪ್ರಾಬಲ್ಯ ತೋರಿಸಿದಂತಾಗುತ್ತದೆ.

ಈ ಸಮಯದಲ್ಲಿ ವರನ ಸಲುವಾಗಿಯೇ ಬೆಳ್ಳಿಯ ಬಸವನ ಮೂರ್ತಿಯ ವಧುವಿನ ಸಂಬಂಧಿಕರು ಜಗಲಿಯ ಮೇಲೆ ತಂದು ಇಡುತ್ತಾರೆ. ವರನು ತೆಗೆದುಕೊಳ್ಳದಿದ್ದರೆ ಆ ಮೂರ್ತಿಯನ್ನು ವರನಿಗೆ ಕೊಡುತ್ತಾರೆ.

ವರನಿಗೆ ಊಟವನ್ನು ಮಾಡಿಸುತ್ತಾರೆ. ಅಂದರೆ ಬಾಯಿಯನ್ನು ಸಿಹಿಯನ್ನು ಮಾಡಿಸುತ್ತಾರೆ. ವರನು ಮೊದಲ ಬಾರಿಗೆ ಅತ್ತೆ ಮನೆಗೆ ಬಂದಿದ್ದರಿಂದ ಶಾವಿಗೆಯ ಹುಗ್ಗಿ (ಪಾಯಸ) ಅವರಿಗೆ ತಿನ್ನಲು ಕೊಡುತ್ತಾರೆ. ಶಾವಿಗೆಯು ನಂತರ ಬಾನ (ಅನ್ನವನ್ನು) ಊಟಕ್ಕೆ ಕೊಡುತ್ತಾರೆ. ನಂತರ ಹೋಳಿಗೆಯ ಊಟವನ್ನು ಬಡಿಸುತ್ತಾರೆ.

ಮದುವೆಯ ದಿನ ವರನ ಕಡೆಯಾದರೆ ವಧುವಿನ ಸಂಬಂಧಿಕರನ್ನು ವಧುವಿನ ಕಡೆಗೆ ಮದುವೆಯಾದರೆ ವರನ ಸಂಬಂಧಿಕರನ್ನು ವಾದ್ಯಗಳ ಮುಖಾಂತರ ಅವರನ್ನು ಸ್ವಾಗತಿಸುತ್ತಾರೆ. ಮದುವೆಯ ದಿನವು ಮೊದಲೆ ವರ ಅಥವಾ ವಧು ಮದುವೆ ಯಾರ ಕಡೆಯಿದೆ ಆಕಡೆಗೆ ಅವರು ಮದುವೆಯ ಹಿಂದಿನ ದಿನವೆ ಹೋಗಿರುತ್ತಾರೆ. ಬೀಗರನ್ನು ಅವರು ಊರಿನಿಂದ ಬಂದ ನಂತರವೂ ಮಂದಿರದಲ್ಲಿ ಕುಳಿತಿರುತ್ತಾರೆ. ನಂತರ ಮೆರವಣಿಗೆಯ ಮೂಲಕ ಬೀಗರು ವಾದ್ಯ ಮತ್ತು ಆರತಿಯನ್ನು ತೆಗೆದುಕೊಂಡು ಹೊಸ ಸಂಬಂಧಿಕರನ್ನು ಸ್ವಾಗತಿಸುತ್ತಾರೆ. ಒಬ್ಬರನ್ನೊಬ್ಬರು ಮುಂದೆ ಮಾಡಿಕೊಂಡು ಅವರನ್ನು ಸ್ವಾಗತಿಸುತ್ತಾರೆ. ಇದಕ್ಕೆ ಬೀಗರನ್ನು ಎದುರ ಭೇಟಿ ಎಂದು ಕರೆಯುತ್ತಾರೆ.

ಭಾಷುಣಿಕಿ ಕಾರ್ಯಕ್ರಮ :

ಭಾಷುಣಕಿಯು ಯಾವಾಗಲೂ ವಧುವಿನ ಕಡೆಯವರು ಮಾಡುತ್ತಾರೆ. ಈ ಶಾಸ್ತ್ರವು ಬೀದರ ಜಿಲ್ಲೆಯ ಕಡೆ ಹೆಚ್ಚಾಗಿ ಮಾಡುತ್ತಾರೆ. ಎಂದು ಹೇಳಬಹುದು [illegible] ಕರೆದುಕೊಂಡು ಬಂದ ನಂತರ ವಧು ವರರನ್ನು ಕೂಡಿಸಿ ಈ ಶಾಸ್ತ್ರವನ್ನು ಮಾಡುತ್ತಾರೆ.

ಈ ಶಾಸ್ತ್ರವನ್ನು ಮಾಡುವ ವಿಧಾನ :

ಮೊದಲು ಹೊಸ ಜಮಖಾನೆಯು ಹಾಸುತ್ತಾರೆ. ಅದರ ಮೇಲೆ ಸೇರು ಪಾವ ಅಕ್ಕಿ ಕಾಳುಗಳನ್ನು ತೆಗೆದುಕೊಂಡು ಆ ಜಮಖಾನೆಯ ಮೇಲೆ ಬರೆಯುತ್ತಾರೆ. ಬರೆದ ನಂತರ ಹೆಣ್ಣು ಎಡಕ್ಕೆ ಗಂಡು ಬಲಕ್ಕೆ ಕೂಡಿಸುತ್ತಾರೆ. ನಂತರ ಪೂಜೆಯು ಮಾಡಿಸುತ್ತಾರೆ. ಇದೇ ಭಾಷುಣಕಿ ಶಾಸ್ತ್ರ. ನಂತರ ವಧುವಿನ ಸಂಬಂಧಿಕರು ಊಟವನ್ನು ಮಾಡಿಸುತ್ತಾರೆ. ಮದುವೆ ಶಾಸ್ತ್ರ ಇದ್ದರೆ ಸರಿ ಇಲ್ಲದಿದ್ದರೆ ವಧುವಿನ ಕಡೆ ಅಲ್ಲೇ ಉಳಿದುಕೊಳ್ಳುತ್ತಾರೆ.

ಭಾಷುಣಕಿ ಹಾಡು

ಏನಂತ ತಿಳಿಯರಿ ಬೇಕರಿ ಕನ್ಯಾದಾನ ಕೊಡು ಅಂತ ಕೇಳಬ್ಯಾಕ
ನಲವತ್ತು ತೊಲಿ ಬಂಗಾರ ಹಾಕಬೇಕರಿ
ಹುಡಗಿಗಿ ನಿಶ್ಚಯವನ್ನು ಮಾಡಿ ಹೋಗರಿ
ಹುಡಗಿ ಉಡಿಯ ತುಂಬಿ ಹೋಳಿಗಿ
ತುಪ್ಪ ಊಟಕ್ಕೆ ಮಾಡ್ರಿ ಕುಂತ
ಜನರಿಗೆ ಮನಸ್ಸಿಗಿ ಬಂದರೆ ಒಂದೆ
ಸಾಕರಿ ॥ ಏನಂತ

ದಂಡಿ ಬಳಿ ಹಾಕಬೇಕರಿ ಅದು ನಮ್ಮಗ
ಅದು ನಮ್ಮಗ ಗಾಡಿ ವರ್ಣ ಇದ್ದರ ಸಾಕರಿ
ಕಾಡಿ ಬೇಡಿ ನೋಡತೆವರಿ
ಸಾಟಿ ಹರಕುಂತ ಮಾಡತೇವರಿ ರೀತಿಲಿಂದ
ನಡೆಸುತ್ತೇವರಿ ಖುಣಂದ್ರ ಗಂಟು ಬಿಡುಸುತೇವರಿ
ಅಕ್ಕಿ ತೆಂಗಿನ ಸೀರಿ ಬೇಕ್ರಿ ನಾಲ್ಕು ಮಂದಿ
ಬಂದು ಬಳಗ ಬಂದರೆ ಸಾಕರಿ
ನಾಲ್ಕು ಮಂದಿ ಲಾಲುಸ್ರಿ ಹೋಳಿಗಿ ತುಪ್ಪ

ಪಾಯಸ ಕಂಚಿನ ತಾಂಬ್ರ ಕೊಡ
ಮುನ್ನೂರ ರೂಪಾಯಿ ಖರ್ಚುಗಿ ಇಡ್ತು
ಪರಮಠ ದೇವರು ಇವಬರು ನಾಲ್ವರು
ಶ್ಯಾಯರ ನ್ಯಾಯ ಮಾಡುವರು ಶ್ಯಾಹರ
ನ್ಯಾಯ ಮಾಡುತಿರ್ರಿ ಖಾತ್ರಿ ಮಾತೊಂದು
ಆಡುತ್ತಯೀರಿ ಹಿರಿಯರು ಕಿರಿಯರು ಕೇಳುತೇವರಿ
ಸಾರಿಬಂಉ ಕುಡುತೇವರ್ರಿ

ಹಾಡಿದವರು ಗುಂಡಮ್ಮಾ ರಾಜೇಶ್ವರ

ನೂಲು ಸುತ್ತುವುದು ಅಥವಾ (ಸುರಗಿ ನೀರು ಎರೆಯುವ ಶಾಸ್ತ್ರ)

ಈ ಶಾಸ್ತ್ರವು ಎರಡು ಸಲ ಮದುಮಕ್ಕಳನ್ನು ಸ್ನಾನ ಮಾಡಿಸುವುದಾಗಿ ಮದುವೆಯ ಹಿಂದಿನ ದಿನ ರಾತ್ರಿಯ ಸಮಯದಲ್ಲಿ ಭಾಷಣಕಿ ಕಾರ್ಯಕ್ರಮದ ನಂತರ ಸುರಗಿ ನೀರು ಎರೆಯುವ ಶಾಸ್ತ್ರವನ್ನು ಮಾಡುತ್ತಾರೆ. ಇದಕ್ಕೆ ಐದು ತಂಬಿಗೆಗಳು ಒಂದು ದಾರದ ಉಂಡಿ ಬೇಕಾಗುತ್ತದೆ. ಲಗ್ನ ಪತ್ರಿಕೆಯನ್ನು ತೆಗೆಸುವ ಸಮಯದಲ್ಲಿ ಯಾರ ಹೆಸರು ಬರುತ್ತದೆ. ಅವರೇ ಈ ನೂಲು ಸುತ್ತುವ ಕೆಲಸವನ್ನು ಮಾಡುತ್ತಾರೆ. ಅದಕ್ಕೆ ಐದು ತಂಬಿಗೆಗಳನ್ನು ಅವರಲ್ಲಿ ಒಂದು ತಂಬಿಗೆಯಲ್ಲಿ ಧಾರವನ್ನು ಹಾಕಿ ಆ ನಾಲ್ಕು ತಂಬಿಗೆಗಳಿಗೆ ಧಾರವನ್ನು ಸುತ್ತುತ್ತಾರೆ. ನಟ್ಟನಡುವೆ ಮಣೆಗಳನ್ನು ಇಟ್ಟು ಮಧುಮಕ್ಕಳನ್ನು. ಎಣ್ಣೆಯನ್ನು ಹಚ್ಚುತ್ತಾರೆ ಆಮೇಲೆ ಅರಿಶಿಣವನ್ನು ಹಚ್ಚುತ್ತಾರೆ ಆನಂತರ ನೀರನ್ನು ಎರೆಯುತ್ತಾರೆ. ನಾಲ್ಕು ತಂಬಿಗೆಗಳಿಗೆ ಸುತ್ತಿದ ಧಾರವನ್ನು ವಧುವಿನ ಕೈಗೆ ಕಂಕಣ ಮತ್ತು ವರನ ಕೈಗೆ ಕಂಕಣವನ್ನು ಕಟ್ಟುತ್ತಾರೆ.

ಎಣ್ಣೆ ಹಚ್ಚುವ ಪದ ವರನಿಗೆ

ಶಿವ ಶಿವ ಅನ್ನುವ ತಲೆ ಶಿವನ ಕೊಂಡಾಡು
ತಲೆ ಶಿವ ಶರಣರು ಬರುವು ತಲೆ ನೀವು
ಹಚ್ಚಿರಿ ನೈಯಣಿ

ಸುರಗಿಯ ಸುತ್ತಿರಿ ಸುಭದಲ್ಲಿ ಶುಭ
ಧಾರದಲ್ಲಿ ಈ ದೇಶ ಮಂಟಪದಲ್ಲಿ ನೀವು
ಹಚ್ಚಿರಿ ನೈಯಣಿ

ನವರತ್ನದ ಮಣಿಹಾಕಿ ನಡು ಮಧ್ಯದಲ್ಲಿ
ಕೂಡಿಸಿ ಹಾವಳಿಸಿ ಶ್ರೀ ಜನಳೆರಿಗೆ
ನೀವು ಹಚ್ಚಿ ನೈಯಣಿ

ಕಂಚಿನ ಬಟ್ಟಲಾಗ ಕರದಲ್ಲಿ ನಿಪ್ಪಿಲಿ ಎಣ್ಣೆ

ಹಚ್ಚುತಲಿ ಅಷ್ಟು ಪ್ರಾಣ ಭವಲಿಂಗನಿಗೆ
ನೀವು ಹಚ್ಚಿರಿ ನೈಯಣ್ಣೆ

ತಾರಕ್ಕ ತನ್ನಿರಿ ಸಖಿಯರು ಬೇರೆಸಿದರು
ಮುನಿಯರು ಬೆರಸಿವದು ಮಕ್ರ ಮಂಜಾನಕ್ಕೆ
ನೈಯಣೆ

ಸುತ್ತಿದ ಕಂಕಣ ಕರದಲ್ಲಿ ಮತ್ತು
ಕಟ್ಟಲಿಬೇಡ ಕರತು ಹಾರ ಕೂಡಾ
ಚನ್ನನಿಗೇ ನೀವು ಹಚ್ಚಿರಿ ನೈಯಣಿ

ಸೋಬಾನೆ ಜಾವನ್ನು ಸುತ್ತರಿ ಈ ಹರನಿಗೆ
ಮದುಮಗನ್ನೆಂದು ಪಾಡಿರಿ ನೀವು
ಮೊದಲಿಗೆ ನೈಯಣ್ಣಿ

ಎಣ್ಣೆ ಹಚ್ಚುವ ಪದ ವಧುವಿಗೆ

ಬರೆ ನೀಲಾವರಣಿ ಪಗಡಿ ಮಾತಿನ ರಾಣಿ
ಸೋಗ್ಯಾ ನಟಕ ನೀನು ಬಮದ ಗಮಣಿ
ಕಾರಣ ಮೊದಲಿರುವ ಕರದ ಇಳ್ಯಾವ ಸಾರಿ
ಎಣ್ಣಿ ಹಚ್ಚ ಬನ್ನಿ
ಐಯ್ಯ ಮಗಳ ಜೊತೆಗೆ ಎಣ್ಣಿ ಹಚ್ಚ ಬನ್ನಿರ

ಹಸ್ತರೇಣಿ ಸ್ತಿತಿರಣಿ ನಾಗಿರಣಿ ಸಂಪಿರಣಿ
ಎತ್ತಿಮರಪವ್ವ ಕುಸುಮದೇವಿ ರಂಗಮಂಟಪದೊಳು
ರಮಣಿ ಎಲ್ಲರೂ ಎಣ್ಣಿ ಹಚ್ಚ ಬನ್ನಿರೆ
ಐಯ್ಯರ ಮಗಳ ಜೊತೆ ಎಣ್ಣಿ ಹಚ್ಚ ಬನ್ನಿರಿ

ಚುಕ್ಕಿಯ ಸೀರಿ ಉಟ್ಟು ಚಿಲಕದ ಬಟ್ಟೆಯ
ಬಂಗಾರದಲ್ಲಿ ಕೋಪನಿಟ್ಟೆ ಬಂಗಾರದಲ್ಲಿ ಕೋಪನಿಟ್ಟವರೆಲ್ಲ
ಎಣ್ಣೆ ಹಚ್ಚ ಬನ್ನಿರೆ
ಐಯ್ಯರ ಮಗಳ ಜೊತೆಗೆ ಎಣ್ಣಿ ಹಚ್ಚ ಬನ್ನಿರಿ

ಗಂಜಿಯ ಸಿರೆ ಉಟ್ಟು ಗಮಧಧ ಬಟ್ಟಲು ಮುಡಿ
ಸಣ್ಣ ಮುತ್ತಿನ ನತ್ತನಿಟ್ಟುವರೆಲ್ಲ ಎನ್ಲಿ ಹ್ಞ ಬನ್ನಿರೆ
ಐಯ್ಯರ ಮಗಳ ಜೊತೆ ಎಣ್ಣೆ ಹಚ್ಚ ಬನ್ನಿರೆ

ಕಾಲುಕಾಲುಂಗರನಿಟ್ಟು ನಣವ ಸೀರೆಯನುಟ್ಟು
ಬಂಗಾರ ವಾಲಿ ವಂಕಿನಿಟ್ರೆ ಬಂಗಾರವಾಲಿ ವಂಕಿಯು
ನಿಟ್ಟವರೆಲ್ಲ ಎಣ್ಣೆ ಹಚ್ರ ಬನ್ನಿರೆ
ಐಯ್ಯರ ಮಗಳ ಜೊತೆ ಹಚ್ಚ ಬನ್ನಿರೆ

ಹಾಡಿದವರು : ಮಾಣೆಮ್ಮಾ

ಮದುವೆಯ ದಿನ :

ಸುರಗಿ ನೀರು ಹಾಕುವುದು :

ಈ ಶಾಸ್ತ್ರವು ಎರಡು ಸಲ ಮದುಮಕ್ಕಳನ್ನು ಸ್ನಾನ ಮಾಡಿಸುವುದಾಗಿ ಮದುವೆಯ ಹಿಂದಿನ ದಿನ ರಾತ್ರಿಯ ಸಮಯದಲ್ಲಿ ಭಾಷುಣಕಿ ಕಾರ್ಯಕ್ರಮದ ನಂತರ ಸುರಗಿ ನೀರು ಎರೆಯುವ ಶಾಸ್ತ್ರವನ್ನು ಮಾಡುತ್ತಾರೆ. ಇದಕ್ಕೆ ಐದು ತಂಬಿಗೆಗಳು ಒಂದು ದಾರದ ಉಂಡಿ ಬೇಕಾಗುತ್ತದೆ. ಲಗ್ನ ಪತ್ರಿಕೆಯನ್ನು ತೆಗೆಸುವ ಸಮಯದಲ್ಲಿ ಯಾರ ಹೆಸರು ಬರುತ್ತದೆ. ಅವರೇ ಈ ನೂಲು ಸುತ್ತುವ ಕೆಲಸವನ್ನು ಮಾಡುತ್ತಾರೆ. ಅದಕ್ಕೆ ಐದು ತಂಬಿಗೆಗಳನ್ನು ಅದರಲ್ಲಿ ಒಂದು ತಂಬಿಗೆಯಲ್ಲಿ ಧಾರವನ್ನು ಹಾಕಿ ಆ ಐದು ತಂಬಿಗೆಗಳಿಗೆ ಧಾರವನ್ನು ಸುತ್ತುತ್ತಾರೆ. ನಟ್ಟನಡುವೆ ಮಣೆಗಳನ್ನು ಇಟ್ಟು ಮಧುಮಕ್ಕಳನ್ನು ನೀರನ್ನು ಎರೆಯುತ್ತಾರೆ. ಎಣ್ಣೆಯನ್ನು ಹಚ್ಚುತ್ತಾರೆ ಆಮೇಲೆ ಅರಿಶಿಣವನ್ನು ಹಚ್ಚುತ್ತಾರೆ ಆನಂತರ ನೀರನ್ನು ಎರೆಯುತ್ತಾರೆ. ನಾಲ್ಕು ತಂಬಿಗೆಗಳಿಗೆ ಸುತ್ತಿದ ಧಾರವನ್ನು ವಧುವಿನ ಕೈಗೆ ಕಂಕಣ ಮತ್ತು ವರನ ಕೈಗೆ ಕಂಕಣವನ್ನು ಕಟ್ಟುತ್ತಾರೆ.

ಮಧುಮಕ್ಕಳನ್ನು ಸ್ನಾನ ಮಾಡಿಸುವ ಕಾರ್ಯಕ್ರಮ ಮನೆಯಲ್ಲಿ ಮದುವೆಯ ಕಾರ್ಯಕ್ರಮ ಪ್ರಾರಂಭವಾಗುವುದು ಮದುವೆಯ ದಿನದ ಮೊದಲನೆಯ ಆಚರಣೆಯಾಗಿದೆ. ದೇವರ ಕರ್‍ಯವನ್ನು ತೆಗೆಯುವುದಕ್ಕಿಂತ ಮೊದಲು ಮಧುಮಕ್ಕಳನ್ನು ಸ್ನಾನವನ್ನು ಮಾಡಿಸುತ್ತಾರೆ. ಈ ಸ್ನಾನ ಮಾಡಿಸುವ ಪ್ರಸಂಗವನ್ನು ಸುರಗಿಯ ನೀರು ಹಾಕುವುದು ಎನ್ನುತ್ತಾರೆ.

ನೂಲು ಸುತ್ತುವುದು (ಸುರಗಿ ಎರೆಯುವುದು) ಸಿದ್ಧತೆ ಮೊದಲು ಐದು ಕಟ್ಟಿಗೆಗಳನ್ನು ಹಂದರವನ್ನು ಸಿದ್ದ ಮಾಡಿಕೊಂಡಿರುತ್ತಾರೆ. ಮೊದಲು ಜಗಲಿಯ ಶೃಂಗಾರ ಮತ್ತು

ಪೂಜೆಯನ್ನು ಮಾಡುತ್ತಾರೆ. ಮನೆಯ ಕಟ್ಟೆಗೆ ಜಗಲಿ ಎಂದು ಕರೆಯುತ್ತಾರೆ. ಅಲ್ಲಿಯೇ ಕಟ್ಟೆಯ ಗೋಡೆಗೆ ಸೂರ್ಯಚಂದ್ರ, ಶಿವಲಿಂಗ, ಗಣಪತಿ, ಸ್ವಸ್ತಿಕ ಚಿಹ್ನೆ ಇತ್ಯಾದಿ ಚಿತ್ರಗಳನ್ನು ಬರೆದು ಬೇರ ಮಣ್ಣನ್ನು ತಂದು ಕಟ್ಟೆ ಕಟ್ಟಿ ಅರ್ಧ ಭಾಗಕ್ಕೆ ಆ ಮಣ್ಣು ಹಾಕಿ ಎಡಬಲಕ್ಕೆ ಕಂಬಗಳನ್ನು ನೆಟ್ಟು ಅದಕ್ಕೆ ತಳಿರು–ತೋರಣ ಕಟ್ಟಿ ಶೃಂಗರಿಸುವರು. ಈ ಕಟ್ಟೆಗೆ ಮದುವೆಯ ಹಾಸಿ ಜಗಲಿ ಅಥವಾ ಹಸೆ ಜಲಿ ಎಂದು ಕರೆಯುತ್ತಾರೆ.

ಇದರ ನಂತರ ಐದು ತಂಬಿಗೆ ಇರಿಸಿ, ಅವುಗಳ ಸುತ್ತು ಮುತ್ತು ಮೇರೆಯುತ್ತೆ ನೂಲು (ಧಾರ) ಸುತ್ತಿ ನಟ್ಟ ನಡುವೆ ಮಣೆಯಿಟ್ಟು ಮದುಮಕ್ಕಳನ್ನು ಕೂಡಿಸುತ್ತಾರೆ. ಕೂಡಿಸುವುದುಕ್ಕಿಂತ ಮುಂಚೆ ಮಣಿಗಳ ಮೇಲೆ ಪಟ್ಟಿ ಮಕ್ಕಳನ್ನು ಮಣಿಗಳ ಮೇಲೆ ಕೂಡಿಸುತ್ತಾರೆ. ಮದುಮಕ್ಕಳು ಬಂದ ನಂತರ ಮಕ್ಕಳಿಗೆ ಎಬ್ಬಿಸುತ್ತಾರೆ.

ಮದುಮಕ್ಕಳನ್ನು ಬಲಕ್ಕೆ ಮಣಿಯ ಮೇಲೆ ಮದುಮಗ ಎಡ ಮಣಿಯ ಮೇಲೆ ಮಧುಮಗಳನ್ನು ಕೂಡಿಸುತ್ತಾರೆ. ನೂಲು ಸುತ್ತುವ (ಸುರಿಗೆ ಎರೆಯುವ ಸ್ಥಳಕ್ಕೆ ಬಂದ ಸಮಯದಲ್ಲಿ ಮದುಮಕ್ಕಳು ಎಲೆ–ಅಡಿಕೆಯನ್ನು ಇಟ್ಟಿ ಅದಕ್ಕೆ ನಮಸ್ಕರಿಸಿ ಮಣಿಗಳ ಮೇಲೆ ಕೂಡಬೇಕು. ಮತ್ತು ನೂಲುಗಳನ್ನು ದಾಟುವ ಸಮಯದಲ್ಲಿ ಮದು ಮಕ್ಕಳ ಬಟ್ಟೆಯು ಅದಕ್ಕೆ ಮುಟ್ಟಬಾರದು ಹಾಗೆ ನೂಲನ್ನು ದಾಟಿ ಮದುಮಕ್ಕಳು ಮಣಿಗಳ ಮೇಲೆ ಕೂಡಬೇಕು.

ಮದುಮಕ್ಕಳು ಕುಂತನಂತರ ಮದುಮಗನ ತಾಯಿ ಮಧುಮಗನ ಹಿಂದೆ ನಿಲ್ಲಬೇಕು ಮತ್ತು ಮದು ಮಗಳ ತಾಯಿ ಮದುಮಗಳ ಹಿಂದೆ ನಿಲ್ಲಬೇಕು ಮದುಮಕ್ಕಳ ಜೊತೆಗೆ ಅವರಿಗೂ ಸಹ ನೀರನ್ನು ಹಾಕುತ್ತಾರೆ.

ಮದುಮಕ್ಕಳನ್ನು ಅರಿಷಿಣ ಮತ್ತು ಎಣ್ಣೆ ಹಚ್ಚುವುದಕ್ಕಿಂತ ಮುಂಚೆ ದೇವರಿಗೆ ಅಂದರೆ ಮನೆಯಲ್ಲಿಯ ಜಗಲಿ ಅಥವಾ ದೇವರ ಫೋಟೊ ಅಥವಾ ದೇವರ ಮೂರ್ತಿಗಳಿಗೆ ಎಣ್ಣೆ ಹಚ್ಚಿದ ನಂತರ ಮದು ಮಕ್ಕಳಿಗೆ ಎಣ್ಣೆ ಹಚ್ಚುತ್ತಾರೆ. ಮೊದಲು ಅರಿಷಿನವನ್ನು ಹಚ್ಚುತ್ತಿದ್ದರು. ಏಕೆಂದರೆ ಅರಿಷಿಣವು ಹಚ್ಚುವುದರಿಂದ ಮುಖವು ಕಾಂತಿಯುತವಾಗುತ್ತದೆ ಎಂದು ಅವರ ಹಿರಿಯರ ವಿಚಾರವಾಗಿತ್ತು.

ಈ ಸಮಯದಲಿ ಅರಿಷಿಣವು ಅದು ಹಚ್ಚುವ ಪದ್ಧತಿಯು ಕಡಿಮೆಯಾಗಿದೆ ನಿಯಮದ ಸಲುವಾಗಿ ಸ್ವಲ್ಪ ಹಚ್ಚುತ್ತಾರೆ. ಐದು ಜನ ಮುತ್ತೈದೆಯರು ದೇವರಿಗೆ ಎಣ್ಣೆ ಹಚ್ಚಿದ ನಂತರ ಮಧುಮಕ್ಕಳಿಗೆ ಹಚ್ಚುತ್ತಾರೆ. ಹಚ್ಚುವ ಸಮಯದಲ್ಲಿ ಹಾಡನ್ನು ಹಾಡುತ್ತಾರೆ.

ಎಣ್ಣೆ ಹಚ್ಚಿದ ನಂತರ ಮದುಮಕ್ಕಳಿಗೆ ಮತ್ತು ಅವರ ತಾಯಿಯರಿಗೂ ಸಹ ನೀರನ್ನು ಹಾಕುತ್ತಾರೆ ತಾಯಿಂದಿರಿಗೆ ಕಾಲುಗಲಿಗೆ ಹಾಕುತ್ತಾರೆ. ಮದು ಮಕ್ಕಳಿಗೆ ಸ್ನಾನವನ್ನು ಮಾಡಿಸುತ್ತಾರೆ. ಸ್ನಾನವನ್ನು ಜಳಕ ಮಾಡಿದರಿಂದ ಅವರಿಗೂ ಕಾಲುಗಳಿಗೆ ಮತ್ತು ಮುಖ ತೊಳೆದುಕೊಳ್ಳುತ್ತಿದ್ದಾರೆ. ನಂತರ ಅವರ ಹಿಂದೆ ನಿಂತ ಅವರ ತಾಯಿಯರಿಗೆ ಬಟ್ಟೆಯನ್ನು ಮಾಡಿಕೊಳ್ಳುತ್ತಾರೆ.

ಈ ಮೊದಲು ನೂಲು ಸುತ್ತದಂತಹ ಧಾರವನ್ನು ಮದುಮಕ್ಕಳ ಹಿಂದೆ ನಿಂತವರಿಗೆ ಕಂಕಣವನ್ನು ಕಟ್ಟುತ್ತಾರೆ. ಮದುಮಕ್ಕಳಿಗೆ ಮದುವೆ ಹಿಂದಿನ ದಿನ ನಡೆದ ಸಮಯದಲ್ಲಿ ಕಟ್ಟುತ್ತಾರೆ. ಹಿಂದೆ ನಿಂತವರಿಗೆ ಮದುಮಕ್ಕಳ ಹಿಂದೆ ನಿಂತವರಿಗೆ ಕಂಕಣಕಟ್ಟುತ್ತಾರೆ. ನಂತರ ಮದುಮಕ್ಕಳಿಗೆ ಬಟ್ಟೆಯನ್ನು ಕೊಡುತ್ತಾರೆ. ಬಟ್ಟೆಯನ್ನು ಧರಿಸಿಬಂದನಂತರ ಮದುಮಗಳಿಗೆ ೫ ಜನ ಮುತ್ತೈದೆಯರು ಉಡಿಯನ್ನು ತುಂಬುತ್ತಾರೆ.

ಅಂದರೆ ಗಂಡಿನ ಕಡೆಯವವರು ೫ ಸೇರು ಉಡಿಯಕ್ಕಿಯನ್ನು ತಂದಿರುತ್ತಾರೆ. ಮದುಮಗಳಿಗೆ ೫ ಜನ ಮುತ್ತೈದೆಯರು ಉಡಿಯನ್ನು ತುಂಬಿದ ನಂತರ ಮದುಮಕ್ಕಳು ದೇವರ ಜಗಲಿಗೆ ಹೋಗಿ ನಮಸ್ಕರಿಸುತ್ತಾರೆ. ನಂತರ ದೇವರ ಕಾರ್ಯವನ್ನು ಮಾಡಲಿಕ್ಕೆ ಮದುಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ.

ಎಣ್ಣೆ ಹಚ್ಚೋ ಹಾಡು (ಮದುಮಗನಿಗೆ)

ಸುರಗಿಯ ಸುತ್ತಳಿಗೆ ಸಿರಿ ಬಾಗಿಲಿಗಿ ಬಿಸಲಬಂದಾ
ನಾಲ್ಕನೇ ತ್ವಟದ ಎಲಿತುಂಬ ಜಗದೀಶ
ಭಾಸಿಂಗ ಕಟ್ಟ ಬಲಬಂದಾ ಹರಹರ ನಮಶಿವಗ ನ್ಯೆಯಣ್ಣಿ

ಹಿಂದತೋಡಿದ ಬಾವಿ ಮುಂದ ನೀರ ಉಂಡಾವ
ಹಿಂದೇಳ ಕೊಡ ನಡದಾವ ಹರಹರ ನಮಶಿವಗ ನ್ಯೆಯೆಣ್ಣಿ

ಹಿಂದೆ ಏಳ ಕೊಡ ನಡದಾವ ನಾಗಮ್ಮ
ನಡಿ ನಿನ್ನ ಮಗನ ಜಳಕಕ್ಕ ಹರಹರ ನಮ ಶಿವಗ ನ್ಯೆಯೆನ್ನಿ

ನೀರಿಲ್ಲದಂಗಳ ನೀರ್ಯಾಕ ಆಗ್ಯಾವ
ಊರಿಗೆ ದೊಡ್ಡವರ ಮಗಮಿಂದ ಹರಹರ ನಮ ಶಿವನ ನ್ಯೆಯೆಣ್ಣಿ

ಊರಿಗೆ ದೊಡ್ಡವರ ಮಗಮಿಂದ ಜಗದೀಶ
ಭಾಸಿಂಗ ಕಟ್ಟಾ ಬಲಬಂದಾ ಹರಹರ ನಮ ಶಿವಗ ನೈಯೆಣ್ಣೆ

ಕೆಸರಿಲ್ಲದಂಗಳ ಕೆಸರ್ಯಾಕ ಆಗ್ಯಾವ
ಹೆಸರಿಗೆ ದೊಡ್ಡವರ ಮಗಮಿಂಡ ಹರಹರ ನಮ ಶಿವ ನೈಯೆಣ್ಣಿ

ಹೆಸರಿಗೆ ದೊಡ್ಡವರ ಮಗಮಿಂಡ ಜಗದೀಶ
ಭಾಸಿಂಗ ಕಟ್ಟಾ ಬಲಬಂದಾ ಹರಹರ ನಮ ಶಿವಗ ನೈಯೆಣ್ಣಿ
ಎಣ್ಣಿ ಹಚ್ಚೋ ಹಾಡು

ಎಣ್ಣಿ ಹಚ್ಚೋ ಹಾಡು (ಮದುಮಗಳಿಗೆ)

ಕಂಚಿನ ಬಟ್ಲಾಗ ಮಿಂಚೆಣ್ಣಿ ತಕ್ಕೊಂಡು
ಕೆಂಚರೊಂದ್ಯೆವರ. ನೆರದ ಮುತ್ತೈದೇರೆ ಎಣ್ಣಿ ಹಚ್ಚ ಬನ್ನಿರೇ
ಅಯ್ಯಪ್ಪ ಶೆಟ್ಟರ ಮಗಳ ಅರ್ಚನಾಗ ಎಣ್ಣಿ ಹಚ್ಚುವ ಬನ್ನಿರೇ

ಅಳಸರ ಬಳಸರ ಮ್ಯಾಲ ಮುತ್ತಿನ ಸರ
ತಾಯಿ ತನ್ನವಳೇ ತಾಯಿ ತನ್ನವಳೇ
ತಾಳಿ ಕಟ್ಟಿದವರೇ ಎಣ್ಣಿ ಹಚ್ಚ ಬನ್ನಿರೇ
ಅಯ್ಯಪ್ಪ ಶೆಟ್ಟರ ಮಗಳ ಮಹಾದೇವಿಗೊ ಹಚ್ಚ ಬನ್ನಿರೇ

ಹಾಡಿದವರು ಹೀರವ್ವ

ದೇವರ ಕರಿ ತೆಗೆಯುವುದು

ಸಾಂಪ್ರದಾಯಿಕವಾಗಿ ಶ್ರೀ ವೀರಭದ್ರ ದೇವರನ್ನು ಪೂಜಿಸುವವರು ಮದುವೆಯ ಮನೆಯಲ್ಲಿ ಈ ಕಾರ್ಯಕ್ರಮವು ಮೊದಲಿಗೆ ಗುಗ್ಗುಳು ದೇವರ ಕಾರ್ಯ ಅಥವಾ ದೇವರ ಕರಿ ಎಂದು ಸಹ ಕರೆಯುತ್ತಾರೆ. ಮೊದಲು ದೇವರ ಪೂಜೆಯನ್ನು ಮಾಡುವ ದೇವರ ಪೂಜೆ ಕಾರ್ಯಕ್ರಮವನ್ನು ದೇವರ ಕರಿಯಾಗಿ ಬಳಕೆಗೆ ಬಂತು.

ಈ ಪೂಜೆಯನ್ನು ಮನೆತನದ ಅಭಿವೃದ್ಧಿಯ ಸಲುವಾಗಿ ಈ

ಕಾರ್ಯವನ್ನು ಮಾಡುತ್ತಾರೆ. ವರನ ಕಡೆ ಮದುವೆ ಇದ್ದಾಗ ಅವನು ಮನೆಯ ಹಿರಿಯ ಗಂಡು ಮಗನಾಗಿದರೆ ಆ ಸಮಯದಲಿ ಮನೆಯ ಮುಂದೆ ಮುಮುಷ ಇದ್ದರೆ ಈ ಕಾರ್ಯಕ್ರಮವು ಮರೆಯದೆ ಮಾಡುತ್ತಾರೆ. ಹಿಂದಿನ ಹಿರಿಯರು ಮಾಡುವ ಸಂಪ್ರದಾಯವಾಗಿದೆ. ಈ ಪೂಜೆಯನ್ನು ಮಾಡುವುದು ಮನೆತನದ ಅಭಿವೃದ್ಧಿಗೆ ಮತ್ತು ಮಕ್ಕಳಿಗೆ ಒಳ್ಳೆಯದಾಗಲಿ ಮತ್ತು ದೇವರ ಕರುಣೆಯು ನಮ್ಮ ಮೇಲೆ ಇರಲಿ ಎನ್ನುವ ಉದ್ದೇಶವನ್ನಿಟ್ಟುಕೊಂಡು ಈ ಪೂಜೆಯನ್ನು ಮಾಡುತ್ತಾರೆ.

ಈ ಪೂಜೆಯನ್ನು ಮದುವೆಯ ದಿವಸದ ಮೊದಲು ವಧುವರರಿಗೆ ಎಣ್ಣೆಯನ್ನು ಹಚ್ಚಿದ ನಂತರ ದೇವರ ಕರಿ ಹೋಗಲು ಸಿದ್ಧರಾಗುತ್ತಾರೆ. ವರನ ಹಿಂದೆ ವರನ ತಾಯಿ ವಧುವಿನ ಹಿಂದೆ ವಧುವಿನ ತಾಯಿ ನಡೆದು ದೇವರಿಗೆ ಹೋಗುತ್ತಾರೆ.

ಐರಾಣಿ ತೆಗೆಯುವುದು

ಗುಗ್ಗುಳ ಕೊಡಕ್ಕೆ ಒಂದು ಮುಟ್ಟ ಉದ್ದದ ಹಾಗು ಮೂರು ಇಂಚು ದಪ್ಪ ಉಳ್ಳ ಎರಡು ಕಟ್ಟಿಗೆಗಳನ್ನು ತರಬೇಕು ಕಟ್ಟಿಗೆಗಳು ಗಂಡವು ಇಲ್ಲವೇ ಇಂಗುಳದವು ಇರಬೇಕು. ಗುಗ್ಗಳ ಮಾಡುವುದಕ್ಕಿಂತ ಒಂದೆರಡು ದಿನಗಳ ಮೊದಲು ಕಟ್ಟಿಗೆಗಳನ್ನು ತರಬೇಕು. ಕಟ್ಟಿಗೆಗಳು ಹಸಿ ಇರಬೇಕು ಗುಗ್ಗಳ ದಿನಕ್ಕಿಂತ ಒಂದು ದಿನ ಮೊದಲೇ ಬಡಿಗಾರರಿಗೆ ಉಳುಪಿ ಕೊಟ್ಟು ಕಟ್ಟಿಗೆಯನ್ನು ತಯ್ಯಾರು ಮಾಡುವುದಕ್ಕೆ ಕೊಡಬೇಕು.

ಬೇಕಾಗುವ ಸಾಮಾನು :

೫೦೦ಗ್ರಾಂ ಕಡ್ಲಿ ಬ್ಯಾಳಿ, ೫೦೦ಗಾಂ ಅಕ್ಕಿ, ೫೦೦ ಗ್ರಾಂ ಗೋಧಿ ಹಿಟ್ಟು, ೫೦೦ ಗ್ರಾಂ ಬೆಲ್ಲ, ೧೦೦ ಗ್ರಾಂ ಹುಣಸೆ ಹಣ್ಣು ಎರಡು ಇಳ್ಳ್ಯಾದ ಎಲಿ ಅದರಲ್ಲಿ ಒಂದು ಅಡಿಕೆ ಅರಿಶಿಣ ಬೊಟ್ಟು ಮತ್ತು ದಕ್ಷಿಣೆಯನ್ನು ಈ ಪ್ರಕಾರವಾಗಿ ಕೊಡುವುದಕ್ಕೆ ಉಲುಪಿ ಎನ್ನುತ್ತಾರೆ.

ಗುಗ್ಗುಳ ಕೊಡ ಕಟ್ಟಿಗೆಯನ್ನು ತರಲು ಬಡಿಗೆಯ ಮನೆಗೆ ದಕ್ಷಿಣೆಯನ್ನು ಕೊಡಬೇಕು. ಗುಗ್ಗಳ ಕೊಡವನ್ನು ತಯ್ಯಾರಿಸಲು ಕುಂಬಾರನಿಗೆ ಮುಂಚಿತವಾಗಿ ಹೇಳಿರಬೇಕು.

ಗುಗ್ಗಳ ಕೊಡಗಳನ್ನು ತಯಾರಿಸಲು ಕುಂಬಾರನಿಗೆ ಮುಂಚಿತವಾಗಿ ಹೇಳಿರಬೇಕು. ಗುಗ್ಗಳ ಸಮಾರಂಭದ ದಿವಸ [illegible] ಸಾಯಂಕಾಲ ಗುಗ್ಗುಳ ಕೊಡಗಳನ್ನು ತೆಗೆದುಕೊಂಡು ಸಮೀಪದಲ್ಲಿರುವ ದೇವಸ್ಥಾನದಲ್ಲಾಗಲೀ ಅಥವಾ ಮಠದಲ್ಲಾಗಲೀ ಬರಲು ತಿಳಿಸಿರಬೇಕು. ಒಟ್ಟು ಮೂರು ಕೊಡಗಳು ೨ ಮಗಿ, ೧೧ ಮುಚ್ಚಳ (ಪರಡಿ) ತೆಗೆದು ಕೊಂಡು ಬರಲು ತಿಳಿಸಿರಬೇಕು. ಎರಡೇ ಕೊಡಗಳನ್ನು ತರಿಸಬಾರದು ಏಕೆಂದರೆ ಕೊಡವನ್ನು ಕಟೆಯುವಾಗ ಕೊಡಕ್ಕೆ ಏನಾದರು ಧಕ್ಕೆಯಾದರೆ ಮತ್ತೊಂದು ಕೊಡವನ್ನು ಉಪಯೋಗಿಸಲು ಬರುತ್ತದೆ. ಆದ್ದರಿಂದ ಮೂರು ಕೊಡಗಳನ್ನು ತೀರಿಸಬೇಕು. ಕುಂಬಾರವನು ಕೊಡಗಳನ್ನು ತಂದ ಮೇಲೆ ದೇವಸ್ಥಾನದಲ್ಲಿ ಕರೀ ಕಂಬಳಿಯನ್ನು ಹಾಸಿ ಅದರ ಮೇಲೆ ಮೂರು ಕೊಡಗಳನ್ನು ಮಗಿಗಳನ್ನು ಮುಚ್ಚಳಗಳನ್ನು ಇಟ್ಟುಪೂಜೆ ಮಾಡಿದ ಮೇಲೆ ಮೊದಲೇ ತಿಳಿಸಿದ ಉಲುಪಿ ಕೊಟ್ಟುಕೊಡಗಳನ್ನು ಲಗ್ನದ ಮನೆಗೆ ತರಬೇಕು. ನಂತರ ಐದು ಪುರುವಂತರು ಮನೆಗೆ ಹೋಗಿ ಉಲುಪಿ ಕೊಟ್ಟು ಹೇಳಿ ಬರಬೇಕು. ೫ ಜನ ಪುರವಂತರಿಗೆ ಹೇಳುವದಾಗದಿದ್ದರೆ ಅಥವಾ ಅವರಿಗೆ ಅನಾನುಕೂಲವಿದ್ದರೆ. ೨ ಪುರವಂತರಿಗಾದರೂ ಹೇಳಲೇ ಬೇಕು.

ದೇವರ ಕಾರ್ಯವನ್ನು ಮಾಡುವ ಸಿದ್ಧತೆ

ಪುರುವಂತರು ಎಂದರೆ ವೀರಭದ್ರನ ಅವತಾರ ವೆಂಬ ನಂಬಿಕೆಯೂ ಇದೆ. ಅವರ ರೌದ್ರಾವತಾರದ ಕುಣಿತ ಆ ನಂಬಿಕೆಯನ್ನು ನಂಬಲಾಗಿದೆ. ಕೆಲವು ಕುಟುಂಬಗಳ್ಲಲಿ ಅಡ್ಡ ಹೆಸರು ಅಥವಾ ಹಿರಿಯರಿಂದ ಬಂದಂತಹ ಪದ್ಧತಿಯನ್ನು ಹೊಂದಿರುತ್ತಾರೆ. ಇವರ ವೇಷಭೂಷಣ ತುಂಬ ವರ್ಣಮಯ ಹಾಗೂ ಆಕರ್ಷಕ. ವೀರಗಾಸೆ ಹಾಕಿದ ಕಾವಿಗಳನ್ನು ಧೋತ್ರ ಹಾಗೂ ಕೆಲವು ಕಡೆಗಳಲ್ಲಿ ಪೈಜಾಮಗಳನ್ನು ಹಾಕಿ ತುದಿಯಲ್ಲಿ ಕಾಲಿಗೆ ಬಿಗಿಯಾಗಿ ಕಟ್ಟುತ್ತಾರೆ ಕಾವಿ ಅಂಗಿ ಧರಿಸಿ, ಟೊಂಕಕ್ಕೆ ನಡುಕಟ್ಟನ್ನು ಕಟ್ಟಿರುತ್ತಾರೆ. ಮೈಮೇಲೆ "ಗಲೀಫ" ವಂಥ ವಸ್ತ್ರವನ್ನು ಹಾಕಿಕೊಂಡಿರುತ್ತಾರೆ. ವಸ್ತ್ರದ ಅಂಚು ಸುಂಗುಗಳಿಂದ ಅಲಂಕಾರವಾಗಿರುತ್ತದೆ. ತಲೆಗೆ ಕಾವಿಯ ರೇಷ್ಮೆ ರುಮಾಲು, ತೋಳಿಗೆ ಬೆಳ್ಳಿಯ ನಾಗರಗಳು, ಎದೆಗೆ ತೀರ್ಥ ಮುಖಗಳು ದರ್ಪಣ, ನಡುವೆಗೆ ನಾರಸಿಂಹ ಮುಖ ಹಾಗೂ ರುಂಡಮಾಲೆಗಳು, ಕೈಮಣಿಕಟ್ಟಿಗೆ, ರುದ್ರಾಕ್ಷಿ, ಕೊರಳಿಗೆ ರುದ್ರಾಕ್ಷಿಮಾಲೆ, ಕಿವಿಯಲ್ಲಿ ರುದ್ರಾಕ್ಷಿ ಪಕ್ಕದಲ್ಲಿ ಸಣ್ಣ ರಕ್ಷ ಜೋಳಿಗೆ ಹಣೆಗೆ ವಿಭೂತ ಇಷ್ಟ ಎಲ್ಲಾ ಪುರವಂತನ ಬಲಗೈಯಲ್ಲಿ ಖಡ್ಗ ಅಥವಾ ತ್ರಿಶೂಲ ಹಿಡಿದಿರಬರೆ ಎಡಗೈಯಲ್ಲಿ ತುದಿಗೆ ನಿಂಬೆ ಹಣ್ಣು ಸಿಕ್ಕಿಸಿದ ಶೂಲ ಹಿಡಿದಿರುತ್ತಾರೆ.

ಗುಗ್ಗಳಿ ಕಟ್ಟಿಗೆಗೆ ಸಿಂಬಿ ಮಾಡಲಿಕ್ಕೆ ೯ ,ಕಟ್ಟಿಗೆ ನಾಲ್ಕುವರೆ ಗಜ ತೆಳುವಾದ ಅಡಿಪಿಯನ್ನು ತಂದು ಸ್ನಾನ ಮಾಡಿ ಮಡಿ ನೀರಿನಲ್ಲಿ ಒಗೆದು. ಹಿಂಡಿ ಒಣಗಿಸಬೇಕು. ನಂತರ ಆ ಸಿಂಬಿಗಳನ್ನು ಮಾಡಿ ಒಂದು ಗುಗಗಳಿ ಕಟ್ಟಿಗೆಗೆ ಪೂರಂತೆ ಹಾಕಬೇಕು. ಗುಗ್ಗಳವನ್ನು ಸಮೀಪದ ದೆವಸ್ಥಾನಕ್ಕೆ ಮುಟ್ಟಿಸುವದಿದ್ದರೆ ೬ ಕಟ್ಟಿಗೆ ಅರಿಪಿ ತಂದು ನಾಲ್ಕಿ ಸಿಂಬಿ ಮಾಡಬೇಕು. ಆ ಸಿಂಬಿಗಳನ್ನು ಒಳ್ಳೆ ಎಣ್ಣೆಯಲ್ಲಿ ಸಸಿಯಲು ಹಾಕಿ ಗುಗ್ಗಳಿ ಕಟ್ಟಿಗೆಗೆ ಎರಡರಂತೆ ಹಾಕಬೇಕು ಗುಗ್ಗಳ ಕೊಡವನ್ನು ಕಟೆಯುವ ಮುಂಚೆಯೇ ದೇವರ ಮನೆಯನ್ನು ಸಾರಿಸಿ ಒಳ್ಳೇ ಮಡಿಯಿಂದ ಕೊಡವನ್ನು ಕಟ್ಟಿಯಲು ಪ್ರಾರಂಭ ಮಾಡಬೇಕು ಅದೇ ಕಾಲಕ್ಕೆ ಹೆಣ್ಣು ಮಕ್ಕಳು ಸ್ನಾನ ಮಾಡಿ ಗುಗ್ಗಳ ಹುಗ್ಗಿ ಮಾಡಬೇಕು. ಮುಂಜಾನೆ ಗುಗ್ಗುಳ ಹುಗ್ಗಿಯನ್ನು ತಯಾರಿಸಿ ಗ್ಗಳಿ ಕೊಡಕ್ಕೆ ನೈವೇದ್ಯ ಮಾಡಬೇಕು

॥ಪರಡಿಗಳಲ್ಲಿ ಹೋಳಿಗೆ ಹುಗಿ ೨ ಎಣ್ಣಿ ಹೋಳಿಗೆ (ಹುರಕ್ಕಿ ಹೋಳಿಗೆ)

।ಲಿಂಬೆ ಹಣ್ಣು, ಎಲೆ ಅಡಿಕೆ ಮತ್ತು ಪೈಸೆಯನ್ನು ಇಡಬೇಕು ಕೆಲವು ಕಡೆ ೬೪ ಪರಡಿಗಳನ್ನು ಮಾಡುವರು.

ಮೊದಲೇ ಕಾಕುಳ್ಳಗಳನ್ನು ಬಿದ್ದು ಒಣಗಿದ ಆಕಳ ಸೆಗಣಿ ತಂದಿಟ್ಟು ಕೊಂಡಿರಬೇಕು ಕಾಕುಳ್ಳಗಳನ್ನು ಸುಟ್ಟು ಬೂದಿಯನ್ನು ಮತ್ತು ಕೆಣಕ (ನೀರು ಹಾಕಿ ಕೆಲಸದ ಗೋಧಿಹುಟ್ಟು) ೧ಕೆ.ಜಿ ಜವಾರಿ ಹತ್ತಿಕಾಳು ಇವುಗಳಿಂದ ಗುಗ್ಗಳಿ ಕಟ್ಟಿಗೆಯನ್ನು ಕೊಡದಲ್ಲಿಟ್ಟ ಕಟ್ಟಿಗೆ ಗಟ್ಟಿಯಾಗಿ ಇವುಗಳಿಂದ ಗುಗಳಿ ಕಟ್ಟಿಗೆಯನ್ನು ಕೊಡದಲ್ಲಿಟ್ಟು ಕಟ್ಟಿಗೆ ಗಟ್ಟಿಯಾಗಿ ನಿಲ್ಲುವಂತೆ ಸರಿಯಾದ ಪ್ರಮಾಣದಲ್ಲಿ ತುಂಬಬೇಕು ನಂತರ ಮಜಲಿನೊಂದಿಗೆ ಪುರವಂತರನ್ನು ಕರೆಯಲು ಹೋಗಬೇಕು ಪುರವಂತರು ಬಂದ ಮೇಲೆ ದೈವದ ಹಿರಿಯಲು ಬಂಧು ಬಾಂಧವರು ಅಷ್ಟೇಷ್ಟು ಬೀಗರ ಅಪ್ಪಣೆಯನ್ನು ತೆಗೆದುಕೊಂಡು ಸ್ವಾಮಿಯವರಾಗಲಿ ಅಥವಾ ಗುರುಗಳಾಗಲಿ ಮಂತ್ರೋಚ್ಚಾರಣೆ ಮಾಡುತ್ತ ಉತ್ತಮವಾದ ಕರ್ಪೂರದಿಂದ ಗುಗ್ಗಳ ಪುಟ ಮಾಡಬೇಕು. ೨ ಮಗ್ಗಗಳಲ್ಲಿ ಪದೋದಕ ಹಾಕಿ ಎಲ್ಲ ಕಡೆಗೂ ಸಿಂಪಡಿಸಬೇಕು.

ಗುಗ್ಗಳ ಹೊರಟ ನಂತರ ಎಲ್ಲಿ ದೇವರ ಗುಡಿಗಳು ಬರುವವೋ ಅಲ್ಲಿ ಪಾದೋದಕ ಹಾಕಿ ಕರಿ ಕಂಬಳಿ ಹಾಸಿ ಕೊಡವನ್ನು ಇಳಿಸಿ ಒಡಪು ಹೇಳಬೇಕು.

ಮುಗಿದನಂತರ ಕಾಯಿ ಒಡೆಯಬೇಕು (ಕೆಲವು ಕಡೆ ಮೊದಲೆ ವಡೆಯುವರು) ಗುಗ್ಗಳ ಕೊಡವನ್ನು ಸಾಗಮಾಡಬೇಕು. ಗುಗ್ಗಳವನ್ನು ಯಾವ ದೇವರಿಗೆ ಇಳುಪಬೇಕೆಂದು ನಿರ್ಧಾರ ಇರುತ್ತದೆಯೋ ಆ ಗುಡಿಯು ಬಂದ ಮೇಲೆ ಅಲ್ಲಿ ಗುಗ್ಗಳ ಕೊಡವನ್ನು ಹಿಡಿದು ಮದುಮಕ್ಕಳನ್ನು ಮುತ್ತೈದೆಯರನ್ನು ಕೊಡದ ಬುಡಕ್ಕೆ ೫ ಸುತ್ತ ಹಾಯಿಸಬೇಕು ನಂತರ ದೇವರ ಗುಡಿಯ ಬಳಗೆ ಪ್ರವೇಶ ಮಾಡಿ ದೇವರಿಗೆ ನಮಸ್ಕರಿಸಿ ಮಂಗಳಾರತಿ ಮಾಡಬೇಕು ಗುಗ್ಗಳ ಕೊಡಗಳಿಗೆ ಕಾಯಿ ಒಡೆದು ಶಾಂತಗೊಳಿಸಬೇಕು.

ದೇವರ ಕಾರ್ಯವನ್ನು ಮಾಡುವ ಸಮಯದಲ್ಲಿ ದೇವರಿಗೆ ಹೋಗುವಾಗ ಹಾಡುವ ಪದ ಹೇಳುತ್ತಾರೆ. ವರನ-ವಧುವಿನ ತಾಯಿಯರು ಹೂವಿನ ಕೊಡ ತಲೆಯ ಮೇಲೆ ಇಟ್ಟುಕೊಂಡು ವಧು-ವರನ ಹಿಂದೆ ಹೋಗುತ್ತಾರೆ.

ಐರಾಣಿ ಕೊಡ ತರುವ ಹಾಡು

ತಮ್ಮನ ಮದುವ್ಯಾಗ ಅಕ್ಕತಂಗೀರವರು
ಕುಂಬಾರನ ಮನಿಗಿ ಹೊಂಟಾರ ಶಿವಲಿಂಗ ಬನ್ನಿರೆ

ಕುಂಬಾರಣ್ಣ ಮಾಡ್ಯಾನ ನದರಾಗ ಗಡೀಯಾ
ಮ್ಯಾಲ ಬರದಾನ ಬಸವಣ್ಣ ಶಿವಲಿಂಗ ಬನ್ನಿರೆ

ಕಡಲಿಯ ಬ್ಯಾಳಿಯು ಗೋಧಿಯ ಹಿಟ್ಟರ
ಬೆಲ್ಲದ ಮುದ್ದಿ ಕುಂಬಾರಣ್ಣಗ ಶಿವಲಿಂಗ ಬನ್ನಿರೆ

ಊದುತ್ತ ಭಾರುಸ್ತಾ ಮರಹಿಡಕೊಂಡು ಹೊಂಟಾರ
ಕುಂಬಾರಣ್ಣ ಮಾಡ್ಯಾನ ಐದಗಡಗಿ ಶಿವಲಿಂಗ ಬನ್ನಿರೆ

ಅಕ್ಕತಂಗೇರ ಐದಮುಂದಿ ಕೊಡತಾ ಎತ್ತ್ಯಾರ
ಸೋದ ಮಾವ ಅವನ್ಹೆಣತಿ ದೊಡ್ಡವರು ಶಿವಲಿಂಗ ಬನ್ನಿರೆ

ದೊಡ್ಡವರು ಎತ್ತ್ಯಾರ ದೊಡ್ಡ ಕೊಡ ತಲಿಮ್ಯಾಲ
ಸಣ್ಣವರ ತಲಿಮ್ಯಾಲ ಸಣ್ಣ ಕೊಡ ಶಿವಲಿಂಗ ಬನ್ನಿರೆ

ಶ್ರೀಮತಿ ಗುರಮ್ಮಾ ಸಿದ್ರಾಮಪ್ಪ

ಕರಿಮಣಿ ಪೇಣಿಸುವದು :

ಸುರಗಿಯ ನೀರು ಹಾಕಿದ ನಂತರ ಮದುಮಕ್ಕಳ ಕೆ[illegible] ಪೇಣಿಸುವುದು ವಧು ವರರು ಇಬ್ಬರನ್ನು ಕೂಡಿಸಿ ಕರಿಮಣಿಗಳನ್ನು ಪೇಣಿಸುತ್ತಾರೆ. ಕರಿಮಣಿಯನ್ನು ಪೇಣಿಸುವುದರಲ್ಲಿ ಮೊದಲು ಯಾರು ಪೇಣಿಸುತ್ತಾರೆ ಅವರು ಜಾಣರು ಎಂದರೆ ಎಲ್ಲ ಬೇಗನೆ ಮಾಡಿ ಮುಗಿಸುತ್ತಾರೆ ಎಂದು ಹೇಳುತ್ತಾರೆ.

ನಂತರ ಮಧುಮಕ್ಕಳು ನಿಯಮದ ಸಲುವಾಗಿ ೫ ಅಥವಾ [illegible] ಕರಿಮಣಿಗಳನ್ನು ಪೇಣಿಸುತ್ತಾರೆ ನಂತರದಲ್ಲಿ ಮುತ್ತೈದೆಯರು ಯಾರು [illegible] ಕರಿಮಣಿಯನ್ನು ಪೋಣಿಸುತ್ತಾರೆ. ಕರಿಮಣಿಯ ಈ ಧಾರವನ್ನು ಮದುಮ[illegible] ಭುಜದಿಂದ ದೇಹವಿಡಿ ಹರಡುತ್ತದೆ ಅಂದರೆ ನರವ್ಯವಸ್ಥೆಯನ್ನು ನಿಯಂತ್ರಿಸುತ್ತದೆ ಹಾಗೂ ಅದನ್ನು ಶುಭ ಸಂಖ್ಯೆಯಿಂದ ಕಟ್ಟಿದ ತನ್ನವನ ಕಡೆಗೆ ವಲಿಯುವ ಕಾರ್ಯವನ್ನು ಮಾಡುತ್ತದೆ.

ಈ ಎಲ್ಲಾ ಅಂಶಗಳಿಂದ ಮದುವೆಯಾದವರು ಮಾಂಗಲ್ಯಕ್ಕೆ [illegible] ಆದ್ಯತೆಯನ್ನು ಕೊಡಲಾಗುತ್ತದೆ.

ವಧು-ವರನ ಅಲಂಕಾರ :

ಮದುವೆಯ ಸಮಯದಲ್ಲಿ ಮುಖ್ಯವಾಗಿ ವಧುವಿನ ಅಲಂಕಾರಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗುತ್ತದೆ. ವಧುವನ್ನು ಶೃಂಗರಿಸುವುದು ಪ್ರಾಚೀನಕಾಲದಿಂದಲೂ ಇದೆ. ಮೊದಲು ಅಲಂಕಾರಕ್ಕೆ ಮಹತ್ವವಿತ್ತು. [illegible] ಈ ಸಮಯದಲ್ಲಿ ಮದುಮಗಳನ್ನು ಅಲಂಕರಿಸುವುದು ಬಹಳ ಮುಖ್ಯವಾಗಿದೆ.

ವಧುವಿಗೆ ಉಡುಗೆ ತೊಡುಗೆಗಳನ್ನು ತೊಡಿಸಿ ಮುತ್ತೈದೆಯರು ಶೃಂಗರಿಸುತ್ತಿದ್ದರು, ಮದುವೆಯ ಮಂಟಪದಲ್ಲಿ ಎಲ್ಲರೂ ಆಕೆಯ ಸೌಂದರ್ಯಕ್ಕೆ ಮಹತ್ವವನ್ನು ಕೊಡಬೇಕು ಎಂಬ ಕಾರಣದಿಂದಾಗಿ ವಧುವಿನ ಒಳ್ಳೆಯ ರೀತಿಯಿಂದ ಕಾಣಬೇಕು ಆಕೆಯು ಸೌಂದರ್ಯಕ್ಕೆ ಸುಂದರವಾಗಿ ಕಾಣುತ್ತಿದ್ದಾಳೆ ಎಂಬ ಹೊಗಳಿಕೆಯು ಬರಬೇಕು ಎಂಬುವುದಕ್ಕಾಗಿ ವಧುವಿನ ಅಲಂಕಾರಕ್ಕೆ ಮಹತ್ವವನ್ನು ನೀಡಲಾಗಿದೆ. ಪ್ರಾಚೀನ ಕಾಲದಿಂದಲೂ ಹೆಣ್ಣು ಮಕ್ಕಳ ಅಲಂಕಾರಕ್ಕೆ ಮಹತ್ವವನ್ನು ಕೊಡಲಾಗುತ್ತಿದ್ದರು ಎಂದು ನಾವು ನೋಡುತ್ತಾ ಕೇಳುತ್ತಾ ಬಂದಿದೆ.

ಈ ಸಮಯದಲ್ಲಿ ಮದುವೆಯ ಕನ್ಯೆಯು ಆಕೆಯ ಅಲಂಕಾರ ಉಡುಗೆ ತೊಡುಗೆಯನ್ನೆ ನೋಡಬೇಕು. ವಧುವನ್ನು ಕೇಶ ಅಲಂಕಾರ ಕೇದಗೆ ಹೂವಿನಿಂದ ಅಲಂಕರಿಸುತ್ತಾರೆ.

ವಸ್ತ್ರಾಲಂಕಾರ (ಉಡುಗೆ)

ಮದುವೆಯ ದಿನ ಮದುಮಗಳ ರೇಷ್ಮೆಯ ಸೀರೆ, ಬಣ್ಣದ ಸೀರೆಯನ್ನು ಹಾಕುವ ಮದುವಣಗಿತ್ತಿ ಒಳ್ಳೆಯ ರೀತಿಯಿಂದ ಕಾಣುತ್ತಾಳೆ ಮೊದಲು ರೇಷ್ಮೆಯ ಸೀರೆಯ ಬಣ್ಣ ಬಿಳಿಯ ಬಣ್ಣವಾಗಿರುತ್ತಿತ್ತು. ವಧುವಿನ ಅಲಂಕಾರವನ್ನು ಮಾಡಲು ಬೇರೆಯ ಕಡೆಗೆ ತಂದು ಆಕೆಯನ್ನು ಅಲಂಕಾರವನ್ನು ಮಾಡುತ್ತಿದ್ದರು. ಸೀರೆಯ ನಂತರ ಆಭರಣಗಳ ಅಲಂಕಾರವನ್ನು ಮಾಡುತ್ತಿದ್ದರು. ಮಧುಮಗಳಿಗೆ (ಶ್ರೀಗಂಧ) ಸುವಾಸನೆಯಿಂದ ಕೂಡಿರಬೇಕು ಎಂದು ವಧುವಿನ ಮೈ ಸುವಾಸನೆಯಿಂದ ಮತ್ತು ತಂಪಾಗಿರಲಿ ಎನ್ನುವುದು ಕೂಡ ಶ್ರೀಗಂಧವನ್ನು ಹಚ್ಚುತ್ತಿದ್ದರು ಎಂದು ತಿಳಿಯಬಹುದಾಗಿದೆ.

ಪಾದಾಲಂಕಾರ :

ಮದುಮಗಳಿಗೆ ವಸ್ತ್ರಾಲಂಕಾರದ ಜೊತೆಗೆ ಪಾದಗಳಿಗೆ ಸಹ ಮಹತ್ವವನ್ನು ಕೊಡಲಗುತ್ತದೆ. ಪಾದಗಳಿಗೂ ಸಹ ಆಭರಣಗಳನ್ನು ಕಾಲುಗೆಜ್ಜೆಯನ್ನು ಹಾಕುತ್ತಾರೆ. ಪಾದಗಳಿಗೆ ಅಲಂಕಾರ ಎಂದರೆ ಮೆಹಂದಿಯಿಂದ ಈ ಸಮಯದಲ್ಲಿ ಅಲಂಕರಿಸುತ್ತಾರೆ ಏಕೆಂದರೆ ಪಾದಗಳಿಗೆ ಬೆರಳುಗಳಿಗೆ ಕಾಲುಂಗರದಿಂದ ಮತ್ತಷ್ಟು ಸುಂದರವಾಗಿ ಕಾಣುತ್ತವೆ ಎನ್ನಬಹುದು.

ಸೊಂಟದಾಲಂಕಾರ :

ಪಾದದ ನಂತರ ಸೊಂಟ, ಸೊಂಟಕ್ಕೆ ಝಣ ಝಣ ಎಂಬ ಶಬ್ದವನ್ನು ಬರುವುದಕೋಸ್ಕರ ಟೊಂಕದ ಪಟ್ಟಿ ಡಾಬು ಹಾಕುತ್ತಿದ್ದರು. ಅದರಿಂದ ಮದುಮಗಳು ಸುಂದರವಾಗಿ ಕಾಣುತ್ತಾಳೆ. ಎಂಬುದಕ್ಕೆ ಡಾಬಿನ ಅಲಂಕಾರವನ್ನು ಸಹ ಮಾಡುತ್ತಿದ್ದರು.

ಮುಖಾಲಂಕಾರ :

ವಧುವಿನ ಮುಖವು ಚಂದ್ರನಂತೆ ಮುಖ ಹೊಳೆಯಲು ಸುಂದರವಾಗಿ ಕಾಣಬೇಕು ಎಂದು ಆಕೆಯನ್ನು ಅಲಂಕರಿಸುತ್ತಿದ್ದರು. ಆಕೆಯ ಹಣೆಯ ಮೇಲೆ ಬೈತಲಿ ಬೊಟ್ಟನ್ನು (ಕುಂಕುಮ)ವನ್ನು ಇಟ್ಟು ಕಿವಿಗಳಿಗೆ ಓಲೆಗಳನ್ನು ಹಾಕಿ ಮೂಗಿಗೆ ಮೂಗುತಿ ಮುಂತಾದವುಗಳಿಂದ ಮುಖವನ್ನು ಸಹ ಅಲಂಕರಿಸುತ್ತಿದ್ದರು.

ಕೇಶಾಲಂಕಾರ :

ವಧುವಿನ ಮುಖಾಲಂಕಾರ ಮುಗಿದ ನಂತರ ಕೇಶಾಲಂಕಾರವನ್ನು ಮಾಡುತ್ತಾರೆ. ತಲೆಯ ಕೂದಲಿಗೆ ಜಡೆ ಹಾಕಿದ ನಂತರ ತಲೆಗೂದಲಲ್ಲಿ ಚಿನ್ನದ ಹೂಗಗಳನ್ನು ಅಥವಾ ಮಲ್ಲಿಗೆಯ ಹೂಗಳನ್ನು ತಳಿರು ತೋರಣವಂತೆ ಕೇಶಲಂಕಾರವನ್ನು ಮಾಡುತ್ತಿದ್ದರು. ನಂತರ ದಂಡೆಯನ್ನು ಮುಡಿಸುತ್ತಿದ್ದರು ಕೇಶಾಲಂಕಾರ ಆದನಂತರ ಆಕೆಯ ಉಡುಗೆ ತೊಡುಗೆಯ ಅಲಂಕಾರದ ನಂತರ ಆಕೆಯನ್ನು ಪೂರ್ಣವಾಗಿ ನೋಡಲು ದರ್ಪಣ(ಕನ್ನಡಿ)ಯನ್ನು ತೋರಿಸುತ್ತಿದ್ದರು.

ವರನ ಅಲಂಕಾರ :

ವರನನ್ನು ಅಲಂಕರಿಸಲು ಅಲಂಕಾರದ ಕೋಣೆಗೆ ಕರೆದುಕೊಂಡು ಹೋಗಿ ವಸ್ತ್ರ ಮತ್ತು ಆಭರಣಗಳಿಂದ ಅಲಂಕರಿಸುತ್ತಾರೆ. ವರನಿಗೂ ಸಹ ಸಲ್ಯ ಮತ್ತು ತಲೆಗೆ ಟೊಪ್ಪಿಗಿಯಿಂದ ಅವನಿಗೂ ಸಹ ಅಲಂಕಾರವನ್ನು ಮಾಡುತ್ತಾರೆ. ನಂತರ ವರನಿಗೆ ಭಾಷಿಂಗವನ್ನು ಕಟ್ಟುತ್ತಾರೆ.

ಈ ಆಧುನಿಕ ಕಾಲದಲ್ಲೂ ವಧು-ವರರನ್ನು ಅಲಂಕರಿಸುವ ಪದ್ಧತಿಯಿವೆ. ಹೆಣ್ಣಿಗೆ ಉಡುಗೆ ತೊಡುಗೆಗಳಿಂದ ಸಿಂಗರಿಸುವುದಕ್ಕೆ ಇಂದು ಸಹ ಹೆಚ್ಚಿನ ಆದ್ಯತೆಯನ್ನು ಕೊಡಲಾಗಿದೆ.

ಶುಭಕಾಲದ ಮಂಗಳ ಅಲಂಕಾರವೆಂದು ಒಪ್ಪಿ ಆಚರಿಸುತ್ತಾರೆ. ಹೆಣ್ಣಿನ ಸೌಭಾಗ್ಯ, ಸೂಚಕ ಉಡುಗೆ ತೊಡುಗೆ ಎಂದು ಹೇಳದೆ ಅಲಂಕರಿಸುತ್ತಿದ್ದರು ಅಂದು ಹೇಗೊ ಇಂದು ಕೂಡ ಅದೇ ಭಾವನೆಯಿಂದ ಈ ಕ್ರಮವನ್ನೇ ಅನುಸರಿಸುತ್ತಿದ್ದಾರೆ.

ಜಗಲಿಯ ಬಳಿ (ಅಕ್ಷತಾ) ಚಪ್ಪರ

ಮನೆಯ ಮುಂದೆ ಇದ್ದರೆ ಚಪ್ಪರವನ್ನು ಹಾಕಿಸುತ್ತಾರೆ ಮದುವೆಯ ಹಿಂದಿನ ದಿನವೇ ಚಪ್ಪರವನ್ನು ಹಾಕಿ ನಂತರ ಕಂಭ ಹಾಕುವರು ಆ ಕಂಭಗಳಿಗೆ ಮಾವಿನ ತಳಿರು ತೋರಣ ಕಟ್ಟುವದು ಚಪ್ಪರವನ್ನು ಸಿಂಗರಿಸುವರು ಇವನ್ನು "ಹಾಲಗಂಫ" ಎಂದು ಅಥವಾ ಹಾಲಗಂಗ ಎಂದು ಕರೆಯುತ್ತಾರೆ.

ವಧುವಿನ ಮನೆಯಲ್ಲಿ ಭಾಷಣಕಿಯ ದಿನ ಅಳಿಯನನ್ನು ಕರೆಯಲು ಹೋದಾಗ ವರನ ಮನೆಯ ಕಡೆಗಿದ್ದರೆ ಭಾಷಣಕಿಯ ದಿನ ಮಾಸಕಿನಲ್ಲಿಯೇ ತರುತ್ತಾರೆ ಹಾಲಗುಂಜಿಗೆ ಬೇಕಾದುದು ೫ ವಡೆದು ಖಟಗಿ ಮತ್ತು ಜರೆಯ ಖಟಗಿ ಮತ್ತು ೫ ಸೂಡು ದೊಡ್ಡ ಜೋಳದ ಕಳಕಿ ಹಂದರ ಮೇಲೆ ಹಾಕಲು ಹಿಂದೆ ಆಧಾರ ಗೋಡೆಯಿದ್ದರೆ ಇಲ್ಲದಿದ್ದರೆ ಕಲ್ಲುಗಳಿಂದ ಕಟ್ಟುತ್ತಾರೆ ಅದರ ಮೇಲೆ ೨ ಭಾಷಿಂಗ, ಶಿವಲಿಂಗ, ಸ್ವಾಸ್ತಿಕ ಮುಂತಾದವುಗಳ ಚಿತ್ರವನ್ನು ಜಾಜದಿಂದ (ಬಣ್ಣದಿಂದ) ಬರೆಯುತ್ತಾರೆ. ೪ ಕಂಭಗಳಿಂದ ಕೂಡಿದ ನೆಟ್ಟ ನಡುವೆ ಹಾಲಗುಂಜಿಯನ್ನು ನೆಟ್ಟು ಅದರ ಮೇಲೆ ಕುಳ್ಳಿ ಮತ್ತು ಹಣತಗಿ ಅದರ ಪೂಜೆಯನ್ನು ಮಾಡಿ ಅದರ ಮೇಲೆ ಕುಳ್ಳಿ ಹಣತಿಯ ಕಟ್ಟುತ್ತಾರೆ ಅದರ ಮೇಲೆ ದೀಪವನ್ನು ಹಚ್ಚುತ್ತಾರೆ. ಅದರ ಕೆಳಗೆ ಸಾರಿಸಿ ರಂಗೋಲಿಯನ್ನು ಹಾಕಿ ಅಲಂಕರಿಸುತ್ತಾರೆ.

ಅಲ್ಲಿಯೆ ವಧು ವರರಿಗೆ ಅಕ್ಷತೆಯನ್ನು ಹಾಕಿ ಈ ಹಾಲಗುಂಜಿಯನ್ನು ತರುವವರ ಹೆಸರನ್ನು ಪಂಚಾಂಗದಿಂದ ಯಾರು ತಂದರೆ ಒಳ್ಳೆಯದ ಎಂದು ಹೆಸರನ್ನು ತೆಗೆಸುತ್ತಾರೆ. ಯಾರ ಹೆಸರು ಬರುತ್ತವೆ ಅವರೆ ಹಾಲಗುಂಜಿಯ ಖಟಗಿಯನ್ನು ತರುತ್ತಾರೆ ಲಗ್ನ ಮಾಡುವ ಗಂಡಿನ ಕಡೆಯವರು ತಮ್ಮ ಮನೆಯ ಮುಂದೆ ಉಡಿ ತುಂಬಿಕೊಂಡು ಹೆಣ್ಣು ತರುವ ಹಿಂದಿನ ದಿನ ಈ ರೀತಿಯ ಚಪ್ಪರವನ್ನು ಹಾಕುತ್ತಾರೆ.

ಈ ಚಪ್ಪರದಲ್ಲಿಯೆ ಮಧುಮಕ್ಕಳಿಗೆ ಅಕ್ಕಿಯಿ ಕಾಳು ಹಾಕುವವರು ಹಾಕುವ ಹೊತ್ತಿಗೆ ಹೆಣ್ಣು ಎಡಕ್ಕೆ ಗಂಡು ಬಲಕ್ಕೆ ಈ ಜಾಗದಲ್ಲಿ ಕೂಡಿಸಿ ಬಟ್ಟೆ ಬರೆ ಉಡಿಸುವರು ಗಂಡು ತಾಳಿಯನ್ನು ಕಟ್ಟುತ್ತಲೇ ಅಕ್ಕಿ ಕಾಳು ಅಥವಾ ಅಕ್ಷತೆಯನ್ನು ಹಾಕುವರು.

ಮಾಂಗಲ್ಯ ಪೂಜೆ :

ಮದುವೆಯ ಸಂದರ್ಭದಲ್ಲಿ ಒಂದು ಮುಖ್ಯವಾದ ಶಾಸ್ತ್ರ ಲಗ್ನದ ಶುಭ ಮುಹೂರ್ತದ ಸಮಯದಲ್ಲಿ ಈ ಪೂಜೆಯು ನಡೆಯುತ್ತದೆ. ಮದುವೆಯ ಹಿಂದಿನ ದಿನ ಅಂದರೆ ಭಾಷಣಕಿಯ ದಿವಸ ವರನ ಮನೆಯಲ್ಲಿ ಬಟ್ಟೆಯ ಜೊತೆಗೆ ಮಾಂಗಲ್ಯ ಪೂಜೆಯನ್ನು ಮಾಡುತ್ತಾರೆ. ಮತ್ತೆ ಮದುವೆಯ ದಿನವೂ ಮಾಂಗಲ್ಯ ಪೂಜೆಯನ್ನು ಮಾಡುತ್ತಾರೆ.

ಸ್ವಾಮಿಗಳು ವರನಿಗೆ ಕೆಲವು ಮಂತ್ರಗಳನ್ನು ಹೇಳಿಕೊಡುತ್ತಾರೆ. ಆ ನಂತರ ಅರಿಶಿನ ಸವರಿದ ಮಾಂಗಲ್ಯ ಪೂಜಾ ಸಾಮಾನುಗಳು, ಕರಿಮಣಿ, ಹವಳ, ಮುತ್ತುಗಳು ಇಷ್ಟನ್ನೂ ಒಳಗೊಂಡ ಕೊಬ್ಬರಿಯ ಬಟ್ಟಲಲ್ಲಿ ಇಟ್ಟು ಅವನ್ನು ಬೇರೆಯವರಿಗೆ ಕೈಯಲ್ಲಿ ಮುಚ್ಚಿಕೊಂಡು ಅದನ್ನ ೪-೫ ಜನರಿಗೆ ಮುಟ್ಟಿಸುತ್ತಾರೆ ನಂತರ ಅದನ್ನು ನಮಸ್ಕರಿಸುತ್ತಾರೆ ಆನಂತರ ಹೆಣ್ಣು-ಗಂಡುಗಳಿಬ್ಬರೂ ಮಾಂಗಲ್ಯವನ್ನು ಭಕ್ತಿಯಿಂದ ಪೂಜಿಸುತ್ತಾರೆ. ಆನಂತರ ಗಂಡು-ಹೆಣ್ಣಿನ ಕುತ್ತಿಗೆಗೆ ಮಾಂಗಲ್ಯವನ್ನು ಕಟ್ಟುತ್ತಾರೆ. ಹೀಗೆ ಕಟ್ಟುವಾಗ ಮೂರು ಅಥವಾ ಐದು ಗಂಟುಗಳನ್ನು ಹಾಕುವ ಸಂಪ್ರದಾಯವಿದೆ. ಆನಂತರ ಮುತ್ತೈದೆಯರು ಕೂಡ ಎರಡು-ಮೂರು ಗಂಟುಗಳನ್ನು ಹಾಕುತ್ತಾರೆ. ಈ ಗಂಟುಗಳಿಗೆ ಅರಿಶಿಣವನ್ನು ಸ್ವಾಮಿಯು ಗಂಡು ಹಾಕು ಮಾಡುತ್ತಾನೆ. ಆನಂತರ ಸ್ವಾಮಿಯು ಗಂಡಿನ ಶಲ್ಯ ಮತ್ತು ಹೆಣ್ಣಿನ ಸೆರಗಿಗೆ ತೆಗೆದು ಕೊಂಡು ಅದರಲ್ಲಿ ಅಕ್ಕಿಯ ಕಾಳುಗಳನ್ನು ಹಾಕಿ ಅದನ್ನು ಕಟ್ಟುತ್ತಾರೆ.

ಮಾಂಗಲ್ಯ ಕಟ್ಟುವ ಉದ್ದೇಶ :

ಮಂಗಳಕರವಾದದ್ದು ಅಂದರೆ ಮುತ್ತೈದೆ ತನದ ಸಮಕೇತವಾಗಿದೆ.

ಅಥವಾ

ಭುಜದಿಂದ ದೇಹವಿಡೀ ಹರಡುವ ನರವ್ಯವಸ್ಥೆಯನ್ನು ನಿಯಂತ್ರಿಸುವ ನಾಗು ಅದನ್ನು ಶುಭಾಶಂಸೆಯಿಂದ ಕಟ್ಟಿದ ತನ್ನವನ ಕಡೆಗೆ ತುಡಿಯುವ ಕಾರ್ಯವನ್ನು ಮಾಡುತ್ತದೆ.

ಮುತ್ತೈದೆಯರು ಕೂಡ ಅರಿಷಿನ, ಕುಂಕುಮ ತಮ್ಮ ಮಾಂಗಲ್ಯಕ್ಕೆ ಹಚ್ಚಿಕೊಳ್ಳುವ ಪದ್ಧತಿಯು ಇಂದು ಸಹ ನಾವು ಕಾಣುತ್ತೇವೆ.

ಅಕ್ಷತೆಯನ್ನು ಹಾಕುವುದು :

ಮದುವೆಯ ಸಮಯದಲ್ಲಿ ಮಾಂಗಲ್ಯಧಾರಣೆಯ ನಂತರ ಅಕ್ಷತೆಯನ್ನು ಹಾಕುತ್ತಾರೆ.

೧) ಒಳಬಾಂಧವರು ಅಕ್ಕಿ ಬಳಗದ ಅಕ್ಷತೆ

೨) ಹೊರಬಾಂಧವರು – ಜೋಳ

ಅಕ್ಷತಾಧಾರಣೆಯು :

ವಧು ವರರ ದೇಹದ ವಿದ್ಯುತ ಶಕ್ತಿಯನ್ನು ಪರಸ್ಪರರ ದೇಹಕ್ಕೆ ವರ್ಗಾಯಿಸುವುದರ ಮೂಲಕ ಅವರಲ್ಲಿ "ಒಂದು" ಎಂಬ ಭಾವವನ್ನು ಪ್ರಚೋದಿಸುತ್ತದೆ.

ಅಕ್ಕಿಯ ಅಕ್ಷತೆ ಈ ಅಕ್ಷತೆಯು ಚಪ್ಪರ, ಜಗಲಿಯ ಹತ್ತಿರ ನಡೆಯುತ್ತಾರೆ ಅಂದರೆ ತಮ್ಮ ಸಂಬಂಧಿಕರು ಅಂದರೆ ವರನ ತಂದೆ-ತಾಯಿ, ಅಕ್ಕ-ತಮ್ಮ, ತಂಗಿ, ಮುಂತಾದವರು ಮತ್ತು ವಧುವಿನ ತಂದೆ-ತಾಯಿ, ತಮ್ಮ, ಅಣ್ಣ, ಅಕ್ಕ-ತಂಗಿ ಮೂಂತಾದ ಸಮೀಪದ ಬಂಧುಗಳಿಗೆ ಬಳಗದ ಅಕ್ಷತೆಯನ್ನು ಅಕ್ಕಿಯ ಅಕ್ಷತೆಯನ್ನು ಹಾಕುತ್ತಾರೆ. ಇದನ್ನು ಬಳಗದ ಅಕ್ಷತೆ ಎಂದು ಹೇಳುತ್ತರೆ.

ಆ ಸಮಯದಲ್ಲಿ ಅಕ್ಕಿಯು ದುಬಾರಿಯಾಗಿ ಮತ್ತು ಅಕ್ಕಿಯು ಕಡಿಮೆ ಬೆಳೆಸುತ್ತಿದರು ಆದರಿಂದ ಅಕ್ಕಿಯು ಕಡಿಮೆ ಖರ್ಚಾಗಲಿ ಎಂದು ಕಡಿಮೆ ಜನರು ಈ ಅಕ್ಷತೆಯನ್ನು ಹಾಕುತ್ತಿದ್ದರು. ತಾಳಿಯ ನಂತರ ವೇದಿಕೆಗೆ ಬರುವಾಗ ಜೋಳದ ಅಕ್ಷತೆಯನ್ನು ಹಾಕುತ್ತಾರೆ.

ಅಕ್ಷತೆಯನ್ನು ಹಾಕುವುದು :

ಮುತ್ತೈದೆಯರು ಅಥವಾ ಸಂಬಂಧಿಕರು ಅಕ್ಷತೆಯನ್ನು ಆರ್ಶಿವಾದ ರೂಪದಲ್ಲಿ ಹಾಕುತ್ತಾರೆ ಅಂದರೆ ವಧು-ವರನ ಮೆಲೆ ಮುತ್ತಿನ ಅಕ್ಷತೆಯು ಮಳೆ ಬರಲ್ಲಿ ಎಂದು ವಧು-ವರರ ತಲೆಯ ಮೇಲೆ ಹಾಕಿದ ಅಕ್ಷತೆಯು ತಲೆಯಲ್ಲಿ ತುಂಬಿರಲಿ ಅವರು ರಾಜದಂಪತಿಯ ಹಾಗೆ ಒಂದಾಗಿರಲಿ ಎಂದು ಹೇಳುತ್ತಾರೆ.

ಕಾಲುಂಗುರಧಾರಣೆ :

ಮದುವೆಯ ಸಮಯದಲ್ಲಿ ವರನು ವಧುವಿನ ಕಾಲುಗಳ ಬೆರಳಿಗೆ

ಉಂಗುರವನ್ನು. ತೊಡಿಸುತ್ತಾನೆ. ಪಾದದ ಎರಡನೆಯ ಬೆರಳಿನಲ್ಲಿ ಕಾಲು ಉಂಗುರವನ್ನು ವರನ ಕೈಯಾರೆ ವಧುವಿನ ತೊಡೆಸುತ್ತಾನೆ

ಕಾಲುಂಗುರಧಾರಣೆ ಏಕೆ ಮಾಡುತ್ತಾರೆ ಎಂದರೆ ದೇಹದ ವಿದ್ಯುತ್ಕಾಂತೀಯ ಅಲೆಗಳನ್ನು ನಿರ್ದಿಷ್ಟ ರೀತಿಯಲ್ಲಿನಿರ್ಬಂಧಿಸುವ ಹಾಗು ಮಾನಸಿಕವಾಗಿ ತಾನು ಒಂದು ಕುಟುಂಬದ ಜವಾಬ್ದಾರಿಗೆ ಬಿದ್ದಳು ಎಂಬುವನ್ನು ಸಂಕೇತಿಸುವ ಮೂಲಕ ಒಂದು ಸಮಾಜಿಕ ಹೊಣೆಯನ್ನು ಹೊತ್ತುಕೊಳ್ಳುವುದಕ್ಕೆ ಹೆಣ್ಣು ಮತ್ತು ಗಂಡನ್ನು ಮಾನಸಿಕವಾಗಿ ಸಿದ್ಧಗೊಳಿಸುತ್ತದೆ ಈ ಕಾಲುಂಗರ ಅಂದರೆ ಹೆಣ್ಣು ಮದುವೆಯಾದ ನಂತರ ದೇಹ ಮತ್ತು ಮನಸ್ಸಿನಿಂದ ಆಕೆಯು ಎಲ್ಲಾ ಅಂಗಗಳಲ್ಲಿ ತನ್ನ ಕುಟುಂಬದ ಜವಾಬ್ದಾರಿಯನ್ನು ಮುಖ್ಯವಾಗಿ ತಲೆಯಲ್ಲಿ ಇರಬೇಕು ಎಂಬುದನ್ನು ತಿಳಿಸುತ್ತವೆ.

ಭಾಷಿಂಗ ಕಟುವುದು :

ಮದುವೆಯ ಕಾಲದಲ್ಲಿ ಮದುಮಕ್ಕಳನ್ನು ಭಾಷಿಂಗವನ್ನು ಕಟ್ಟುತ್ತಾರೆ. ವಧು-ವರನಿಗೆ ಭಾಷಿಂಗವನ್ನು ತಂದಾಗ ಅದು ಬಿಚ್ಚಿದ ಬಳಿಕ ವರನು-ವಧುವಿಗೆ ತಾಳಿಯನ್ನು ಕಟ್ಟಿದ ನಂತರ ಭಾಷಿಂಗವನ್ನು ಕಟ್ಟುತ್ತಾರೆ.

ಭಾಷಿಂಗವನ್ನು ಅಲ್ಲಿ ಇಡುವುದಿಲ್ಲ ಅಕ್ಕಿಕಾಳು ಹಾಕಿದ ನಂತರ ಹೆಣ್ಣಿನ ಕಡೆಯವರು ಊಟವನ್ನು ಮಾಡಿದ ಊರಿಗೆ ಹೋಗುವಾಗ ಜಗಲಿಗೆ ನಮಸ್ಕರಿಸಿ ಹೋಗುತ್ತಾರೆ ಆಗ ಹೊಸ ಮದಿಮಗಳು ಮೆನಗೆ ಬಂದ ನಂತರ ಜಗಲಿಯ ಮೇಲೆ ಇಡುತ್ತಾರೆ ಸಲ್ಲಿಸಿದರೆ ಮದುವೆ ಆದ ಸ್ಥಳದಲ್ಲಿ ಇಡುತ್ತಾರೆ ಅಥವಾ ಮನೆಯ ದೇವರ ಕಡೆಗೆ ಹೋಗಿ ಭಾಷಿಂಗವನ್ನು ತೆಗೆಯುತ್ತಾರೆ.

ಭಾಷಿಂಗ ಕಟ್ಟುವ ಹಾಡು

ಸೋ ಅನ್ನೇ ಸೋಬಾನ ಬನ್ನೇ

ಭಾಷಿಂಗ ಮೇಲಿರುವ ಸೂಸಾಡು ಗಿಳಿರಾಮ ದೇಸಲ್ಲಿ
ನಿಮ್ಮ ದಳವೆಲ್ಲ! ಮದುನುಗನ
ಭಾಷಿಂಗ ಮೇಲೆ ಬಲಬಂದೆ ಸೋ

ದಂಡೆಯೊಳು ಬರಗಿರುವ [illegible] ತಿಳಿರಾವು
[illegible] ತೂಗಿ ದಳವೆಲ್ಲ [illegible]
[illegible] ಮೇಲೆ [illegible]

ಬಾಷಿಂಗ ತರುವಾಗ ಸೂಸಾಡಿ ಮಳೆಯಾಗಿ
ಬಾಷಿಂಗ ಚಿಗಿತು ಬನವಾಗಿ । ನಮ್ಮೂರ
ಕೂಸ ಬಡವರಿಗೆ ನೆರಳಾಗಿ

ದಂಡೆಯನು ತರುವಾಗ ತೊಂಡುದ ಮಳೆಯಾಗಿ
ದಂಡೆಲ್ಲಿ ಅರಳಿ ಹೂವಾಗಿ । ಗೊನೆಬಿಟ್ಟು
ಮಂಡ ಮದುಮಗನ ಫಲವಾಗಿ ॥ಸೊ॥

ಗಂಡು ಮಲ್ಲಿಗೆ ಹೂವ ತೊಂಡಲದ ನನೆದಂಡೆ
ಇಚಿಡಿ ಕೊರಳೊಳಗ ಬಾಸಿಂಗ । ಹೂವನು
ಕೊಂಡು ಮೆರಸಿದರ ಬೆಲತನಕ

ಮದುಮಗನ ಬಾಷಿಂಗ ಮದುಮಗಳ ನನೆದಂಡೆ
ಪದಪಿನಲಿ ಮೆರೆಸಿ ಬೆಳತನಕ । ಹಾಡಿದರ
ಚೆದುರೆಯರು ಕೂಡಿ ನಲುಲ ॥ಸೋ॥

ಪೇಟೆ ಪೇಟೆಯ ಗುಂಟ ಕೂಟಕೂಟಕ ನಿಂತು
ದಾಟಿನಲಿ ಮೆರೆದು ಮನೊಗಲು। ಹಡದವ್ವ
ತಾಟಬಾನ್ನತ್ತಿ ಇಳಿದೊಗೆದು ॥ಸೋ॥

ಹಾಡಿದವರು ಸರಸ್ವತಿ ಬಾಮೂರ

ಕನ್ಯಾದಾನ ಅಥವಾ ಧಾರೆಯೆರೆಯುವುದು :

ಮದುವೆಯಲ್ಲಿ ವಧುವನ್ನು ವರನಿಗೆ ದಾನವಾಗಿ ಕೊಡುತ್ತಾರೆ ವರನು ಆ ಧಾನವನ್ನು ಕೊನೆಯವರೆಗೆ ಜೀವನದ ಪರ್ಯಂತ ಆ ಕಾಣಿಕೆಯನ್ನು ಪೋಷಿಸಿಕೊಂಡು ರಕ್ಷಿಸಿಕೊಂಡು ಇರುತ್ತೇನೆ ಎಂದು ವರನು ನೀರಿನ ಮೂಲಕ ಪ್ರತಿಜ್ಞೆಯನ್ನು ತೆಗೆದುಕೊಳ್ಳುತ್ತಾನೆ.

ಕೆಲವು ಕಡೆಗೆ ಕನ್ಯಾದಾನವು ತಂದೆ-ತಾಯಿಯರೆ ಕನ್ಯಾಧಾನವನ್ನು ಧಾರೆಯನ್ನು ಎರೆಯುತ್ತಾರೆ ಕೆಲವು ಅಲ್ಲಿಯ ಪದ್ದತಿಯ ಹಾಗೆ ಆಚರಣೆಯನ್ನು ಮಾಡುತ್ತಾರೆ

ಆ ಕಡೆಯಲ್ಲಿ ಧಾರೆಯನ್ನು ವಧುವಿನ ತಾಯಿಯ ತಮ್ಮ ಅಥವಾ ಅಣ್ಣ ಆವರು ವಧುವಿನ ಸೋದರ ಮಾವನ ಧಾರೆಯನ್ನು ಎರೆಯುತ್ತಾರೆ.

ಧಾರೆಯೆರೆಯಲು ಈ ಸಾಮಾನುಗಳನ್ನು ತರುತ್ತಾರೆ. ಕೊಡ, ಪರಾತು, ಬಟ್ಟಿ ಮುಂತಾದ ಯಾವುದೆ ತಾಮ್ರದ ಅಥವಾ ಬೇರೆಯಾವುದೇ ಸಾಮಾನು ತೆಗೆದುಕೊಂಡು ಸೋದರ ಮಾವ ಮತ್ತು ಸೋದರ ಮಾವನ ಹೆಂಡತಿ ಇಬ್ಬರು ವಧು-ವರನ ಕಡೆಗೆ ಬಂದು ಕೊಡದಲ್ಲಿ ನೀರು ತರುತ್ತಾರೆ ವರನ [illegible] ವಧುವಿನ ಪಾದಗಳನ್ನು ತೆಳೆದು ಪೂಜೆಯನ್ನು ಮಾಡಿತ್ತಾರೆ. ಹೀಗೆ ಸೋದರ ಮಾವನ ಧಾರೆಯೆರೆಯುವ ಕಾರ್ಯವನ್ನು ಮಾಡುತ್ತಾರೆ. ವರನ ಕಡೆಯವರ ಧಾರೆಯೆರೆದವರಿಗೆ ಬಟ್ಟೆಯನ್ನು ಮಾಡುತ್ತಾರೆ.

ಮಗಳನ್ನು ಒಪ್ಪಿಸುವುದು :

ವಧುವಿನ ತಂದೆ-ತಾಯಿಯರು ತಮ್ಮ ಮಗಳನ್ನು ವರನ ತಂದೆ-ತಾಯಿಯರಿಗೆ ಸ್ವರ ಸಾಕ್ಷಿಯಾಗಿ ತಮ್ಮ ಮಗಳನ್ನು ಒಪ್ಪಿಸುತ್ತಾರೆ. [illegible] ಹೇಳುವ ಹಾಡು

ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ
ಹಂಬಲಿಸಿ ನಿನ್ನ ಹಡೆದೇನ॥
ಹಂಬಲಿಸಿ ನಿನ್ನ ಹಡೆದೇನ ಚಿತ್ರದ ಗೊಂಬಿ
ನಿನಗೊಪ್ಪಿಸಿ ಕೊಡಲ್ಹಾಂಗ
ತೊಟ್ಟಿಲ ತೂಗಂದ್ರ ಸಿಟ್ಟೀಲೆ ಕೊಡೋಳಿ॥
ಬಟ್ಟಲ ಬಳಗಾಕ ಅರಿಯಳಿ ॥
ಬಟ್ಟಲ ಬಳಗಾಕ ಅರಿಯದ ಮಗಲನ್ನು
ಕೊಟ್ಟೇನು ಮಾವನ ಕೈಯಾಗ ॥

ಈ ರೀತಿಯಿಂದ ಹಡೆತಾಯಿಯ ತನ್ನ ಮುಂದಿನ ಮಗಳನ್ನು ವರನ ತಾಯಿ-ತಂದೆಯನ್ನು ಒಪ್ಪಿಸಿಕೊಡುತ್ತಾರೆ. ಆಕೆಗೆ ಯಾವುದೇ ಕೆಲಸ ನಾವು ಮಾಡಿಸಿಲ್ಲ ಆಕೆಯಿಂ ಏನಾದರು ತಪ್ಪಾದರೇ ಕ್ಷಮಿಸಿ ಎಂದು ಹೆತ್ತ ತಾಯಿ ತನ್ನ ಬೀಗರಿಗೆ ಹೇಳುತ್ತಾಳೆ.

ವಧು-ವರನ ಕರೆದು ಹೋಗುವಾಗ

[illegible] ಅಕ್ಕಿಗೆ ಮತ್ತು ಸಂಬಂಧಿಕರು [illegible] ದೇವರ ಗುಡಿಯುವರೆಗೆ ಬರುತ್ತಾರೆ. ಆ ಸಮಯದಲ್ಲಿ ಅಣ್ಣ-ಅಕ್ಕಿಗೆಯು ವಧುವಿನ-ವರನ ಕಾಲುಗಳನ್ನು ತೊಳೆಯುತ್ತಾರೆ. ಪೂಜೆಯನ್ನು ಮಾಡುತ್ತಾರೆ.

॥ಕಾಲು ತೊಳೆಯುವ ಹಾಡು॥

ಸೋ ಎನ್ನಿರೆ ಸೋಬಾನವೆನ್ನಿರೆ
ಅಳಿಯ ದೇವರ ಪಾದ । ತೊಳೆಯಲಿ ಬಂಗಾರ
ಅತ್ತಿ ಮಾವರು ಪ್ರೀತಿಯಿಂದಲಿ
ಅತ್ತಿ ಮಾವರು ಪ್ರೀತಿಯಿಂದಲಿ ಪನ್ನೀರ
ಎತ್ತಿ ತಂಬಿಗೆಯ ಸಲುವ್ಯಾರ

ಶಿವನ ಎಡಭಾಗಕ್ಕೆ ಪಾರ್ವತಿ ಕುಂತಾಗ
ಮಡದಿ ಗಂಡನ ಎಡಭಾಗಕ್ಕೆ
ಮಡದಿ ಗಂಡನ ಎಡಭಾಗಕ್ಕೆ ಕುಂತಾಳ
ಮಡನೀರ ಪಾದಕ್ಕೆ ಎರದಾಳ

ಅಳಿಯ ದೇವರಂತ । ತಿಳಿದು ಅತ್ತಿ ಮಾವ
ತೊಳೆದು ಪಾದಪೂಜೆ ಮಾಡಿ ಸಂತೋಷದಿ
ತಂದೆ ಅಹೀರ ಮಾಡ್ಯಾರ

ಸತಿ ಪತಿ ಏರ್‍ಯಾರ। ಸಂಸಾರದ ತೇರ
ಕುಲ ಕುಲ ಕಿಲಿ ಕಿಲಿ ನಗತಾರ।
ಕುಲ ಕುಲ ಕಿಲಿ ಕಿಲಿ ನಗತಾರ
ಸತಿಪತಿ ಸದ್ಗತಿ ಸಂಸಾರ

ಸರತಿ ಗಂಗವ್ವ! ಬಾರ ನೀಲವ್ವ
ಆರತಿ ಬೆಳಗವ್ವ ನಿಂಗವ್ವ
ಆರತಿ ಬೆಳಗವ್ವ ನಿಂಗವ್ವ ಬೇಗನೆ
ಒಡಪಟ್ಟು ಹೆಸರು ಹೇಳವ್ವ

ಹಾಡಿದವರು-ಪಾರ್ವತವ್ವ

ವರನ ಊರಿಗೆ ಹೋದನಂತರ :

ಮದುವೆಯು ವರನ ಕಡೆಯಾದರೆ ಅಥವಾ ವಧುವಿನ ಕಡೆ ಅವರು ಸಹ ಮೆರವಣಿಗೆಯ ಮೂಲಕ ಹೊಸ ವಧು-ವರರನ್ನು ಮೆರವಣಿಗೆಯಿಂದ ಮನೆಯನ್ನು ತುಂಬಿಸುಕೊಳ್ಳುತ್ತಾರೆ.

ಬಾಗಿಲ ಹಿಡಿಯುವುದು :

ಮದುವೆಯ ಮೊದಲು ನವದಂಪತಿಗಳನ್ನು ಬರುವ ಸಮಯದಲ್ಲಿ ವರನ ಅಕ್ಕ-ತಂಗಿಯರು ಬಾಗಿಲನ್ನು ಹಿಡಿಯುವ ಪದ್ಧತಿಯಿದೆ. ಅವರಿಗೆ ಕಾಣಿಕೆಯನ್ನು ಕೊಟ್ಟ ನಂತರ ನವದಂಪತಿಗಳಿಗೆ ಒಳಗೆ ಬರುವ ಅವಕಾಶ ಮಾಡಿಕೊಡುತ್ತಾರೆ.

ಬಾಗಿಲು ಹಿಡಿಯುವ ಹಾಡು

ಅನಿಯ ನಾ ಕೊಡುವೆ ಆನಿಯ ಮರಿ ಕೊಡುವೆ
ಹಿಡಿದ ಬಾಗಿಲ ಬಿಡವ್ವ ತಂಗೀ

ಆನಿಯ ನಾ ವಲ್ಲ ಆನಿಯ ಮರಿವಲ್ಲ
ಹಿಡಿದ ಬಾಗಿಲ ಬಿಡೋ ನಿಲ್ಲ

ಕುದುರೆಯ ನಾ ಕೊಡುವೆ ಕುದುರೆಯ ಮರಿ ಕೊಡುವ
ಹಿಡಿದ ಬಾಗಿಲ ಬಿಡವ್ವ ತಂಗಿ

ಕುದುರೆಯ ನಾವಲ್ಲ ಕುದರಿಯ ಮರಿವಲ್ಲ
ಹಿಡಿದ ಬಾಗಿಲ ಬಿಡೋ ನಿಲ್ಲ

ಒಂಟೆಯ ನಾಕೊಡುವೆ ಒಂಟೆಯ ಮರಿ ಕೊಡುವೆ
ಹಿಡದ ಬಾಗಿಲ ಬಿಡವ್ವ ತಂಗಿ

ಒಂಟೆಯ ನಾ ವಲ್ಲ ಒಂಟಿಯ ಮರಿ ವಲ್ಲ
ಹಿಡಿದ ಬಾಗಿಲ ಬಿಡೋನಿಲ್ಲ

ಬೆಳ್ಳಿಯ ರಥ ಕೊಡುವೆ ಬಂಗಾರ ರಥ ಕೊಡುವೆ
ಹಿಡಿದ ಬಾಗಿಲ ಬಿಡೊ ತಂಗೀ

ಬೆಳ್ಳಿಯ ರಥ ವಲ್ಲ ಬಂಗಾರ ರಥ ವಲ್ಲ
ಹಿಡಿದ ಬಾಗಿಲ [illegible]

ಮಲ್ಲಿಗೆಯಂತ ಮಗಳಿಗ ಹಡದು ನಿನ ಮಗನ ನ ಕೊಡುವೆ
ಹಿಡಿದ ಬಾಗಿಲ ಬಿಡವ್ವ ತಂಗಿ

ಮಗಳ ಕೊಟ್ಟೆಯೆಂದರೆ ಖುಷಿಯಿಂದ ನಾ ಬಿಡುವೆ
ತವರ ಮನೆಯು ತಣ್ಣಿರಲಿ

ಹಾಡಿದವರು–ತೇಜಮ್ಮ ಅಣ್ಣಪ್ಪಾ

ಮದುಮಗಳಿಗೆ ಮನೆ ತುಂಬಿಸುವ ಶಾಸ್ತ್ರ :

ತವರಿನಿಂದ ಗಂಡನ ಮನೆಗೆ ಮೊದಲ ಬಾರಿಗೆ ಸೊಸೆಯು ಬಂದಾಗ ಮನೆಯನ್ನು ತುಂಬಿಸುವ ಶಾಸ್ತ್ರವನ್ನು ಮಾಡುವರು. ಹೊಸ್ತಿಲಿನ ಮೇಲೆ ಪಾದ ಇರಿಸಿ ಆಕೆಯ ಹೆಬ್ಬೆರಳು ಮತ್ತು ಅದರ ಪಕ್ಕದ ಬೆರಳುಗಳ ಮಧ್ಯೆ ಸೋಳೆ ಇಟ್ಟು ಶಾಶ್ವತವಾಗಿ ಇಲ್ಲಿಯೇ ಇರುವಳು ಎಂಬುವುದರ ಸಂಕೇತವಾಗಿದೆ.

ಮೊಳೆಯು ಹೊಸಲಿನ ಒಳಗೆ ಹೋಗುವಂತೆ ಹೊಡೆಯುವರು. ಆಮೇಲೆ ಸೇರಿನಲ್ಲಿ ಅಕ್ಕಿತುಂಬಿ ಮೇಲೆ ಒಂದು ಬೆಲ್ಲದ ಕಣ್ಣಿಯನ್ನು ಇಟ್ಟು ಕಾಲಿನಿಂದ ಒದೆಸುವರು ಅದು ಮನೆಯಲೆಲ್ಲ ಹರಡಬೇಕು. ಇದೇ ರೀತಿ ಈ ಸೊಸೆಯು ಬಂದಾಗ ಮನೆ ತುಂಬ ಸಂಪತ್ತು ತುಂಬಬೇಕು ಎಂಬ ನಂಬಿಕೆ ಇವೆ. ಈ ರೀತಿ ಹೊಸ ಮದುಮಗಳನ್ನು ಮನೆಯನ್ನು ತುಂಬಿಸಿಕೊಳ್ಳುತ್ತಾರೆ.

ಉಂಗುರ ಆಡಿಸುವ ಶಾಸ್ತ್ರ :

ಮದುವೆಯಾದ ನಂತರ ಮದುಮಗಳನ್ನು ನಗಿಸುವ ಶಾಸ್ತ್ರವಾಗಿದೆ. ಮೊದಲು ಮದುವೆಯಾಗುವವರೆಗೂ ಅವರಿಗೆ ಯಾವುದೇ ರೀತಿಯ ಪರಿಚಯು ಇರುವುದಿಲ್ಲ. ವಧು–ವರರನ್ನು ಒಂದಾಗಿ ಮಾಡುವ ಶಾಸ್ತ್ರಗಳಲ್ಲಿ ಉಂಗುರ ಆಡಿಸುವ ಶಾಸ್ತ್ರವೂ ಒಂದಾಗಿದೆ. ಈ ಶಾಸ್ತ್ರವನ್ನು ಲಗ್ನ ಆಗಿದ ನಂತರ ಆಡಿಸುವರು. ಇಲ್ಲದಿದ್ದರೆ ವರನ ಮನೆಗೆ ಬಂದ ನಂತರ ಆಡಿಸುವರು. ಇವನ್ನು ಆಡಿಸುವಾಗ ಗುಂಡಾದಂತಹ ಒಂದು ಹಾಂಡೆಯಲಿ ಕುಂಕುಮದ ನೀರು

ಹಾಕುತ್ತಾರೆ. ಅದರಲ್ಲಿ ಬಂಗಾರದ ಉಂಗರ ಅಥವಾ ಕಾಲುಂಗುರವನ್ನು ಹಾಕಿ ಅದರಲ್ಲಿ ವಧುವರರ ಕೈಯಿಂದ ಹುಡುಕಲು ಹಚ್ಚುತ್ತಾರೆ. ಈ ಉಂಗುರವನ್ನು ಮೂರು ಸಲ ಯಾರು ನೀರನಿಂದ ಮೊದಲು ನೀರಿನಿಂದ ತೆಗೆಯುತ್ತಾರೆ ಅವರೇ ಗೆದ್ದ ಹಾಗೆ ಎಂದು ಹೇಳಬಹುದು.

ಈ ಆಟವನ್ನು ಆಡಿಸುವುದು ವಧುವು ತನ್ನ ತಂದೆ ತಾಯಿಯನ್ನು ಬಿಟ್ಟು ಬಂದಂತಹ ದುಃಖವು ಕಡಿಮೆಯಾಗಲಿ ಎಂದು.

ವಧುವರರನ್ನು ಒಂದಾಗಲು ಸ್ಪರ್ಷಸುಖ ದೊರೆಯಲಿ ಎಂದು ಹೇಳಬಹುದು.

ಅಡಿಕೆಯಾಡಿಸುವ ಶಾಸ್ತ್ರ :

ವಧು-ವರನು ಅಡಿಕೆಯ ಆಟದಲ್ಲಿ ಚಾಲಿ ಅಡಿಕೆಯನ್ನು ತೆಗೆದುಕೊಂಡು ವರನು ತನ್ನ ಹೆಬ್ಬೆರಲು ಮತ್ತು ಎರಡೇ ಬೆರಳಿನಲ್ಲಿ ಇಟ್ಟು ಕೊಳ್ಳಬೇಕು ವಧುವು ವರನ ಕೈಯಲ್ಲಿ ಇದ್ದ ಅಡಕೆಯನ್ನು ತೆಗೆಯಬೇಕು ಹಗೆಯೆ ವರನು ಸಹ ವಧುವು ವರನು ಸಹ ವಧುವು ತನ್ನ ಎರಡು ಕೈಯ ಅಂಗೈಯಲ್ಲೆ ಅಡಿಕೆಯನ್ನು ಇಟ್ಟಿಕೊಳ್ಳುತ್ತಾಳೆ. ಆಗ ವರನು ಒಂದೆ ಕೈಯಿಂದ ಅಡಕೆಯನ್ನು ಬಿಡಿಸಬೇಕು ಇದರಲ್ಲಿ ಯಾರು ಗೆದೆಯುತ್ತಾರೆ ಎಂಬುದನ್ನು ಗಮನಿಸುತ್ತಾರೆ.

ಖಾರಿಕ ಆಡಿಸುವ ಶಾಸ್ತ್ರ :

ಇದು ಸಹ ಮೇಲಿನ ಆಟಗಳ ಹಾಗೆಯೆ ಅಂದರೆ ವಧು-ವರನಿಗೆ ೨೫-೨೫ ಖಾರಿಕಗಳನ್ನು ಕೊಡುತ್ತಾರೆ. ಆ ಖಾರಿಕುಗಳನ್ನು ಮುಚ್ಚಿಕೊಂಡು ಅಂಗೈಯಲ್ಲಿ ಎಷ್ಟು ಎಂದು ತಿಳಿಯಬೇಕು ಇದನ್ನು ೩ ಸಲ ಆಡಿಸುತ್ತಾರೆ. ಅಂದರೆ ಮೊದಲ ಸಲ ವರನ ಕೇಳಿದಾಗ ವಧುವೂ ೨ ಎಂದು ಹೇಳಿದಾಗ ವರನ ಕೈಯಲ್ಲಿ ೨ ಇದ್ದರೆ ವಧು ಗೆದ್ದಲಿ, ಇಲ್ಲದಿದರೆ ವರನು ಗೆದ್ದನು ಇದೇ ರೀತಿ ೩ ಸ್ವಲ್ಪ ಆಡಿಸುತ್ತಾರೆ. ನಂತರ ಒಂದು ತಪ್ಪು ಉತ್ತರ ಹೇಳಿದರೆ ಅವರು ಸೋತರು ಎಂದು ಹೇಳಲಾಗುತ್ತದೆ. ಇದೇ ಖಾರಿಕಿನ ಆಟವಾಗಿದೆ.

ಕೂಸು ಆಡಿಸುವುದು :

ಮದುವೆಯಾದ ನಂತರ ಮದು ಮಕ್ಕಳು ಯಾವ ರೀತಿಯಿಂದ ತಮ್ಮ

ಸಂಸಾರವನ್ನು ನಡೆಸುತ್ತಾರೆ ಎಂಬುವುಧಕ್ಕೆ ಈ ಆಟವನ್ನು ಆಡಿಸುತ್ತಾರೆ. ಮದುವೆಯಾದ ನಂತರ ಮಗುವಿನ ಜನನದ ನಂತರ ಯಾವ ರೀತಿಯಿಂದ ಮನೆಕೆಲಸದ ಜೊತೆ ಮಗುವಿನ ಪೋಷಣೆ ಎಂಬುದನ್ನು ಈ ಹಾಡಿನ ಮುಖಾಂತರ ತಿಳಿಸಲಾಗಿದೆ.

ಕೂಸು ಆಡಿಸುವ ಹಾಡು

ನೀರಿಗಿ ನಾನು ಹೋಗುತ್ತೀನಿ ಹಿಡಿಹಿಡಿಯಿರಿ ಕೂಸಿನಾ
ಹಿಡಿಹಿಡಿಯಿರಿ ಕೂಸಿನಾ ನಮ್ಮ ದೇಸಾಯಿ ಸುಂದರನಾ
ಹೊಲಕ್ಕ ನಾನು ಹೋಗುತ್ತೀನಿ ಹಿಡಿಹಿಡಿ ಕೂಸಿನಾ
ಹಿಡಿಹಿಡಿ ಕೂಸಿನಾ ನಮ್ಮ ದೇಸಾಯಿ ಸುಂದರನಾ
ಕಸವ ನಾ ಹೊಡಿತ್ತೀನಿ ಹಿಡಿಹಿಡಿಯಿರಿ ಕೂಸಿನಾ
ಹಿಡಿಹಿಡಿಯಿರಿ ಕೂಸಿನಾನ ನಮ್ಮ ದೇಸಾಯಿ ಸುಂದರನಾ
ಬಿತ್ತಿದಾ ಬೆಳೆಯು ನಾ ಕೊಯ್ಯಬೇಕು ಹಿಡಿಹಿಡಿ ಕೂಸಿನಾ
ಹಿಡಿಹಿಡಿ ಕೂಸಿನಾ ನಮ್ಮ ದೇಸಾಯಿ ಸುಂದರನಾ
ರೊಟ್ಟಿಯ ನಾನು ಬಡಿಬೇಕು ಹಿಡಿಹಿಡಿರಿ ಕೂಸಿನಾ
ಹಿಡಿಹಿಡಿಯಿರಿ ಕೂಸಿನಾ ನಮ್ಮ ದೇಸಾಯಿ ಸುಂದರನಾ
ಊಟವಾ ನಾ ಒಲ್ಲೆ ನಿದ್ದಿಯ ನಾ ಒಲ್ಲೆ ಹಿಡಿಹಿಡಿ ಕೂಸಿನಾ
ಹಿಡಿಹಿಡಿ ಕೂಸಿನಾ ನಮ ದೇಸಾಯಿ ಸುಂದರನಾ

ನಾಗಮ್ಮ ವೀರಣ್ಣ ಅಣ್ಣಿಗೇರಿ

ಸೋಬಾನ ಮಾಡುವ ಶಾಸ್ತ್ರ :

ಹಿಂದೆ ಮದುವೆಯು ೯,೫, ೩ ದಿನಗಳವರೆಗೆ ಮದುವೆಯ ಕಾರ್ಯಕ್ರಮವನ್ನು ಮಾಡಿತ್ತಿದ್ದರು. ದಿನಾಲೂ ಒಂದು ಶಾಸ್ತ್ರವನ್ನು ತಪ್ಪದೆ ಮಾಡುತ್ತಿದ್ದರು. ಹಾಗೆಯೇ ಸೋಬಾನ ಶಾಸ್ತ್ರಕ್ಕಿಂತ ಮೊದಲು ನವದಂಪತಿಗಳನ್ನು ತಮ್ಮ ಕುಲದೇವರಿಗೆ ಹರಕೆಯಿದ್ದರೆ ಮುಟ್ಟಿಸಬರುತ್ತಾರೆ. ಮದುವೆಯಾದ ಮೂರು-ನಾಲ್ಕು ದಿನದ ನಂತರ ಸೋಬಾನ ಮಾಡುವ ಶಾಸ್ತ್ರ ನಡೆಯುತ್ತದೆ.

ಸೋಬಾನೆಯು ಶಾಸ್ತ್ರದಲ್ಲಿ ಮಂಗಳವಾದ್ಯ ಇದ್ದರೂ ಸರಿಯೆ ಇಲ್ಲದಿದ್ದರು ಸಹ ಅವರು ಹಾಡುಗಳನ್ನು ಹಾಡುತ್ತಾರೆ.

ಸೋಬಾನವೆಲ್ಲ ಸಿವನಿಗೆ ಅಥವಾ ಸೋಬಾನ ಎಂದು ಸೊಲ್ಲನ್ನು ಹಿಮ್ಮೇಳದವರು ಹೇಳಿದರೆ ಉತ್ತರ ಕರ್ನಾಟಕದ ಕಡೇ ಸೋ ಸಾಮಾನ್ಯವಾಗಿ ಹೇಳುತ್ತಾರೆ

ಅಧ್ಯಾಯ — ೫

ಸಮಾರೋಪ

ಅನುಬಂಧ

ಮದುವೆಯ ಹಾಡುಗಳು

ಮದುವೆಯ ಕುರಿತು ನಂಬಿಕೆಗಳು

ಫೋಟೊಗಳು

ಆಕರ ಗ್ರಂಥಗಳು

ವಕ್ತಾರರ ಪಟ್ಟಿ

ಅಧ್ಯಾಯ–೫

ಸಮಾರೋಪ

ಈವರೆಗೆ ೪ ಅಧ್ಯಾಯಗಳಲ್ಲಿ ಮದುವೆಯ ಸಂಪ್ರದಾಯ ಆಚರಣೆ ಮದುವೆಯ ಉದ್ದೇಶವನ್ನು ನಾವೂ ತಿಳಿದುಕೊಂಡಿದ್ದೇವೆ.. ಈ ಮದುವೆಯ ಸಂಬಂಧ ಎನ್ನುವುದು ಒಂದು–ಎರಡು ದಿನದಲ್ಲಿ ಮುಗಿಯುವ ಸಂಬಂಧವಲ್ಲ. ಅದು ಜನ್ಮ ಜನ್ಮದ ಸಂಬಂಧವಾಗಿದೆ.

ಮದುವೆಯು ಒಂದು ಸಾಮಾಜಿಕ ಸಂಸ್ಥೆ. ಸಂತಾನೋತ್ಪತ್ತಿಯ ಸಲುವಾಗ ಗಂಡು–ಹೆಣ್ಣುಗಳನ್ನು ಮದುವೆ ಬಂಧನದಲ್ಲಿ ಬೆಸೆಯುತ್ತದೆ. ಕುಟುಂಬ ಮತ್ತು ಮದುವೆ ಪರಸ್ಪರ ಸಂಬಂಧ ಹೊಂದಿದೆ.

ಮದುವೆಯನ್ನು ವೇದಗಳ ಕಾಲದಲ್ಲಿನ ಪದ್ಧತಿಯನ್ನು ನೋಡಿದಾಗ ಆ ಪದ್ಧತಿಗಳು ಸಹ ಈ ಸಮಯದಲ್ಲಿ ಅವುಗಳ ಹೆಸರು ಮಾತ್ರ ಬದಲಾಗಿದೆ. ಗಾಂಧರ್ವ ಮದುವೆಯು ಹಿಂದಿನ ಕಾಲದಿಂದಲೂ ಇತ್ತು. ಈ ಸಮಯದಲ್ಲಿ ನೋಡಿದರೆ ಪ್ರೇಮ ಮದುವೆಯನ್ನು ನಾವೂ ಈ ಸಮಯದಲ್ಲಿಯೂ ನೋಡುತ್ತೇವೆ.

ಮನುಷ್ಯನ ವರ್ತನೆಯನ್ನು ಗಮನದಲ್ಲಿ ಇಟ್ಟು ಅವನ ಆಸೆ ಆಕಾಂಕ್ಷೆಗಳನ್ನು ನೋಡಿ ಸಾಮಾಜಿಕ ಸಂಸ್ಥೆಯಾಗಿ ಬೆಳಕಿಗೆ ಬಂದಿದೆ ಮದುವೆ. ಮದುವೆಯಲ್ಲಿ ಮುಖ್ಯವಾಗಿ ವರನ ಬಗ್ಗೆ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸುತ್ತಾರೆ ಏಕೆಂದರೆ ವಧುವನ್ನು (ಹೆಂಡತಿಯಾಗುವವಳನ್ನು) ಯಾವ ರೀತಿಯಲ್ಲಿ ನೋಡಿಕೊಳ್ಳುತ್ತಾನೆ. ಆತನ ವರ್ತನೆಯು ಯಾವ ರೀತಿಯಿಂದ ದುರಾಭ್ಯಾಸಗಳು ಇವೆ. ಇಲ್ಲಿ ಎಂಬುದನ್ನು ಮೊದಲು ಗಮನಿಸುತ್ತಾರೆ ನಂತರವೇ ಹುಡುಗಿಯ ಕಡೆಯವರು ಒಪ್ಪುತ್ತಾರೆ.

ಹಾಗೆಯೆ ವರನ ಕ್ಕಡೆಯವರು ಹುಡಗಿಯ ವರ್ತನೆಯನ್ನು ಮುಖ್ಯವಾಗಿ ನೋಡುತ್ತಾರೆ. ಅಂದರೆ ಹುಡಗಿಗೆ ಅಡುಗೆ ಮಾಡಲು ಬರುತ್ತದೆಯಿಲ್ಲ. ಆಕೆಯು ಸಂಬಂಧಿಕರ ಜೊತೆ ಯಾವ ರೀತಿಯಿಂದ ವರ್ತಿಸುತ್ತಾಳೆ. ಆಕೆಯ ಸ್ವಭಾವ ಹೇಗೆ ಇದೆ. ಎಂಬುದು ಗಮನಿಸುತ್ತಾರೆ. ನಂತರವೇ ಹುಡಗ–ಹುಡಗಿಯು ಹಿರಿಯರಿಗೆ ಒಪ್ಪಿಗೆ ಆದ ನಂತರ ನಿಶ್ಚಯವನ್ನು ಮಾಡುತ್ತಾರೆ.

ಮುಖ್ಯವಾಗಿ ಹುಡುಗ–ಹುಡಗಿಯ ಜಾತಕವನ್ನು ನೋಡಿ ಹುಡುಗನ–ಹೆಸರು ಹುಡಗಿಯ ಹೆಸರಿನಲ್ಲಿ ಎಷ್ಟು ಗುಣಗಳು ಹೊಂದಿಕೆಯಾಗುತ್ತವೆ. ಎಷ್ಟು ಆದರೆ ಒಳ್ಳೆಯದು

ಎಂಬುದನ್ನು ಜಾತಕದಿಂದ ಪಂಚಾಗದಲ್ಲಿ ತಿಳಿಸುತ್ತಾರೆ. ಹಿರಿಯರ ಪ್ರಕಾರ ಛತ್ತಿಸಕಾ ಟೀಕಾ ಅಂದರೆ ಅವರು ಯಾವಾಗಲೂ ಜಗಳವಾಡಿಕೊಂಡೆ ಇರುತ್ತಾರೆ ಎಂಬುದನ್ನು ಪಂಚಾಗದಿಂದ ತಿಳಿದು ಬರುತ್ತದೆ.

ಮದುವೆಯನ್ನು ಮೊದಲು ನಿರ್ಧಿಷ್ಟವಾದ ತಿಂಗಳುಗಳಲ್ಲಿಯೆ ಮಾಡುತ್ತಿದ್ದರು ಅಂದರೆ ಮಾಘ, ಫಾಲ್ಗುಣ, ಚೈತ್ರ,ವೈಶಾಖ ಮತ್ತು ಜೇಷ್ಠ ಮಾಸಗಳು ಮದುವೆಗೆ ಸೂಕ್ತಕಾಲ ಎಂದು ಮೊದಲು ತಿಳಿದಿದ್ದರು ಆ ಕಾಲದಲ್ಲಿಯೇ ಮದುವೆಯನ್ನು ಮಾಡುತ್ತಿದ್ದರು. ಆದರೆ ಈ ಸಮಯದಲ್ಲಿ ವರ್ಷದಲ್ಲಿ ಯಾವ ತಿಂಗಳುಗಳಲ್ಲಿ ಎಂಬುವುದಿಲ್ಲ ಎಲ್ಲಾ ತಿಂಗಳುಗಳಲ್ಲಿ ಮದುವೆಯನ್ನು ಮಾಡುತ್ತಿದ್ದರು.

ಮದುವೆಯನ್ನು ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ ಮುಹೂರ್ತಗಳನ್ನು ನಿರ್ದಿಷ್ಟವಾಗಿ ನೋಡಿಯೇ ಅಕ್ಷತೆಯ ಸಮಯವನ್ನು ನಿರ್ಧರಿಸಲಗುತ್ತದೆ.

ಮಧುಮಕ್ಕಳನ್ನು ಮದುವೆಯ ಮೊದಲು ವರನ ಗುಣ, ಕುಲ, ಜಾತಿ, ಛಲ. ವಿದ್ಯೆ ಮತ್ತು ಶೀಲಗಳನ್ನು ಮುಖ್ಯವಾದ ಲಕ್ಷಣಗಳು ವಧುವಿನ ಬಗ್ಗೆ ಅಂದರೆ ಆಕೆಯ ಸೌಮ್ಯ ಸ್ವಭಾವ, ಹೆಣ್ಣಿನ ಲಕ್ಷಣಗಳನ್ನು ನೋಡುತ್ತಾರೆ. ಅಂದ ಅವರಿಗೆ ಮದುವೆಯನ್ನು ಮಾಡಿದರೆ ಹೊಂದಿಕೊಂಡು ಹೋಗುತ್ತಾರೆ. ಎಂಬುವ ಉದ್ದೇಶಯಾಗಿರುತ್ತದೆ.

ಮದುವೆಯ ಬಗ್ಗೆ ಮೊದಲು ವಧು–ವರರ ಮದುವೆಗೆ ನಿರ್ದಿಷ್ಟವಾದ ವಯೋಮಾನವನ್ನು ಹೊಂದಿರುತ್ತಿರಲಿಲ್ಲ. ಮೊದಲು ಬಾಲ್ಯದಲ್ಲಿ ಮದುವೆಯನ್ನು ಮಾಡುವ ಪದ್ಧತಿಯಿತ್ತು ಆದರೆ ಈಗಿನ ದಿನಗಳು ಮದುವೆಯನ್ನು ಮಾಡಬೇಕಾದರೆ ಕಾನೂನಿನ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಕಾನೂನಿನ ಪ್ರಕಾರ ಗಂಡಸರಿಗೆ ೨೧ ಹಾಗೂ ಹೆಣ್ಣಿನ ವಯಸ್ಸು ೧೮ ಎಂದು ನಿರ್ಧರಿಸಲಾಗಿದೆ. ಈ ವಯಸ್ಸಿಕ್ಕಿಂತಲೂ ಕಡಿಮೆ ವಯಸ್ಸಿನಲ್ಲಿ ಮದುವೆಯನ್ನು ಮಾಡಿದರೆ ಕಾನೂನಿನ ರೀತಿಯಲ್ಲಿ ಅವರು ಅಪರಾಧಿಯಾಗುತಾರೆ. ೧೯೨೯ ಬಾಲ್ಯವಿವಾಹ ತಡೆ ಕಾಯ್ದೆಯ ಪ್ರಕಾರ ಶಿಕ್ಷೆಯನ್ನು ವಿಧಿಸಲಾಗುತ್ತದೆ..

ಪ್ರಾಚೀನಕಾಲದಲ್ಲಿ ಗಂಡ ಸತ್ತ ನಂತರ ಅದೇ ಚಿತೆಯಲ್ಲಿ ಹೆಣ್ಣು ಬೆಂಕಿಗೆ ಹಾಕಿ ಸುಡುತ್ತಿದ್ದರು ಆದರೆ ಮುಂದೆ ಕಾಲ ಬದಲಾದಂತೆ ಕಾನೂನಿನಲ್ಲಿಯು ೧೮೫೬ರಲ್ಲಿ ಹಿಂದೂ ವಿಧವಾ ಪುನರ್ವಿವಾಹ ಆಗಬಹುದು ಆಕೆಗೂ ಸಮಾಜದಲ್ಲಿ ಗೌರವದಿಂದ ಇರುವ ಎಂದು

ಮದುವೆಯ ಸಂಪ್ರದಾಯ ಆಚರಣೆಗಳನ್ನು ಇಂದು ಸಹ ಕಾಣಬಹುದು ಆದರೆ ಮೊದಲಿನ ಹಾಗೆ ಅದರ ಸಂಪ್ರದಾಯದಲ್ಲಿ ಕತಿಮೆ ಪ್ರಮಾಣದಲಿ ಅವುಗಳ ಆಚರಣೆಯನ್ನು ಮಾಡುತ್ತಿದ್ದಾರೆ.

ಮದುವೆಯ ಸಂಪ್ರದಾಯದ ಬಗ್ಗೆ ನಾವು ಇಂದು ಆಧುನಿಕ ಯುಗದಲ್ಲಿ ವೈಜ್ಞಾನಿಕ ದೃಷ್ಠಿಯಿಂದ ನೋಡಿದ ಇದು ಮದುವೆಯ ಪ್ರಕಾರಗಳಲ್ಲಿ ಏಕಪತ್ನಿತ್ವ ಏಕಪತಿತ್ವಗಳು ಆಚರಣೆಯಲ್ಲಿ ಕಾಣಬಹುದು ಅವುಗಳ ಬಗ್ಗೆ ಸಮಾಜದಲ್ಲಿ ಗೌರವದ ದೃಷ್ಠಿಯಿಂದ ನೋಡುತ್ತಾರೆ. ವೈಜ್ಞಾನಿಕ ದೃಷ್ಠಿಯಿಂದ ನೋಡಿದರು ಸಹ ಒಪ್ಪಿಕೊಳ್ಳುತ್ತಾರೆ. ಇದನ್ನು ಬಿಟ್ಟು ಬಹುಪತ್ನಿತ್ವ, ಬಹುಪತಿತ್ವವನ್ನು ಈ ರೀತಿ ಯಾವ ಸಂಬಂಧಗಳ ಮಹತ್ವ ಇಲ್ಲ. ಏಕೆಂದರೆ ಕಾಮ ತೃಪ್ತಿಗೋಸ್ಕರ ಎರಡನೇಯ ಸಂಬಂಧ ಅನಾರೋಗ್ಯಕ್ಕೆ ಕಾರಣ ಎಂದು ವೈದ್ಯಕೀಯ ದಾಖಲೆಯಲ್ಲಿ ಕಾಣಬಹುದು ಒಬ್ಬ ಹೆಣ್ಣಿನ ಜೊತೆ ಒಬ್ಬನ ಗಂಡು ಬದಲಾವಣೆಯನ್ನು ನೋಡಿದರೆ ಏಡ್ಸ ಎಂಬ ಕಾಯಿದೆಗೆ ತುತ್ತಾಗಬಹುದು ಎಂದು ವೈಜ್ಞಾನಿಕ ಅಂಶವು ತಿಳಿಸಿಕೊಡುತ್ತವೆ.

ಮದುವೆಯು ಮಾನವನ ಜೀವನದ ಮೂಲ ಗುರಿಯಲ್ಲ. ಅದನ್ನು ಮೀರಿದ ಶ್ರೇಯಸಾಧನೆ ಅದರ ಪರಮಗಂತವ್ಯವಾಗಬೇಕೆನ್ನುವ ಅರಿವಿನ ಮೂಲದಲ್ಲಿ ಮದುವೆಯು ಕಲ್ಪನೆಯಿಂದ, ಪ್ರೇಮ, ವಾತ್ಸಲ್ಯ, ಸ್ನೇಹ, ಕರಣೆ, ಕನಿಕರ ಮೊದಲಾದ ಮಾನವೀಯ ಗುಣಗಳು ಪೂರ್ತಿಯಾಗುವುದು ಮದುವೆಯ ಮೂಲಕ ಕಾಮತೃಪ್ತಿಯ ಜೊತೆಗೆ ಧರ್ಮಸಾಧನೆಯೂ ಆಗುವುದು.

ಮದುವೆಗೆ ಸಂಬಂಧಿಸಿದ ಜಾನಪದದಲ್ಲಿ ವಿಪುಲವಾಗಿದೆ. ಇನ್ನು ಹೆಚ್ಚಿನ ಭಾಗವನ್ನು ಧಾರ್ಮಿಕ, ಲೈಂಗಿಕ ಸಾಮಾಜಿಕ ಪ್ರಚೋದನೆಗಳು ಉಂಟು ಮಾಡಿದ ಗೊಂದಲಗಳಿಂದ ತಬ್ಬಾದ ಮದುವೆಯಾಗಿರುವ ಜನರು ಸೃಷ್ಠಿಸಿದ್ದಾರೆ. ಪ್ರಬಲವಾದ ಪ್ರವೃತ್ತಿಗಳಿಂದ ಪದೇ ಪದೇ ತೊಂದರೆ ಗೀಡಾದ ಸನ್ನಿವೇಶದಲ್ಲಿ ಗೊಂದಲ ಪರಿಹರಿಸಿಕೊಳ್ಳಲು ಅವರು ಯತ್ನಿಸಿದ್ದಾರೆ. ಈ ಪ್ರಬಲವಾದ ಪ್ರವೃತ್ತಿಗಳಲ್ಲಿ ಪ್ರತಿಯೊಂದ ತನ್ನಷ್ಟಕ್ಕೆ ಒಳ್ಳೆಯದೇ ಆಗಿದೆ.

ಮದುವೆಯ ಸಂಪ್ರದಾಯದಲ್ಲಿ ಮಾಂಗಲ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಲಾಗುತ್ತದೆ. ಮಾಂಗಲ್ಯಕ್ಕೆ ಕೇವಲ ಕರಿಮಣಿಗಳ ಜೊತಗೆ ಮುತ್ತು, ಹವಳ, ಬಂಗಾರ, ಕರಿಮಣಿ ಹೀಗೆ ಮಾಂಗಲ್ಯದ ಪೂಜೆಯನ್ನು ಮಾಡುವಾಗ ಒಟ್ಟಿನಲ್ಲಿ ಮಾಂಗಲ್ಯ ಪೇಣಿಸಿ ಇಟ್ಟು ಜ ಜನರಿಗಾದರು ಅದನ್ನು ಮುಟ್ಟಿಸುತ್ತಾರೆ. ಏಕೆಂದರೆ ಅವರು ಸಾಕ್ಷಿದಾರರು ಎಂಬ ನಂಬಿಕೆಯಿಂದ ನಂತರ ಮಾಂಗಲ್ಯವನ್ನು ವರನು-ವಧುವಿಗೆ ಕಟ್ಟುತ್ತಾನೆ.

ಕಾಲುಂಗುರ ವಧುವಿನ ಮಾಂಗಲ್ಯಧಾರೆಯ ನಂತರ ಕಾಣಬರುವುದು. ಮಾಂಗಲ್ಯಧಾರೆಯ ನಂತರ ಕಾಲುಂಗರ ಹಾಕುತ್ತಾರೆ. ಅದರ ಮಹತ್ವವೇನೆಂದರೆ ಕಾಲಿನಲ್ಲಿ ಬೇಡಿ ಎಂದರ್ಥ. ಅದು ತಾನು ಒಂದು ಕುಟುಂಬದ ಜವಾಬ್ದಾರಿಯನ್ನು ತೆಗೆದುಕೊಂಡಂತೆ ಮತ್ತು ಮಾನಸಿಕವಾಗಿಯೂ ಕುಟುಂಬದ ಜವಾಬ್ದಾರಿಯ ಜೊತೆಗೆ ಸಾಮಾಜಿಕವಾಗಿ ಹೊಣೆಯನ್ನು ತೆಗೆದುಕೊಂಡು ಜೀವನ ಪರಿಯಂತ ಮದುವೆಯ ವಿಧಿ ಆಚರಣೆಗಳನ್ನು ನಿಭಾಯಿಸಬೇಕಾಗುತ್ತದೆ.

ಕಂಕಣ ಕೈಯಲ್ಲಿ ವಧು ವರನಿಗೆ ಕಟ್ಟುತ್ತಾರೆ ಅಂದರೆ ಪ್ರತಿಜ್ಞೆಯ ರೂಪದಲ್ಲಿ ಕಂಕಣವನ್ನು ಕಟ್ಟುತ್ತಾರೆ. ಕೈಗಳಿಗೆ ನಿರ್ದಿಷ್ಟ ರೀತಿಯ ಧಾರವನ್ನು ಕಟ್ಟಿ ಕಂಕಣಬದ್ಧ ಮುಂಗೈಗೆ ಕಟ್ಟಿದರೆ ರಕ್ತ ಪರಿಚಲನೆಗೆ ಸಂಬಂಧಿಸಿರುತ್ತದೆ. ಮುಂಗೈ ದುರ್ಬಲ ರಕ್ತನಾಳವನ್ನು ನಿಯಂತ್ರಿಸುವ ಕೆಲಸ ಕಂಕಣ ಮಾಡುತ್ತದೆ. ಅಂದರೆ ಪ್ರತಿಜ್ಞೆ ಎಂತಲೇ ಹೇಳಬಹುದು.

ಮದುವೆಯು ಮೊದಲು ಮೂರು ದಿನ ಐದು ದಿನ ಒಂಬತ್ತು ದಿನಗಳವರೆಗೆ ಮದುವೆಯನ್ನು ಮಾಡುತ್ತಿದ್ದರು. ಈಗ ಕೇವಲ ಎರಡು ದಿನಗಳಲ್ಲಿ ಮದುವೆಯು ಕಾರ್ಯಕ್ರಮಗಳಿಗೆ ಮುಗಿಯುತ್ತದೆ. ಮೊದಲು ಮದುವೆ ಅಂದರೆ ಊರಿನ ಜಾತ್ರೆ ಎಂಬಂತೆ ನಡೆಯುತ್ತಿತ್ತು. ಮದುವೆಯು ಮೂರು ದಿನಗಳಲ್ಲಿ ಒಂದೊಂದು ದಿನ ಒಂದೊಂದು ಕಾರ್ಯಕ್ರಮಗಳನ್ನು ಮಾಡುತ್ತಿದ್ದರು. ಅವುಗಳಲ್ಲಿ ಹಾಡುವುದು, ಮನೋರಂಜನೆ ಮೊದಲಾದವುಗಳನ್ನು ಮದುವೆಯ ಸಂದರ್ಭದಲ್ಲಿ ನಡೆಯುತ್ತಿದ್ದವು. ಬರಬರುತ್ತಾ ಮದುವೆಯು ಆಯಿತು ಮದುವೆಯ ವಯಸ್ಸು ಹಣದ ಮೊತ್ತ ವಿಪರೀತವಾಗಿದೆ. ಅವರು ಅಷ್ಟು ವೈಭವದಿಂದ ಮಗಳ ಮದುವೆಯನ್ನು ಮಾಡಿದ್ದಾರೆ ಎಂದರೆ ನಾವಿಷ್ಟು ಹೆಚ್ಚು ಖರ್ಚು ಮಾಡಬೇಕು ಎಂಬ ಸ್ಪರ್ಧೆಯು ಜಾಸ್ತಿಯಾಗಿದೆ. ಮದುವೆಯ ಸಮಯದಲ್ಲಿ ಸಾಮಾನುಗಳೂ ಕೊಟ್ಟರೂ ಅವರಿಗಿಂತ ಬೆಲೆಬಾಳುವ ಸಾಮಾನುಗಳು ಕೊಡಬೇಕು ಇದರಿಂದ ಜನರು ಅವರನ್ನು ಹೊಗಳುವರು ಎಂಬ ಉದ್ದೇಶವನ್ನು ಹೊಂದಿದ್ದಾರೆ.

ವ್ಯಕ್ತಿಯ ಅಂತರಂಗವನ್ನು ತೆರೆದಿಟ್ಟುಕೊಂಡು ಆಲೋಚಿಸಬೇಕು ಶ್ರೀಮಂತರು ಮಾಡುವ ಆಡಂಬರ ಮದುವೆಯಲ್ಲಿ ಮಧ್ಯಮ ವರ್ಗದವರ ಪಾಲಿಗೆ ದೊಡ್ಡ ಕುತ್ತು ಬಂದರೆ ವರಗಳು ತಮ್ಮ ಅತ್ತೆ ಮಾವಂದಿರು ಹೀಗೆ ಕೊಟ್ಟರು ಎಂದು ಕಾಡಿಸುವರು.

- ಮದುವೆಯ ಸಂಬಂಧ ಒಂದು ದಿನದಲ್ಲ ಅದು ಜೀವನದ ಕೊನೆಯವರೆಗೂ ಗಂಡು ಹೆಣ್ಣು ಹೊಂದಿಕೊಂಡು ಹೋಗುವ ಮಧುರ ಬಾಂಧವ್ಯವಾಗಿದೆ.

- ಮದುವೆಯು ಜನ್ಮ ಜನ್ಮಾಂತರಗಳಿಂದ ಸಾಗಿ ಬಂದಿರುವ ಋಣಾನುಬಂಧವೇ ಸರಿ ಎಂದು ಹೇಳಬಹುದು.
- ಮದುವೆ ಎಂಬುವುದು ಕಾಮ ತೃಪ್ತಿಯಲ್ಲ ಎರಡು ಜೀವಗಳ ಭಾವ ಸಂಗಮ ಇದು ಬಿಡಿಸಲಾರದ ನಿಕಟ ಬಾಂಧವ್ಯ
- ಮದುವೆಯಿಂದ ಎರಡು ಬೇರೆ ಮನೆತನಗಳಲ್ಲಿ ಹುಟ್ಟಿ ಬೆಳೆದ ಭಿನ್ನ ಪರಿಸರದ ಇಬ್ಬರು ಅಪರಿಚಿತರನ್ನು ಮದುವೆ ಎಂಬ ಸಂಸ್ಕಾರ ಒಂದುಗೂಡಿಸುತ್ತದೆ.
- ಮದುವೆಯು ಒಂದು ಕಡ್ಡಾಯವಾದ ಸಾಮಾಜಿಕ ಧಾರ್ಮಿಕ ಆಚರಣೆ ಇದು ಒಂದು. ಅದರಲ್ಲಿ ಬರುವ ಪದ್ಧತಿಗಳು ಆಚರಣೆಗಳನ್ನು ಮನಪೂರ್ವಕವಾಗಿ ಅವುಗಳ ಪಾಲನೆ ಮಾಡಬೇಕು
- ಮದುವೆ ಎನ್ನುವ ಧಾರ್ಮಿಕ ವಿಧಿಯು ಮನುಷ್ಯನ ಜೀವನದಲ್ಲಿ ಒಮ್ಮೆ ಮಾತ್ರ ಬರುವಂಥದ್ದು ಆದರೆ ಆತನ/ಆಕೆಯ ಪೂರ್ಣ ಭವಿಷ್ಯವನ್ನೇ ನಿರ್ಧರಿಸುಂತದ್ದು
- ಮದುವೆಯ ಆಚರಣೆಯು ಜೀವನವನ್ನು ಪ್ರವೇಶಿಸುವ ಗಂಡ ಹೆಂಡತಿಯರು ಪರಸ್ಪರ ಅರ್ಥಮಾಡಿಕೊಳ್ಳಲು ಭಾವಾನಾತ್ಮಕವಾಗಿ ಒಂದಾಗಲು ಬೇಕಾದ ಆಚರಣೆ

ಮದುವೆಯ ಸಮಯದಲ್ಲಿ ಪಾಲಿಸಿದ ವಿಧಿ ಆಚರಣೆಗಳು ಬಹುಮುಖ್ಯವಾಗಿ ಅವರ ಮಹತ್ವವನ್ನು ತಿಳಿಸಲಾಗುತ್ತದೆ. ಈ ಧಾರ್ಮಿಕ ಆಚರಣೆ ಕೂಡಿದ "ಜನಪದ ಸಂಪತ್ತು" ಬಗ್ಗೆ ನಾವು ಮಹತ್ವವನ್ನು ಕೊಡಬೇಕು. ಒಟ್ಟಿನಲ್ಲಿ ಮದುವೆಯ ಆಚರಣೆ ವಿಧಿ ವಿಧಾನಗಳು ಬೇರೆ ಬೇರೆ ಸ್ಥಳಗಳಲ್ಲಿ ಗಂಡು ಹೆಣ್ಣುಗಳನ್ನು ಮಿಲನ ಮಾಡುವ ಮತ್ತು ಸಮಾಜದಲ್ಲಿ ಜನಸಂಖ್ಯೆ ಬೆಳೆಸಲು ಮದುವೆಯು ಮುಖ್ಯವಾದ ಅಂಶವಾಗಿದೆ.

ಅನುಬಂಧ

ಮದುವೆ ಕುರಿತು ಹಾಡುಗಳು

ಮದುವೆಯ ಹಾಡು

ಮದುವೆ ಮಾಡಿದರ ಮುತ್ತೈದೆರು ಮಂಗಳಾ ಹಾಡಿದರ

ಹಂದರ ಹಾಕಿದರ। ಮೊದಲು ಹಾಲ್ಗಂಬವ ನಿಲಿಸಿದರ
ಚಂದದಿ ತಳಿರನು। ತಂದು ಕಟ್ಟಿದರ। ಬೀಗರೆಲ್ಲರು ಬಂದರ

ಅರಶಿಣ ಹಚ್ಚಿದರ। ಪರಿಮಳ ಗಂಧವ ಪೂಸಿದರ
ನೆರದ ಸತಿಯರ ಮೋದದಿಂದಲೆ। ಆರತಿ ಬೆಳಗಿದರ।

ಊರಿಗೆ ಉಣಿಸಿದರ। ಕರಿಗಡಬಿನ ಊಟವ ಹಾಕಿದ
ಕರಿದ ಸೆಂಡಗಿ ನೀಡಿ ತುಪ್ಪಕೆ। ಕೊರತಿಯ ಮಾಡಿದರ

ತಕ್ಕ ಸಮಯ ನೋಡಿ ಅಕ್ಕೀ ಕಾಳಿಗೆ ಅಣಿ ಮಾಡಿ
ಅಕ್ಕರದಿಂದಲೆ ಎಲ್ಲರು ಬಂದು। ಅಕ್ಷತೆ ಚೆಲ್ಲಿದರು

ಹಾಡಿದವರು ಗೋದಾವರಿ ಕುಂಬಾರ

ಸೋಬಾನೆ ಪದ

ಹಂದರ ಹಾಕ್ಯಾರ ಹನ್ನೆರಡ ಗಾವಕ್ಕೆ
ಬಿಂಗ ಬೀಶಾರ ತರತರಹಕೆ ಬಿಂಗನ ಬಿಗಿಶಾರ
ತರತರಕ ಈ ಮನೆಯ ಚೊಚ್ಚಲ ಮಗನ ಮದುವಿಯ
ಸೋ ಅನ್ನೀರೆ ಸೋಭಾನವೆನ್ನೀರೆ

ಚಪ್ಪರ ಹಾಕ್ಯಾರ ಇಪ್ಪತ್ ಜಾವಕ್ಕೆ
ಮುತ್ತ ಬಿಗಿಶಾರ ತರತಹ ಮುತತಿನ ಬಿಗಿಶಾರ
ತರತರಹ ಈ ಮನಿಯ ಚೊಚ್ಚಲ ಮಗ ಮದುವಿಯ
ಸೋ ಅನ್ನಿರೆ ಸೋಬಾನವೆನ್ನೀರೆ

ಹಿತ್ತಲದಾಗಿನ ಉತ್ತತ್ತಿ ಗಿಡ ಹತ್ತಿರವ ನೋಡಾರ
ಅಳಿಯಾರ ಚೆಲುವಿಕೆ ಒಪ್ಪದವನ ನನ್ನ ಮಗಳಿಗೆ
ಸೋ ಅನ್ನಿರೆ ಸೋಬಾವೆನ್ನಿರೆ

ಕಣಕ ಕುಟ್ಟುದ ಬಿಟ್ಟು ಆಕಳ ಹಿಂಡುವ ಬಿಟ್ಟು
ಬಾಗಿ ನೋಡ್ಯಾರ ಅಳಿಯಾರ ಚೆಲುವಿಕೆ
ಒಪ್ಪವಾನನ ನನ್ನ ಮಗಳಿಗೆ
ಸೋ ಅನ್ನಿರೆ ಸೋಬಾವೆನ್ನಿರೆ

ಬಾಗಿಲದ ನನ್ನ ಬಳಿ ಬಾಗೀ ನೋಡ್ಯಾರ
ಅಲಿಯಾರ ಚೆಲುವಿಕೆ ಒಪ್ಪದಾನನ ನನ್ನ ಮಗಳಿಗೆ
ಸೋ ಅನ್ನಿರೆ ಸೋಬಾನವೆನ್ನಿರೆ

ಹಂದರದಾಗ ಬಂದ ಬೀಸುವ ಗಾಳಿ
ಇನ್ನೊಂದ ಜಾವ ನಿನಗಾಳಿ
ಕಂದವ್ವನ ದಾರಿ ಕೇಡತೀವಿ ಸೊ ಅನ್ನಿರೆ ಸೋಬಾನ

ಕುಂಬಳಕಾಯಿಗೆ ಕುಡಗೋಲ ಕೊಟ್ಟಾಂಗ
ಕೊಟ್ಟೀವ್ರಿ ನಿಮ್ಮ ಕೈಕಳಗ
ನಾವಿನ್ನ ನಿಮ್ಮ ಸರಿಮಗಳ ಮಡಿ ಸಲಹುವಿರಿ

ಹಾಡಿದವರು : ಶಾಂತಮ್ಮ

ಮದುಮಗಳಿಗೆ ಅರಿಶಿಣ ಹಚ್ಚುವ ಹಾಡು

ಮಂದಗುಮನಿ ಬಾ । ಚಂದಿರ ಮುಖಿ ಬಾ
ಸುಂದರಾಂಗಿ ಬಾರೇ । ಗಂಧವ ಧರಿಸುವೆ
ಚಂದದಿಂದ ನೀ। ಮುಂದೆ ಕೈಯ್ಯ ತಾರೇ

ಮಣಿ ಮಂಚದಿ ಮಂಗಲ। ಸ್ನಾನವ ಮಾಡಿಸುವೆ
ಕುವರಿ ಬಾರೇ। ಹಣೆಗೆ ಕುಂಕುಮ ಹಚ್ಚುವೇ
ಮದುವೆಯ ಹಂದರದೊಳು ನೀರೆ

ಪ್ರೇಮದಿ ಕಟ್ಟುವೆ ಹೂವಿನ ದಂಡೆಯ
ಮುದ್ದು ಮುಖವ ತೋರೆ
ಕಾಮನಂಥ ಗಂಡನ ಕೈ ಹಿಡಿಯಲು
ಕಾಮಿಣಿ ಮಣಿ ಬಾರೆ

ವನಿತಾಮಣಿ ಸೌಭಾಗ್ಯ ಲಕ್ಷ್ಮಿ ನೀ
ನಾಗುಬೇಗ ಬಾರೇ। ಪ್ರಣಯದಕ್ಕೆ ತಂಗಿಯರು ಬಂದಿಹರು
ಮಣಿ ಮಂಚವನೇರೇ
ಕೊರಳಿಗೆ ಕರಿಮಣಿ ಮಂಗಳ ಸೂತ್ರವ।

ಕಟ್ಟಿ ಮೆರೆಯ ಬಾರೇ
ಜರಿಪೀತಾಂಬರ ಜರದ ಕುಪ್ಪಸವ
ತರುಣಿ ಧರಿಸು ಬಾರೇ

ಕರಿಗಮನಿಯೆ ನಿನ। ಗರಿಷಿಣ ಧರಿಸುವೆ
ಸರಸಿಜಾಕ್ಷಿ ಬಾರೇ। ಹರದೆಯರಾನಂದದಿ ಬೆಳಗುವಿರಾ
ರತಿಯ ನಿನಗೆ ನೀರೇ

॥ಚೆನ್ನವ್ವ ಹರಿಜಃನ ॥

ಹಸೆಮಣೆಯ ಸೋಬಾನ ಪದ

ಅಕ್ಕಿಯ ಹಸಿಗೆಯ ಹೊಯ್ದು
ಅಚ್ಚ ಮುತ್ತೈದೆಯರು ಅಕ್ಕಿ ಅಕ್ಕೆಂದರ ಅಕ್ಕಿನ
ಪಾವಿನ ಅಕ್ಕಿ ಬೆಳೆಯೋದು ಮಲೆನಾಡ
ಸೋ ಅನ್ನಿರೆ ಸೋಬಾನವೆನ್ನಿರೆ

ಜೋಳ ರಾಶಿಯ ಹೊಯಿರೆ
ಜೋಡ ಮುತ್ತೈದೆಯರು ಜೋಳ ಜೋಳೆಂದರ
ಜೋಳವ ಪಾವಿನ ಜ್ವಾಳ ಬೆಳೆವುದು ಬೆಳವಲು
ಸೋ ಅನ್ನಿರೆ ಸೋಬಾನವೆನ್ನಿರೆ

ಗೋಧಿಯ ಹಾಸಿ ಹೊಯಿರೆ ಹರದೆ ಮುತ್ತೈದೆಯರು
ಗೋದಿ ಗೋದೆಂದರ ಗೋವಿನ ಪಾವಿನ
ಗೋದಿ ಬೆಲೆವುದು ಎರಿನಾಡ
ಸೋ ಅನ್ನಿರೆ ಸೋಬಾನವೆನ್ನಿರೆ

ಹವಳ ಹಾಸಿಗೆಯಿರೆ ಹರದೆ ಮುತ್ತೈದೆಯರು
ಹವಳ ಹವಳೆಂದರ ಹವಳದ ಪಾವಿನ
ಹವಳ ಬೆಳೆವುದು ಹಡಗಾನ
ಸೋ ಅನ್ನಿರೆ ಸೋಬಾನವೆನ್ನಿರೆ

ಮುತ್ತಿನ ಅಚ್ಚ ಮುತ್ತೈದೆಯರ ಅತ್ತೊಂದು ಮುತ್ತು
ಸಿಡಿಲೆಂದು ಮುತ್ತ ಮುತ್ತ ಅಂದರೆ
ಮುತ್ತಿನ ಪಾವನು ಮುತ್ತ ಬೆಳೆವುದು
ಸಮುದರ ಸೋ ಅನ್ನೀರೆ ಸೋಬಾನವೆನ್ನಿರೆ

ರತ್ನಮ್ಮ–ಮಡಿವಾಳ

ಮುಟ್ಟಗಿ ಶೆಂಡಗಿ

ಶಾವಿಗೆ ಹೋ। ಕರೆಸಿ ಶೆಂಡಗಿ ನ ಒಡೆದು
ಹಸಿಯ ಹಂದರದಾಗ ಹೊರಸಾಕೆ ಮಾಣಿಕಬಾಯಿ ಸಣ್ಣಗೆ ಮುಟ್ಟಿಗಿಯ
ಕಡದಾಳೆ

ಹಸಿಯ ಹಂದರದಾಗ ಹೊರಸಾಕೆ॥
ಹೊರಸಾಕೆ ಮಾಣಿಕಬಾಯಿ
ಕಡಲೆ-ಜೋಳ ಕಲಸಿ ಸಣ್ಣಗೆ ನಾ ಒಡೆದು
ಸಣ್ಣಗೆ ಎಳ್ಳೆ ಶೆಂಡಗಿ ಕಡದಾಳೆ

ಹಸಿಯ ಹಂದರದಾಗ ಹೊರಸಾಕೆ
ಹೊರಸಾಕೆ ಮಾಣಿಕಬಾಯಿ
ಸಣ್ಣನೆಯ ಚಣಗಿ ಸಿಂಕಿಯ ನಾ ಕಲಸಿ
ಸಣ್ಣಗೆ ನಾ ಒಡದಿ ಸಣ್ಣಗೆ ಮುಟ್ಟಿಗೆ
ಕಡದಾಳೆ

ಹಸಿಯ ಹಂದರದಾಗ ಹೊರಸಾಕೆ
ಹೊರಸಾಕೆ ಮಾಣಿಕಬಾಯಿ
ಕಡಲಿ ಸಿಂಕಿಯ ಕಲಸಿ ಸಣ್ಣಗೆ ನಾ ಒಡೆದು
ಸಣ್ಣಗೆ ಎಳ್ಳೆ ಶೆಂಡಗಿ ಕಡದಾಳೆ

ಹಸಿಯ ಹಂದರದಾಗ ಅಕ್ಕಿಯ-ಗೋಧಿಯ
ನಾ ಕಲಸಿ ಸಣ್ಣಾಗಿ ಒಡೆದು
ಸಣ್ಣಗೆ ಶೆಂಡಗಿ ಕಡದಾಳೆ
ಹಸಿಯ ಹಂದರದಾಗ ಮಾಡಾಲೆ ಮಗನ ಮದುವೆಯ

ಹಾಡಿದವರು : ಗುರಮ್ಮ

ಬೀಸುವ ಪದ

ಕುದರೆ ಕೋಗಿಲೆ ಕೊಟ್ಟಿದೆ
ಗುರು ಹಿರಿಯರ ಕರೆಸಿದ
ಗುರುಸ್ವಾಮಿಯ ಕರೆಸಾರೆ
ನನ್ನ ಹಂದರದಾಗ ಗುರು ಸ್ವಾಮಿಯ
ಕರೆಸಾರೆ ಬಾ ನನ್ನ ಸರ್ವಲಗ್ನಕ್ಕೆ ಸುವ್ವಿ ಸುವ್ವಾಲಿ

ಕುದುರೆ ಕೋಗಿಲೆ ಕೊಟ್ಟಿದೆ
ಗುರು ಹಿರಿಯರ ಕರೆಸಿದ
ಅತ್ತಿ-ಮಾವನ ಕರೆಸಿದ
ನನ್ನ ಹಂದರದಾಗ
ಅತ್ತೆಮ್ಮ ಚನ್ನ ಮಾಡುವವರಿಲ್ಲ
ಬಾ ನನ್ನ ಸರ್ವಲಗ್ನಕ ॥ಸುವಿ

ಕುದರೆ ಕೋಗಿಲೆ ಕೊಟ್ಟಿದೆ
ಗುರು-ಹಿರಿಯರ ಕರೆಸಿದ
ನಾದಿನ ಕರೆಸಿದ
ನಾದಿನಿ ಬಾ ನನ್ನ ಸರ್ವಲಗನ್ನಕ್ಕೆ
ಸುವಿಸುವ್ವಾಲಿ

ಕುದರೆ ಕೋಗಿಲೆ ಕೊಟ್ಟಿದ
ಗುರು-ಹಿರಿಯರ ಕರೆಸಿದ
ಗಡಗಿಯ ಮನೆಯಾಗ ನೆಗಣಿಯ ಕರೆಸಿದ
ನೆಗಣಿ ಬಾ ನನ್ನ ಸರ್ವಲಗ್ನಕ್ಕೆ
ಸುವ್ವಿಸುವ್ವಾಲಿ

ಕುದರೆ ಕೋಗಿಲೆ ಕೊಟ್ಟಿದ
ಗುರು-ಹಿರಿಯರ ಕರೆಸಿದ
ಹಂಪರ ಮೇಲಿ ಕೆಳಗಿ ನಂದಿ-ಮೈದಾವೆ
ಅಂದ ಮಾಡಾರೆ ಅಣ್ಣೆಪ್ಪಾ ಮಾಡಾರೆ
ಮಗನ ಮದುವೆಯ॥

ಹಾಡಿದವರು : ರೇಣುಕಾ

ಮಗಳು ಒಪ್ಪಿಸುವುದು

ಒಂದರ ಅಡಿವಿ ಹಾಸಿನ ಒಂದನೇ ಹಚ್ಚಿನೇ
ಒಂದರೆ ಮೇಲೆ ಸಲುಹೀನ
ಒಂದರ ಮೇಲೆ ಸಾಕಿದ ಮಗಳ ಮತ್ತೆ ಉಡಲ್ಲಂತ ಅನ್ನ ಬೇಡ
ಅತ್ತೆಮ್ಮ ನಿನ್ನ ಮಗಳ ಸಮಾನ ತಿಳಿಕೋರೆ॥

ಎರಡ ಅಡವಿ ಹಾಸಿದ ೨ ಹಚ್ಚೇನೆ
೨ ಮಾಡಿ ಸಲುಹೀವನ॥
೨ನೇ ಮಾಡ ಮಾಡಿ ೨ ಸಲ
ಸಾಕಿದ ಮಗಳ ನಿನ್ನ ಮಗಳ ಸಮಾನ ತಿಳಿಕೋರೆ
ನಿನ್ನ ಮಗಳ ಸಮಾನ ಕರೆಕೊರೆ
೩ ಅಡವಿ ಹಾಸಿದ ೩ ಹಚ್ಚಿದೆ
೩ ಮಾಡಿ ಸಲುಹೀವಿದ॥
೩ನೇ ಮಾಡ ಮಾಡಿ ೩ ಸಲ ಸಾಕಿದ ಮಗಳ
ನಿನ್ನ ಮಗನ ಸಮಾನ ತಿಳಿಕೊರೆ
ನಿನ್ನ ಮಗನ ಸರಿ ಕರೆಕೋರೆ

೪ ಅಡವಿ ಹಾಸಿದ ೪ ಹಚ್ಚಿದೇ
೪ ಮಾಡಿ ಸಲು ಹೀವಿದ
೪ನೇ ಮಾಡ ಮಾಡಿ ೪ ಸಲುಹಿ ಸಾಕಿದ
ನಿನ್ನ ಮಗಳ ಸರಿ ತಿಳಿಕೋರೆ
ನಿನ್ನ ಮಗನ ಸರಿ ಕರೆಕೋರೆ

೫ ಅಡವಿ ಹಾಸಿದ ೫ ಹಚ್ಚಿದೇ
೫ ಮಡಿ ಸಲು ಹೀವಿದ
೫ನೇ ಮಾಡ ಮಾಡಿ ೫ ಸಲುಹಿ ಸಾಕಿದ ಮಗಳ
ನಿನ್ನ ಮಗಳ ಸರಿ ತಿಳಿಕೋರೆ
ನಿನ್ನ ಮಗನ ಸರಿ ಕರೆಕೋರೆ

ಹಾಡಿದವರು : ತೇಜಮ್ಮ

ಸೋಬಾನ ಪದ

ತಾಯಿ ಸರಸ್ವತಿ ವಿದ್ಯಾ ಕೊಡಪುತಿ
ಕಂದನ ಮೇಲೆ ಇರೇ ಪ್ರೀತಿ
ಸೋಬಾನ ನವೇ

ತಾಯಿ ಸರಸ್ವತಿ ತಮ್ಮ ಗಣಪತಿ
ನೋಡ ಕಟ್ಟಾರೆ ದೊಡ್ಡ ಶಾರ
ಸೋಬಾನ ನವೇ

ಪಂಚ ಕಲ್ಯಾಣ ಕುದರೆ ಆತ್ಮ ರಾಜರೆ
ಸರಿ ತಂಗ ಬಿಸಿದಾರೆ ಬೀಗತರ
ಸೋಬಾನ ನವೇ

ಪಂಚ ಅಂಬ್ರುತ ಬಾಣ ನವದಾರಿ ಪಟ್ಟಣ
ಕೋಟಿ ಕಟ್ಟಸಾರೆ ಸುಕಜಾಣ
ಸೋಬಾನ ನವೇ

ಅತ್ತೆ ಮಾವನ ಪಾದ ತೊತ್ತಾಗಿ ಕೋಳಿ ಮಗಳೆ
ಮತ್ತೆ ನಾದನಿ ಸಿರಿ ಪದ
ಸೋಬಾನ ನವೇ

ಮತ್ತೆನೆ ನಾದಿನಿ ಸೀರಿ ಪಾದ ತೊಳೆದಾರೆ
ಮುತ್ತೈದೆತನ ಘನವಾಗಿ
ಸೊಬಾನ ನವೇ

ತರತರದ ಬಾಜವ ತರಿಸಿ ಜ ಮುತ್ತೈದರ
ಕರೆಸಿ ಕುರಜಯು ಮೇಲೆ ಕೊಡಾಸಿರೆ
ಸೋಬಾ ನವೆ

ಮನೆ ಎಂಬ ಮಂಚವ ಹಕಿ ದಿಡ ಎಂಬ
ಹಾಸಿಗೆ ಹಚ್ಚಿ ನುಡಿಯ ಕರೆ ಎಂಬ ಹಾಸಿಕ ಹಂಚಿರೇ
ಸೋಬಾನವೆ

ಹಾಡಿದವರು : ಮೀರಾಬಾಯಿ

ಮದುವೆಯ ನಂಬಿಕೆಗಳು

ಮದುವೆಗೆ ಸಂಬಂಧಿಸಿದಂತೆ ನೂರಾರು ನಂಬಿಕೆಗಳು ಕರ್ನಾಟಕದಲ್ಲಿವೆ. ಮದುವೆಯ ದಿನ ಮಳೆ ಬಂದರೆ ಗಂಡು ಹೆಣ್ಣು ಅಕ್ಕಿ ತಿಂದಿದ್ದಾರೆಂದು ಹೇಳುತ್ತಾರೆ. ಲಗ್ನವಾದ ಮೊದಲನೇ ವರ್ಷದಲ್ಲಿ ಮನೆ ಕಟ್ಟಬಾರದು ಮದುವೆಯಾದ ವರ್ಷವೇ ಮೂರು ತಲೆ ಕಾಣಬಾರದು ಕಂಡರೆ ಅವ್ವನಿಗೂ ಅಪ್ಪನಿಗೂ ಕೆಡಕು ಇತ್ಯಾದ (ಕನ್ನಡ ವಿಷಯ ವಿಶ್ವಕೋಶ ಪು.ಸಂ. ೫೯೧) ೨೦೦೬ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ

ಸುವರ್ಣ ಜಾನಪದ – ರಾಮಲಿಂಗಯ್ಯ ಉಪ್ಪನಕರೆ
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಪು.ಸಂ ೧೮೦–೧೮೧)

ಚೊಚ್ಚಲ ಗಂಡಿಗೂ ಚೊಚ್ಚಲ ಹೆಣ್ಣಿಗೂ ಮದುವೆ ಮಾಡ ಬಾರದು ಮಾಡಲೇ ಬೇಕಾದರೆ ಗಂಡಿನ ಮನೆಯ ಒಂದು ಹಸುವಿಗೂ ಹೆಣ್ಣಿನ ಮನೆಯ ಒಂದು ಕರುವಿಗೂ ಮದುವೆ ಮಾಡಿ ಆನಂತರ ಅವರಿಬ್ಬರ ಮದುವೆ ಮಾಡಬೇಕು. ಎಂಬುವುದು ಹಿರಿಯ ವಾದ.

ಹೆಂಡತಿ ಸತ್ತರೆ ವರ್ಷ ತುಂಬುವ ಮೊದಲೇ ಮರು ಮದುವೆಯಾಗಬೇಕು ಇಲ್ಲದೆ ಹೋದರೆ ೩ ವರ್ಷದೊಳಗೆ ಮದುವೆಯಾಗುವಂತಿಲ್ಲ. ಅವಳಿ ಮಕ್ಕಳಲ್ಲಿ ಒಬ್ಬರಿಗೆ ಮದುವೆಯಾಗುವ ಸಂಭ್ರಮ ಬಂದರೆ ಮತ್ತೊಬ್ಬರನ್ನು ಪಂಜರದಲ್ಲಿಲಡಬೇಕು.

ಮದುವೆಯಾದ ಒಂದು ವರ್ಷದವರೆಗೂ ಅತ್ತೆ ಅಳಿಯನಿಗೆ ಹಿಟ್ಟಿಕ್ಕಬಾರದು (ಊಟ ಬಡಿಸಬಾರದು) ಮದುವೆ ಬಗೆಗಿರುವ ಬಹಳಷ್ಟು ನಂಬಿಕೆಗಳು ಅರ್ಥವಿಲ್ಲದವು ಚೊಚ್ಚಲ ಗಂಡು ಹೆಣ್ಣಿನ ಮದುವೆಗೆ ಹಸು, ಕರು ಮದುವೆ ಅನಗತ್ಯ, ಹೆಂಡತಿ ಸತ್ತರೆ ಬಯಕೆಯಾದಾಗ ಮದುವೆಯಾಗಬಹುದು. ಅವಳಿ ಮಕ್ಕಳ ಮದುವೆಯಲ್ಲಿ ಮತ್ತೊಬ್ಬರನ್ನು ಪಂಜರದಲ್ಲಿಇಡಬೇಕಾಗಿಲ್ಲ. ಮದುವೆಯಾದ ಒಂದು ವರ್ಷದವರೆಗೂ ಅತ್ತೆ ಅಳಿಯನಿಗೆ ಊಟಕ್ಕೆ ಬಡಿಸಬಾರದೆಂದೇನೂ ಇಲ್ಲ. ಹಿಂದಿನವರು ಸಾಮಾನ್ಯವಾಗಿ ಋತುವಾಗುವ ಮೊದಲೇ ಹೆಣ್ಣಿನ ಮದುವೆ ಮಾಡುತ್ತಿದ್ದು ತಾಯಿಯ ಮುಖ ಮಗಳ ಮುಖವನ್ನೇ ಹೋಲುವುದರಿಂದ ಹೆಂಡತಿಯ ಬಯಕೆಯಲ್ಲಿರುವ ಅಳಿಯನಿಗೆ ಅತ್ತೆ ಹೆಂಡತಿಯಂತೆ ಕಾಣಬಹುದೆಂದು ಹೀಗೆನ್ನುತ್ತರೆ. ಇದೇ ಭಾವನೆಯಿಂದ ಅಷಾಢ ಮಾಸದಲ್ಲಿ ಸೊಸೆ ಅತ್ತೆ ಮುಖ ನೋಡಬಾರದೆನ್ನುತ್ತಾರೆ ಅಷಾಢ ಮಾಸದಲ್ಲಿ ಕಾಮಾಪಾಂಚಲ್ಯ ಜಾಸ್ತಿಯಿಂದ್ದು ಆ ಕಾಲದಲ್ಲಿ ಪ್ರಸ್ತವಾಗದಿದರೆ

ಹುಡುಗಿಯನ್ನು ಗಂಡನ ಮನೆಯಲ್ಲಿ ಬಿಡುವುದಿಲ್ಲ. ಅಳಿಯ ಅತ್ತೆ ಮನೆಗೆ ಬರಬಾರದೆಂದೂ ಕೂಡ ನಂಬಿಕೆಯಿದೆ.

ಸಾಮಾನ್ಯವಾಗಿ ಗಂಡಿಗಿಂತಲೂ ಕಿರಿಯಳಾದ ಹೆಣ್ಣನ್ನು ಹುಡುಕುವ ಸಂಪ್ರದಾಯ ನಮ್ಮಲ್ಲಿದೆ ಇದು ಸರಿ ಸಾಮಾನ್ಯವಾಗಿ ಹೆಣ್ಣು ೧೩, ೧೪, ವಯಸ್ಸಿಗೂ ಗಂಡು ೨೦–೨೨ರ ವಯಸ್ಸಿನಲ್ಲಿ ನಿಂತು ಆಕೆ ಸಂತಾನ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಹೆಣ್ಣಿನ ವಯಸ್ಸು ೨೦ರ ನಂತರ ಹೆಚ್ಚಾದಂತೆ ನಡುವಿನ ಮೂಳೆ ಬಲಿಯುವುದರಿಂದ ಚೊಚ್ಚಲ ಹೆರಿಗೆ ತೀರ ಕಷ್ಟವಗುತ್ತದೆ ಇದರಿಂದ ಮುಟ್ಟಾದ ತಕ್ಷಣ ಮದುವೆ ಮಾಡಿ ಅವಳನ್ನು ಮಕ್ಕಳು ಹೇರುವ ಯಂತ್ರವಾಗಿಸುವುದು ಇಲ್ಲವೇ ತಡವಾಗಿ ಮಾಡುವುದು ಎರಡು ತಪ್ಪು ಹೆಣ್ಣಿಗೆ ೧೬–೨೦ರ ನಡುವಿನ ವಯಸ್ಸು ಗಂಡಿಗೆ ೨೫ ರಿಂದ ೩೦ರ ನಡುವಿನ ವಯಸ್ಸು ಮದುವೆಗೆ ಪರವಾಗಿಲ್ಲ.

ಆಕರ ಗ್ರಂಥಗಳು

೧) ಭಾರತೀಯ ಸಾಮಾಜಿಕ ಅಧ್ಯಯನ ಬಿ. ಚಂದ್ರಶೇಖರ ೧೯೯೭

೨) ಕನ್ನಡ ಜಾನಪದ ವಿಶ್ವಕೋಶ ಚಂದ್ರಶೇಖರ ಕಂಬಾರ ಸಂಪುಟ--೭

೩) ಡಾ. ಸಿಂಪಿ ಲಿಂಗಣ್ಣ ಸಮಗ್ರ ಸಂ. ವೀರೇಂದ್ರ ಸಿಂಪಿ ೨೦೦೭
ಜನಪದ ಸಂಪುಟ

೪) ಸಮಗ್ರ ಜಾನಪದ ಸಂಪ್ರಬಂಧ ಡಾ. ಚೆನ್ನಣ್ಣ ವಾಲೀಕಾರ ಸಂಪುಟ
೨೦೦೭

೫) ಜಾನಪದ ಅಧ್ಯಯನ ದೇ. ಜವರೇಗೌಡ

೬) ಕನ್ನಡ ವಿಷಯ ವಿಶ್ವಕೋಶ ೨೦೦೬

೭) ಶ್ರೀ ವೀರಭದ್ರ ದೇವರ ವಡಪುಗಳು ಸಂಕ್ರಪ್ಪ ಬಸಪ್ಪ ತೊಂಡಿಹಾಳ
೩
ಮುದ್ರಣ ೨೦೦೨

೮) ಚಾಜದ ಹಾಡುಗಳು–ಶಶಿಕಲಾ

೯) ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿವಾಹ ಪದ್ಧತಿ
ಡಾ.ಎಲ್ ರಾಜಶೇಖರಯ್ಯ ೨೦೦೨

೫) ವಕ್ತಾರರ ಪಟ್ಟಿ

೧)	ಹೆಸರು	ಮಾಣೆಮ್ಮಾ
	ಊರು	ತಾಳಮಂಡಗಿ
	ವಯಸ್ಸು	೭೫
	ವೃತ್ತಿ	ವ್ಯವಸಾಯ
	ಶಿಕ್ಷಣ	ಅವಿದ್ಯಾವಂತೆ
೨)	ಹೆಸರು	ಶೋಭಾ
	ಊರು	ಬೀದರ
	ವಯಸ್ಸು	೫೦
	ವೃತ್ತಿ	ಗೃಹಿಣಿ
	ಶಿಕ್ಷಣ	ಎಸ್.ಎಸ್.ಎಲ್.ಸಿ
೩)	ಹೆಸರು	ರೇಣುಕಾ
	ಊರು	ಕುಂಬರವಾಡ
	ವಯಸ್ಸು	೪೫
	ವೃತ್ತಿ	ಗೃಹಿಣಿ
	ಶಿಕ್ಷಣ	ಪಿ.ಯು.ಸಿ.
೪)	ಹೆಸರು	ಮಾಣಿಕಬಾಯಿ
	ಊರು	ಮನ್ನಾಎಖ್ಖೇಳ್ಳಿ
	ವಯಸ್ಸು	೭೦
	ವೃತ್ತಿ	ಗೃಹಿಣಿ
	ಶಿಕ್ಷಣ	೫ನೇ ತರಗತಿ

೫) ಹೆಸರು ರಾಚಮ್ಮ
ಊರು ಹುನಗಿ
ವಯಸ್ಸು ೬೦
ವೃತ್ತಿ ಕೂಲಿ
ಶಿಕ್ಷಣ ಅವಿದ್ಯಾವಂತ

೬) ಹೆಸರು ಮಹಾದೇವಿ
ಊರು ನೌಬಾದ
ವಯಸ್ಸು ೫೫
ವೃತ್ತಿ ಪೂಜಾರಿ
ಶಿಕ್ಷಣ ಅಶಿಕ್ಷಿತೆ

೭) ಹೆಸರು ತೇಜಮ್ಮಾ
ಊರು ಮರಜಾಪೂರ
ವಯಸ್ಸು ೬೦
ಶಿಕ್ಷಣ ಅಶಿಕ್ಷಿತೆ
ವೃತ್ತಿ ಗೃಹಿಣಿ

೮) ಹೆಸರು ಮೀರಾಬಾಯಿ
ಊರು ಚಿದ್ರಿ
ವಯಸ್ಸು ೬೮
ಶಿಕ್ಷಣ ಅಶಿಕ್ಷಿತೆ
ವೃತ್ತಿ ಟೈಲರ್

೯) ಹೆಸರು ಶಾಂತಮ್ಮ
ಊರು ರಾಜಗಿರಾ
ವಯಸ್ಸು ೪೬
ವೃತ್ತಿ ಕಿರಾಣ ಅಂಗಡಿ
ಶಿಕ್ಷಣ ೨ನೇ

೧೦)	ಹೆಸರು	ಭಾಗಮ್ಮ
	ಊರು	ಕಮಠಾಣಾ
	ವಯಸ್ಸು	೬೨
	ವೃತ್ತಿ	ಕೂಲಿ
	ಶಿಕ್ಷಣ	ಅಶಿಕ್ಷಿತೆ
೧೧)	ಹೆಸರು	ಕಮಲಾಬಾಯಿ
	ಊರು	ಬೀದರ ವಿದ್ಯಾನಗರ
	ವಯಸ್ಸು	೬೦
	ವೃತ್ತಿ	ಗೃಹಿಣಿ
	ಶಿಕ್ಷಣ	ಅಶಿಕ್ಷಿತೆ
೧೨)	ಹೆಸರು	ಲಕ್ಷ್ಮಿ
	ಊರು	ಬಗದಲ್ಲ
	ವಯಸ್ಸು	೩೬
	ವೃತ್ತಿ	ಶಿಕ್ಷಕಿ
	ಶಿಕ್ಷಣ	೯ನೇ
೧೩)	ಹೆಸರು	ಮುಕ್ತಾಬಾಯಿ
	ಊರು	ಮದರಗಿ
	ವಯಸ್ಸು	೫೫
	ವೃತ್ತಿ	ವ್ಯವಸಾಯ
	ಶಿಕ್ಷಣ	೫ನೇ
೧೪)	ಹೆಸರು	ಗಂಗಮ್ಮ
	ಊರು	ಹಾಲಹಳ್ಳಿ
	ವಯಸ್ಸು	೪೦
	ವೃತ್ತಿ	ಕಿರಾಣಿ ಅಂಗಡಿ
	ಶಿಕ್ಷಣ	೮ನೇ

೧೫) ಹೆಸರು ಜಗದೇವಿ
ಊರು ತೂಗಾವಂ
ವಯಸ್ಸು ೩೫
ವೃತ್ತಿ ಹಾಲು ಮಾರುವವಳು
ಶಿಕ್ಷಣ ಅಶಿಕ್ಷಿತೆ

೧೬) ಹೆಸರು ನಾಗಮ್ಮ
ಊರು ಸಂಗೋಳಗಿ
ವಯಸ್ಸು ೭೫
ವೃತ್ತಿ ಕೂಲಿ
ಶಿಕ್ಷಣ ಅಶಿಕ್ಷಿತೆ

೧೭) ಹೆಸರು ಬಸಮ್ಮಾ
ಊರು ಕುಂಬರವಾಡ
ವಯಸ್ಸು ೪೮
ವೃತ್ತಿ ಗೃಹಿಣಿ
ಶಿಕ್ಷಣ ಅಶಿಕ್ಷಿತೆ

೧೮) ಹೆಸರು ರೇಣುಕಾ
ಊರು ಸಂತಪೂರ
ವಯಸ್ಸು ೫೦
ವೃತ್ತಿ ಕೃಷಿ
ಶಿಕ್ಷಣ ಅವಿದ್ಯಾವಂತ



ಸಕ್ಕರೆ ಹಾಕುವುದು ಕಾರ್ಯಕ್ರಮ (ಕುಂಕುಮ ಹಚ್ಚುವುದು)



ಶೇಲ್ಯಾ ಟೋಪಿ ಹಾಕುವ ಕಾರ್ಯಕ್ರಮ



ವರನಿಗೆ ವಧುವಿನ ಮನೆಯಲ್ಲಿ ಕರೆದೋಯುವುದು



ಭಾಷಾವತಿಯ ಪೂರ್ವದಲ್ಲಿನ ಪೂಜೆ



ಎಣ್ಣೆ ಹಚ್ಚುವ ಕಾರ್ಯಕ್ರಮ



ಐರಾಣಿ ಕೊಡ ತರುವುದು



ತಾಳಿ ಕಟ್ಟುವುದು



ಧಾರೆಯೆರೆಯುವುದು